ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಶಿವಮೊಗ್ಗ
ಭಾನುವಾರ, 15 ಮಾರ್ಚ್ 2026
ಸಂಪುಟ 16, ಸಂಚಿಕೆ 322, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital



ಬಿಜೆಪಿಯಿಂದ ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಅಮಿತ್ ಶಾ

| ೦೨

ಮೊಜ್ತಬಾ ಮಾಹಿತಿ ನೀಡಿ, 92 ಕೋಟಿ ರೂ. ಪಡೆದುಕೊಳ್ಳಿ!

| ೦೨



ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಶ್ರವಣ

ದಿನದ ಮಾತು

ಆರೋಗ್ಯಕರ ಶರೀರದಲ್ಲಿ ಆರೋಗ್ಯಕರ ಮನಸ್ಸಿರಲೆಂಬುದೇ ನಮ್ಮ ಪ್ರತಿದಿನದ ಪ್ರಾರ್ಥನೆಯಾಗಬೇಕು.

▲ ಸುಭಾಷಿತ

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಯುಗಾದಿ, ರಂಜಾನ್ ಹಿನ್ನೆಲೆ: 2 ಸಾವಿರ ಹೆಚ್ಚುವರಿ ಬಸ್

• **ಬೆಂಗಳೂರು:** ಯುಗಾದಿ ಹಾಗೂ ರಂಜಾನ್ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ 2 ಸಾವಿರ ಹೆಚ್ಚುವರಿ ಕೆಎಸ್ಆರ್‌ಟಿಸಿ ವಾಹನಗಳ ವಿಶೇಷ ಸಾರಿಗೆ ವ್ಯವಸ್ಥೆ ಮಾಡಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಮಾ.18, 19 ಹಾಗೂ 20ರಂದು ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ ಹೆಚ್ಚುವರಿ ಬಸ್ ಹಾಗೂ ರಾಜ್ಯವಲ್ಲದೆ ಹೊರ ರಾಜ್ಯಗಳ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಮಾ.22ರಂದು ವಿಶೇಷ ಬಸ್‌ಗಳು ಸಂಚರಿಸಲಿವೆ. ➡ ಪುಟ ೮

ಎನ್ಎಸ್ಎ ಬಂಧನದಿಂದ ವಾಂಗ್‌ಚುಕ್ ಬಿಡುಗಡೆ

• **ಜೋಧ್‌ಪುರ:** ರಾಷ್ಟ್ರೀಯ ಭದ್ರತಾ ಕಾಯ್ದೆಯಲ್ಲಿ (ಎನ್ಎಸ್ಎ) ಲಭ್ಯವಿರುವ ಅಧಿಕಾರ ಬಳಸಿಕೊಂಡು ಬಂಧಿತರಾಗಿದ್ದ ಹವಾಮಾನ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲು ಕೇಂದ್ರ ಆದೇಶಿಸಿದೆ. ಈ ಬೆನ್ನಲ್ಲೇ ಜೋಧ್‌ಪುರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾಗಿದೆ.

• ಪುಟ ೨

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ: ಮೋದಿ

• ಪುಟ ೨

ಐಎಸ್ಐ ಬೆಂಬಲಿತ ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ

• ಪುಟ ೨

ಹಾರ್ಮುಜ್ ತೆರೆಯದಿದ್ದರೆ ತೈಲ ಘಟಕ ನಾಶ ಶತಃಸಿದ್ಧ

• ಪುಟ ೨

ಖಾರ್ಗ್ ದ್ವೀಪದಲ್ಲಿನ ಇರಾನ್ ಸೇನಾ ನೆಲೆ ಧ್ವಂಸ

• ಪುಟ ೨

ಹಾರ್ಮುಜ್ ತೆರೆಯಲು ಟ್ರಂಪ್ ತಾಕೀತು

• ಪುಟ ೨

ಸಂತ ರವಿದಾಸಗೆ ವಿಶಿಷ್ಟ ಸ್ಥಾನ: ಹೊಸಬಾಳೆ

• ಪುಟ ೮

ಯುಕೆಪಿ ಹಂತ 3ರ ಭೂಪರಿಹಾರ ಒಂದೇ ಬಾರಿಗೆ ಪಾವತಿ
ಪೂರಕ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ: ಮುಖ್ಯಮಂತ್ರಿ

ಒಂದೇ ಬಾರಿ ಪರಿಹಾರ

• **ಬಾಗಲಕೋಟೆ:** ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಭೂಸ್ವಾಧೀನವಾಗುವ ರೈತರಿಗೆ ಪರಿಹಾರ ನೀಡಲು ಈ ಬಾರಿಯ ಬಜೆಟ್‌ದಲ್ಲಿ 3 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದು ಬರುವ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ ರೂ.ಗಳನ್ನು ರೈತರಿಗೆ ಪರಿಹಾರ ನೀಡಲು ತೆಗೆದಿಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಯುಕೆಪಿ ಮೂರನೇ ಹಂತದ ಭೂಸ್ವಾಧೀನವಾಗುವ ರೈತರಿಗೆ ಹಣ ಇಟ್ಟಿಲ್ಲ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿರುವುದು ಸತ್ಯಕ್ಕೆ ದೂರವಾಗಿದೆ. 8 ಗ್ರಾಮಗಳ 951 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ರೈತರಿಗೆ 446 ಕೋಟಿ ರೂ. ಪರಿಹಾರವನ್ನು ಈಗ ನೀಡಲಾಗುತ್ತಿದೆ ಎಂದರು.

ಬಿಜೆಪಿಯವರು ತಮ್ಮ ಅವಧಿಯಲ್ಲಿ ಯುಕೆಪಿ ಯೋಜನೆಗೆ ಪರಿಹಾರ ನೀಡಲು ಆಸಕ್ತಿ ವಹಿಸಲಿಲ್ಲ. ಆದ್ದರಿಂದ ರೈತರು ಭೂಮಿ ನೀಡಲು ಮುಂದೆ ಬರಲಿಲ್ಲ. ಈಗ ರೈತರಿಗೆ ಭೂ ಪರಿಹಾರವನ್ನು ಒಂದೇ ಬಾರಿಗೆ ನೀಡಲು ಕಾಂಗ್ರೆಸ್ ಸರ್ಕಾರ ನಿರ್ಣಯಿಸಿದೆ. ಸ್ವಯಂಪ್ರೇರಣೆಯಿಂದ ಭೂಮಿ ನೀಡುವ ರೈತರಿಗೆ ನೀರಾವರಿ ಜಮೀನಿಗೆ 40 ಲಕ್ಷ ರೂ, ಹಾಗೂ ಖುಷ್ಕಿ ಜಮೀನಿಗೆ 30 ಲಕ್ಷ ರೂ. ನೀಡಲು ಸರ್ಕಾರ ನಿರ್ಣಯಿಸಿದೆ. ಆದರೆ, ಈ ಬಗ್ಗೆ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

ಅನುಮತಿ ದೊರಕಿಲ್ಲ: ಕಾಂಗ್ರೆಸ್ ಸರ್ಕಾರ ಎಂದಿಗೂ ನುಡಿದಂತೆ ನಡೆಯುತ್ತದೆ. ಕೇಂದ್ರಕ್ಕೆ ಹಲವು ಮನವಿಗಳ ನಂತರವೂ ಯುಕೆಪಿ, ಮಹದಾಯಿ ಸೇರಿದಂತೆ ಹಲವು ನೀರಾವರಿ ಯೋಜನೆಗೆ ಬೇಕಾದ ಅಗತ್ಯ ಅನುಮತಿಗಳನ್ನು ಕೇಂದ್ರ ಸರ್ಕಾರ ಇದುವರೆಗೆ ನೀಡಿಲ್ಲ. ಆದರೆ, ನಮ್ಮ ಸರ್ಕಾರ ಉತ್ತರ ಕರ್ನಾಟಕದ ಜನತೆಗೆ ನ್ಯಾಯ ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರ್ಕಾರ ಬದ್ಧವಾಗಿದೆ ಎಂದರು.



ಉಪಚುನಾವಣೆ ಗಿಮಿಕ್ ಅಲ್ಲ

ಬಾಗಲಕೋಟೆ ಸರ್ಕಾರಿ ಮೆಡಿಕಲ್ ಕಾಲೇಜಿನ ಶಂಕುಸ್ಥಾಪನೆಯಾಗಲು ಎಚ್.ವೈ.ಮೇಟಿಯವರೇ ಕಾರಣ. ಮೇಟಿಯವರ ಕನಸು ಇಂದು ನನಸಾಗಿದೆ. ಈ ಭಾಗದ ಜನರಿಗೆ ಆರೋಗ್ಯ ಸೇವೆ ನೀಡಲು ಅವರು ಕಾಳಜಿ ತೆಗೆದುಕೊಂಡಿದ್ದರು. ಅವರ ಆಶಯದಂತೆ ಇವತ್ತು ಮೆಡಿಕಲ್ ಕಾಲೇಜ್ ಆರಂಭವಾಗುತ್ತಿದೆ. ಇದು ಉಪ ಚುನಾವಣೆಯ ಕಾರಣಕ್ಕಾಗಿ ಅಲ್ಲ ಎಂದು ಸ್ಪಷ್ಟಪಡಿಸಿದರು. ಪ್ರತಿ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಹಾಗೂ ಟ್ರಾಮಾ ಸೆಂಟರ್ ಸ್ಥಾಪನೆಯ ಉದ್ದೇಶವಿದ್ದು, ಈಗಾಗಲೇ ಸುಮಾರು 25 ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ವರ್ಷ ಇಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ಆರೋಪ ಸುಳ್ಳು

ಗ್ಯಾರಂಟಿ ಯೋಜನೆಗಳಿಂದಾಗಿ ಸರ್ಕಾರದಲ್ಲಿ ಅಭಿವೃದ್ಧಿಗೆ ಹಣವಿಲ್ಲ ಎಂದು ಬಿಜೆಪಿಯವರು ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಮಾತು. ನಮ್ಮ ಸರ್ಕಾರ ಗ್ಯಾರಂಟಿ ಹಾಗೂ ಅಭಿವೃದ್ಧಿಯನ್ನು ಸಮಾನ ಆದ್ಯತೆ ನೀಡುತ್ತಿದ್ದೇವೆ. ಪ್ರತಿ ವರ್ಷ ಗ್ಯಾರಂಟಿಗಳಿಗೆ ಸುಮಾರು 50 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಇದುವರೆಗೆ 1.22 ಲಕ್ಷ ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಬಿಜೆಪಿಯವರು ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ, ಬಾಗಲಕೋಟೆಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಲಿಲ್ಲ. ಜಾತಿ ಧರ್ಮಗಳ ಮಧ್ಯೆ ವೈಮನಸ್ಸು ತರುವುದು ಅವರ ದುರಾಲೋಚನೆಯಾಗಿದೆ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವ ಎಂ.ಬಿ.ಪಾಟೀಲ, ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣ ಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಗ್ಯಾರಂಟಿ ಯೋಜನೆ ಅಧ್ಯಕ್ಷ ಅನಿಲ ದಡ್ಡಿ ಇದ್ದರು.

ಇರಾನ್‌ನ ಕುದ್ಸ್ ಮೆರವಣಿಗೆ ವೇಳೆ ಘಟನೆ

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

• **ಟೆಹ್ರಾನ್:** ಇರಾನ್ ಮತ್ತು ಅಮೆರಿಕ–ಇಸ್ರೇಲ್ ಮೈತ್ರಿಕೂಟದ ನಡುವಿನ ಸಂಘರ್ಷವು ಎರಡನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಶುಕ್ರವಾರ ಇರಾನ್ ರಾಜಧಾನಿ ಟೆಹ್ರಾನ್‌ನ ಕೇಂದ್ರಭಾಗದಲ್ಲಿ ಭೀಕರ ಸ್ಫೋಟ ಸಂಭವಿಸಿದೆ. ಸಾವಿರಾರು ಜನರು ಜಮಾಯಿಸಿದ್ದ ಫಿರ್ದೋಸಿ ಚೌಕದ ವಾರ್ಷಿಕ ಕುದ್ಸ್ ದಿನದ ಮೆರವಣಿಗೆ ವೇಳೆ ಈ ಸ್ಫೋಟ ಸಂಭವಿಸಿದೆ ಎಂದು ತಿಳಿದುಬಂದಿದೆ.

ಫಿರ್ದೋಸಿ ಚೌಕದ ಮೇಲೆ ದಾಳಿ: ದಾಳಿಗೂ ಮುನ್ನ ಇಸ್ರೇಲ್ ತನ್ನ ಫಾರ್ಸಿ ಸಾಮಾಜಿಕ ಮಾಧ್ಯಮ ಖಾತೆಯ ಮೂಲಕ ಎಚ್ಚರಿಕೆ ನೀಡಿತ್ತು. ಮೆರವಣಿಗೆಯಲ್ಲಿ ಇರಾನ್ ನ್ಯಾಯಾಂಗ ಮುಖ್ಯಸ್ಥ ಗುಲಾಮ್ ಹೊಸೈನ್ ಮೊಹ್ಸೇನಿ ಎಜೆ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಸ್ಫೋಟದ ನಂತರ ಈ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿದ್ದು ಕಂಡುಬಂದರೂ, ಯಾವುದೇ ಪ್ರಾಣ ಹಾನಿಯ ಬಗ್ಗೆ ತಕ್ಷಣದ ಮಾಹಿತಿ ಲಭ್ಯವಾಗಿಲ್ಲ. ➡ ಪುಟ ೮



ದುಬೈ ಅಮೆರಿಕ ರಾಯಭಾರ ಕಚೇರಿ ಮೇಲೂ ದಾಳಿ

ದುಬೈ ಮತ್ತು ಇರಾಕ್‌ನ ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಮೇಲೆ ಭೀಕರ ದಾಳಿಗಳು ನಡೆದಿವೆ ಎಂದು ಶನಿವಾರ ವರದಿಯಾಗಿದೆ. ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರದ ಹೃದಯಭಾಗದಲ್ಲಿರುವ ಕಟ್ಟಡವೊಂದಕ್ಕೆ ಆಕಾಶದಲ್ಲಿ ಹೊಡೆದುರುಳಿಸಲಾದ ಕ್ಷಿಪಣಿಯ ಅವಶೇಷಗಳು ಬಂದು ಬಡಿದಿವೆ. ಕಳೆದ 24 ಗಂಟೆಗಳಲ್ಲಿ ದುಬೈ ಮೇಲೆ ನಡೆದ ಎರಡನೇ ದಾಳಿ ಇದಾಗಿದೆ. ಯಾವುದೇ ಪ್ರಾಣಹಾನಿ ಅಥವಾ ಬೆಂಕಿ ಅವಘಡ ಸಂಭವಿಸಿಲ್ಲ ಎಂದು ಮಾಧ್ಯಮ ಕಚೇರಿ ಖಚಿತಪಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

• ಪುಟ ೮

ಅಮೆರಿಕ-ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

• **ವಾಷಿಂಗ್ಟನ್:** ಇರಾನ್ ಸಂಘರ್ಷದ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉನ್ನತ ಮಟ್ಟದ ಶೃಂಗಸಭೆ ನಡೆಸಲು ಪ್ರಯತ್ನಿಸುತ್ತಿರುವ ಬೆನ್ನಲ್ಲೇ, ಶನಿವಾರ ಉತ್ತರ ಕೊರಿಯಾ ಹತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾವಣೆ ಮಾಡುವ ಮೂಲಕ ಸವಾಲು ಹಾಕಿದೆ.

ಕ್ಷಿಪಣಿ ಪ್ರಚೋದನೆ: ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಜಂಟಿ ಮಿಲಿಟರಿ ವ್ಯಾಯಾಮದ ಸಮಯದಲ್ಲಿ ಈ ಉಡಾವಣೆ ಮಾಡಲಾಗಿದೆ ಎಂದು ವರದಿಯಾಗಿದೆ. ಒಂದು ಕ್ಷಿಪಣಿ ಟೋಕಿಯೊದ ವಿಶೇಷ ಆರ್ಥಿಕ ವಲಯದ ಹೊರಗಿನ ಸಮುದ್ರದಲ್ಲಿ ಬಿದ್ದಿದೆ ಎಂದು ವರದಿಯಾಗಿದೆ. ಈ ಪರೀಕ್ಷೆಗಳು ಪೆಂಟಗನ್‌ನ 'ಗೋಲ್ಡನ್ ಡೋಮ್' ರಕ್ಷಣಾ ವ್ಯವಸ್ಥೆಗೆ ನೇರ ಸವಾಲು ಎಂದು ವಿಶ್ಲೇಷಿಸಲಾಗುತ್ತಿದೆ. ➡ ಪುಟ ೮

₹18,680 ಕೋಟಿ ಸಂಪರ್ಕ ಯೋಜನೆಗೆ ಮೋದಿ ಚಾಲನೆ

ನುಸುಳುಕೋರರಿಗೆ ಟಿಎಂಸಿ ರಕ್ಷಕ

• **ಕೋಲ್ಕತಾ:** ಆಡಳಿತಾರೂಢ ಟಿಎಂಸಿ ತನ್ನ ಆಡಳಿತದಲ್ಲಿ ಅನಿಯಂತ್ರಿತ ಅಕ್ರಮ ವಲಸೆಯು ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಜನಸಂಖ್ಯಾ ಚಿತ್ರಣವನ್ನೇ ಬದಲಾಯಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಗುಡುಗಿದ್ದಾರೆ. ನುಸುಳುಕೋರರ ಮತ ಬ್ಯಾಂಕ್ ರಕ್ಷಿಸಲು ಎಸ್ಐಆರ್‌ನ್ನೂ ವಿರೋಧಿಸುತ್ತಲೇ ಬಂದಿದೆ ಎಂದು ಆರೋಪಿಸಿದ್ದಾರೆ. ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ, ಟಿಎಂಸಿ ಸಾಂವಿಧಾನಿಕ ಸಂಸ್ಥೆಗಳನ್ನು ಅವಮಾನಿಸುತ್ತಿದೆ ಎಂದು ಆರೋಪಿಸಿದರು. ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಕೌಂಟ್‌ಡೌನ್ ಪ್ರಾರಂಭವಾಗಿದೆ ಎಂದು ಹೇಳಿದರು. ➡ ಪುಟ ೮



ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ, ಘರ್ಷಣೆ

ಪಶ್ಚಿಮಬಂಗಾಳದಲ್ಲಿ ಆಳುವ ಟಿಎಂಸಿಯ ಗೂಂಡಾಗಿರಿ ಮುಂದುವರಿದಿದ್ದು, ಶನಿವಾರ ಕೇಂದ್ರ ಕೋಲ್ಕತಾದಲ್ಲಿ ಬಿಜೆಪಿ ಬೆಂಬಲಿಗರ ಮೇಲೆ ಟಿಎಂಸಿ ಗೂಂಡಾಗಳು ಕಲ್ಲು ತೂರಾಟ ನಡೆಸಿದಾಗ ಘರ್ಷಣೆ ಸ್ಫೋಟಿಸಿದೆ. ➡ ಪುಟ ೮

ಪಾಕ್, ಬಾಂಗ್ಲಾ ವಲಸಿಗರಿಂದ ದೇಶಕ್ಕೆ ಅಪಾಯ: ಅಶೋಕ

ಬಿಜೆಪಿಯಿಂದ ಎಸ್ಐಆರ್ ಕಚೇರಿ

• **ಬೆಂಗಳೂರು:** ರಾಜ್ಯ ಬಿಜೆಪಿ ಕಚೇರಿಯಲ್ಲಿ ಶನಿವಾರ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಗೆ (ಎಸ್ಐಆರ್) ಸಂಬಂಧಿಸಿದ ಕಚೇರಿ ಉದ್ಘಾಟಿಸಲಾಯಿತು. ಈ ವೇಳೆ ಎಸ್ಐಆರ್ ಕುರಿತ ರಾಜ್ಯ ಕಾರ್ಯಾಗಾರ ನಡೆಯಿತು. ಎಸ್ಐಆರ್ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತೆಗಳ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಯಿತು.

ಈ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಪಾಕಿಸ್ತಾನ, ಬಾಂಗ್ಲಾ ದೇಶದವರು ಬಹಳಷ್ಟು ಜನರು ಕರ್ನಾಟಕಕ್ಕೆ ಬಂದಿದ್ದಾರೆ. ಅವರು ಈ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡರೆ ಕಾಯಂ ನಾಗರಿಕರಾಗುತ್ತಾರೆ. ➡ ಪುಟ ೮



ಔಟ್ ಗೋಯಿಂಗ್ ಸಿಎಂ: ಛಲವಾದಿ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆಗೆ ಸಿದ್ಧರಾಗುತ್ತಿದ್ದಾರೆ, ಅವರು ಔಟ್ ಗೋಯಿಂಗ್ ಸಿಎಂ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು. ➡ ಪುಟ ೮

ಮಂಡ್ಯದಲ್ಲಿ ವಾಹನ ಪರೀಕ್ಷೆ

• **ಮಂಡ್ಯ:** ಜಿಲ್ಲೆಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಆಟೊಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾದಿಂದ ವಾಹನಗಳ ಪರೀಕ್ಷೆ, ಪ್ರಮಾಣೀಕರಣ ಮತ್ತು ತಾಂತ್ರಿಕ ಸಂಶೋಧನೆಗಳನ್ನು ಇಲ್ಲಿಯೇ ನಡೆಸಲಾಗುವುದು ಎಂದು ಕೇಂದ್ರ ಭಾರೀ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಆಟೊಮೋಟಿವ್ ಇಂಡಿಯಾದಿಂದ ಸಂಶೋಧನೆ: ಎಚ್‌ಡಿಕೆ

ತಾಲೂಕಿನ ವಿ.ಸಿ.ಫಾರಂನಲ್ಲಿ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಲ್ಲಿ ನಿರ್ಮಾಣವಾಗಲಿರುವ ಒಳಾಂಗಣ ಕ್ರೀಡಾಂಗಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಕರ್ನಾಟಕದಲ್ಲಿ ವಾಹನಗಳ ಪರೀಕ್ಷಾ ಕೇಂದ್ರದ ಕೊರತೆ ಇತ್ತು. ಇಲ್ಲಿ ಉತ್ಪಾದನೆಯಾದ ವಾಹನಗಳನ್ನು ಪರೀಕ್ಷೆಗಾಗಿ ಪೂನಾ ಅಥವಾ ಚೆನ್ನೈಗೆ ಕೊಂಡೊಯ್ಯಬೇಕಿತ್ತು. ➡ ಪುಟ ೮

ಎಲ್‌ಪಿಜಿ ಅಭಾವ ಹಿನ್ನೆಲೆ | ಹೋಟೆಲ್‌ಗಳಿಗೆ ಪೂರೈಕೆ

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

• **ಬೆಂಗಳೂರು:** ಗ್ಯಾಸ್ ಬಿಕ್ಕಟ್ಟಿನ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿ ಜೈವಿಕ ಅನಿಲ ಘಟಕಗಳನ್ನು ಸ್ಥಾಪಿಸಿ, ಬಯೋಗ್ಯಾಸ್ ಉತ್ಪಾದನೆ ಚಿಂತನೆ ಮುನ್ನೆಲೆಗೆ ಬಂದಿದೆ. ಇದನ್ನೇ ನಗರದ ಹೋಟೆಲ್‌ಗಳಿಗೆ ಸರಬರಾಜು ಮಾಡುವ ಕ್ರಮಕ್ಕೆ ಮುಂದಾಗಿದೆ.

ಕೋರಮಂಗಲದಲ್ಲಿರುವ ಜೈವಿಕ ಅನಿಲ ಘಟಕ(ಕಸ-ರಸ ಘಟಕ)ದಲ್ಲಿ 10 ಟನ್ ಬಯೋ ಗ್ಯಾಸ್ ಉತ್ಪಾದಿಸಿ ಪೈಪ್ ಮೂಲಕ ನೇರವಾಗಿ ಹತ್ತಿರದ ಹೋಟೆಲ್‌ಗೆ ವಿತರಣೆ ಮಾಡಲಾಗುತ್ತಿದೆ. ಆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಜಿಬಿಎ ಮುಂದಾಗಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲು ವಿವಿಧ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ. 12 ಬಯೋಗ್ಯಾಸ್ ಘಟಕಗಳಲ್ಲಿ 6 ಘಟಕಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಘಟಕದಲ್ಲಿ ದಿನಕ್ಕೆ 5 ಟನ್ ಹಸಿ ತ್ಯಾಜ್ಯ ಸಂಸ್ಕರಿಸಿ ಒಟ್ಟಾರೆ ಸುಮಾರು 30 ಟನ್ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲಾಗುತ್ತಿದೆ. ಉಳಿದ 6 ಘಟಕಗಳಲ್ಲಿ ನವೀಕರಣ ಕಾಮಗಾರಿ ನಡೆಯುತ್ತಿದೆ. ➡ ಪುಟ ೮



- ಪ್ರಸ್ತುತ ಪರಿಸ್ಥಿತಿಯಲ್ಲಿ ಸಾರ್ವಜನಿಕರು ಹಾಗೂ ಹೋಟೆಲ್ ಮಾಲಿಕರು ತಮ್ಮ ಆವರಣದಲ್ಲಿಯೇ ವಿಕೇಂದ್ರೀಕೃತ ಬಯೋಗ್ಯಾಸ್ ಘಟಕಗಳನ್ನು ಸ್ಥಾಪಿಸಿಕೊಳ್ಳಲು ಜಿಬಿಎ ಮನವಿ
- ಮನೆಯಲ್ಲೇ ಉತ್ಪತ್ತಿಯಾಗುವ ಹಸಿ ತ್ಯಾಜ್ಯದಿಂದ ಗ್ಯಾಸ್ ಉತ್ಪಾದಿಸಿ ಅಡುಗೆ ಇಂಧನವಾಗಿ ಬಳಸಬಹುದು
- ಮನೆಮಟ್ಟದ ಘಟಕ ನಿರ್ಮಾಣಕ್ಕೆ ಸುಮಾರು ರೂ.20,000 ವೆಚ್ಚವಾಗಬಹುದು.

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಲಭ್ಯ

• **ಹೊಸದಿಲ್ಲಿ:** ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನಾಗರಿಕರಿಗೆ ಭರವಸೆ ನೀಡಿದೆ.

• ಪುಟ ೨

ಆಫ್ಘನ್ ಮೇಲೆ ಪಾಕ್ ಕ್ಷಿಪಣಿ ದಾಳಿ

• **ಕಾಬೂಲ್:** ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನಿ ಪಡೆಗಳಿಂದ ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದ ಮೇಲೆ 270ಕ್ಕೂ ಹೆಚ್ಚು ರಾಕೆಟ್ ಮತ್ತು ಫಿರಂಗಿ ಗುಂಡುಗಳನ್ನು ಹಾರಿಸಲಾಗಿದ್ದು, ಗಡಿ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ.

• ಪುಟ ೨

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,75,000**(2,80,000) ಅಪರಂಜಿ ಚಿನ್ನ: **1,59,660**(1,60,690) ಆಭರಣ ಚಿನ್ನ: **1,46,350**(1,47,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹92.54

ಕಿರುಸುದ್ದಿ

ಕಡೂರು ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಿದ್ಧತೆ

ಕಡೂರು: ಶೈಕ್ಷಣಿಕ ವಲಯದಲ್ಲಿ 63 ಪ್ರೌಢಶಾಲೆಗಳಿವೆ,15 ಸರ್ಕಾರಿ ಪ್ರೌಢಶಾಲೆಗಳು, ಏಳು ಮೊರಾರ್ಜಿ ವಸತಿ ಶಾಲೆಗಳು, 26 ಅನುದಾನಿತ ಪ್ರೌಢಶಾಲೆಗಳು,15 ಅನುದಾನ ರಹಿತ ಶಾಲೆಗಳಿವೆ. ಎಲ್ಲಾ ಪ್ರೌಢಶಾಲೆಗಳಿಂದ 2502 ವಿದ್ಯಾರ್ಥಿಗಳು ಎಲ್ಲಾ ರೀತಿಯ ಪೂರ್ವ ತಯಾರಿಯೊಂದಿಗೆ ಮಾ. 18ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಬರೆಯಲಿದ್ದಾರೆ ಎಂದು ಬಿಇಒ ಎಂ.ಎಚ್.ತಿಮ್ಮಯ್ಯ ತಿಳಿಸಿದ್ದಾರೆ. 1107 ವಿದ್ಯಾರ್ಥಿಗಳು ಹಾಗೂ 1122 ವಿದ್ಯಾರ್ಥಿನಿಯರು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ. ಕಡೂರು ಶೈಕ್ಷಣಿಕ ವಲಯದಲ್ಲಿ 10 ಪರೀಕ್ಷಾ ಕೇಂದ್ರಗಳಿದ್ದು ಕಡೂರು ಪಟ್ಟಣದಲ್ಲಿ ಪದವಿ ಪೂರ್ವ ಕಾಲೇಜು, ವೇದಾವತಿ ಪ್ರೌಢಶಾಲೆ ಹಾಗೂ ಬಿಜಿಎಸ್ ಪ್ರೌಢಶಾಲೆಯನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸಿಂಗಟಗೆರೆ, ಯಗಟಿ, ಚೌಳಹಿರಿಯೂರು, ಹೋಚಿಹಳ್ಳಿ, ಗಿರಿಯಾಪುರ, ಹೇಮಗಿರಿ ಹಾಗೂ ಪಂಚನಹಳ್ಳಿಯ ಪ್ರೌಢಶಾಲೆಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ. 2229 ಹೊಸ ವಿದ್ಯಾರ್ಥಿಗಳಿದ್ದು 213 ಪುನರಾವರ್ತಿತರು ಹಾಗೂ ಖಾಸಗಿ ಅಭ್ಯರ್ಥಿಗಳು 47 ಇದರಲ್ಲಿ 13 ಪುನರಾವರ್ತಿತ ವಿದ್ಯಾರ್ಥಿಗಳು ಇರಲಿದ್ದಾರೆ ಎಂದರು. ಎಲ್ಲಾ ಪರೀಕ್ಷಾ ಕೊಠಡಿಗಳಲ್ಲಿ ಸಿಸಿ ಕ್ಯಾಮೆರಾ ಳವಡಿಸಲಾಗಿದೆ. ಸಂಚಾರಿ ದಳ, ಜಿಲ್ಲಾ ಜಾಗೃತಿ ದಳ ರಚನೆಯಾಗಿದೆ. ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಯಾವುದೇ ಆತಂಕ ಭಯವಿಲ್ಲದೆ ಪರೀಕ್ಷೆಯನ್ನು ಬರೆಯಬೇಕು ಎಂದು ಮಾಹಿತಿ ನೀಡಿದ್ದಾರೆ

ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿ

ಚಿಕ್ಕಮಗಳೂರು: ಬೀರೂರಿನ ಬಿಇಓ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಕಡೂರು ಪಟ್ಟಣದ ನಿವಾಸಿ ಅರುಣ ಎಂಬ ಮಹಿಳೆಯ ಮಾಂಗಲ್ಯ ಸರವನ್ನು ಇಬ್ಬರು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಬೀರೂರು ಬಸ್‌ನಿಲ್ದಾಣದಲ್ಲಿ ನಡೆದಿದೆ. ಪ್ರತಿದಿನ ಕಡೂರಿನಿಂದ ಬೀರೂರಿಗೆ ಪ್ರಯಾಣಿಸುವ ಅರುಣ ಅವರು ಬೀರೂರು ಬಸ್ ನಿಲ್ದಾಣದಲ್ಲಿ ಇಳಿದು ಕಚೇರಿಗೆ ಹೋಗಲು ಬಸವೇಶ್ವರ ಸ್ವಾಮಿಲ್ ಮುಂಭಾಗದ ರಸ್ತೆಯಲ್ಲಿ ನಡೆದು ಹೋಗುವಾಗ ಬೈಕ್‌ನಲ್ಲಿ ಬಂದ ಇಬ್ಬರ ಪೈಕಿ ಹಿಂಬದಿಯಲ್ಲಿದ್ದ ವ್ಯಕ್ತಿ ಕೊರಳಿಗೆ ಕೈ ಹಾಕಿ ಸುಮಾರು 45 ಗ್ರಾಂ ತೂಕವಿರುವ 5.50 ಲಕ್ಷ ರೂ. ಬೆಲೆ ಬಾಳುವ ಎರಡು ಎಳೆಯ ಬಂಗಾರದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಬೀರೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮನೆಗೆ ನುಗ್ಗಿ ಮಹಿಳೆ ಬೆದರಿಸಿ ಚಿನ್ನಾಭರಣ ದೋಚಿದ ಕಳ್ಳರು

ಚಿಕ್ಕಮಗಳೂರು: ಬಾಗಿಲ ಚಿಲಕ ಮುರಿದು ಒಳ ನುಗ್ಗಿದ ಇಬ್ಬರು ಆರೋಪಿಗಳು ಮನೆಯಲ್ಲಿದ್ದ ಒಂಟಿ ಮಹಿಳೆಯನ್ನು ಬೆದರಿಸಿ 3.78 ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣಗಳನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಪಂಚನಹಳ್ಳಿಯಲ್ಲಿ ನಡೆದಿದೆ. ತರಕಾರಿ ವ್ಯಾಪಾರಿ ಪ್ರಕಾಶ್ ಅವರು ಮಾರ್ಚ್ 12 ರಂದು ಗರಗದಹಳ್ಳಿ ಜಾತ್ರೆಗೆ ಹೋಗಿದ್ದ ಸಂದರ್ಭದಲ್ಲಿ ರಾತ್ರಿ 1.40 ರ ಸಮಯದಲ್ಲಿ ಇಬ್ಬರು ಅಪರಿಚಿತರು ಮನೆ ಬಾಗಿಲಿನ ಚಿಲಕ ಮುರಿದು ಒಳನುಗ್ಗಿ ಮನೆಯಲ್ಲಿದ್ದ ಪತ್ನಿ ಗಂಗಮ್ಮ ಅವರಿಗೆ ಬೆದರಿಕೆ ಹಾಕಿ 23 ಗ್ರಾಂ. ಬಂಗಾರದ ಸರ ಕಿತ್ತುಕೊಂಡು ಬೀರುವಿನ ಬಾಗಿಲು ತೆರೆದು ಹುಡುಕಾಡಿ ಅದರಲ್ಲಿದ್ದ ವಾಹನದ ದಾಖಲಾತಿಗಳನ್ನು ಎತ್ತಿಕೊಂಡು ಪರಾರಿಯಾಗಿದ್ದಾರೆ. ಆರೋಪಿಗಳು ಮುಖಕ್ಕೆ ಮುಖಕ್ಕೆ ಮಾಸ್ಕ್, ತಲೆಗೆ ಕ್ಯಾಪ್, ಕೈಗೆ ಹ್ಯಾಂಡ್ ಗ್ಲೌಸ್ ಹಾಕಿಕೊಂಡಿದ್ದರು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಯುವತಿ ನಾಪತ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಕಬ್ಬಿನಹಳ್ಳಿಯ ಕಾಫಿ ತೋಟವೊಂದರಲ್ಲಿ ಕೆಲಸ ಮಾಡುತ್ತಿದ್ದ ವಿಜಯನಗರ ಜಿಲ್ಲೆಯ ಹಮುಮಮ್ಮ ಎಂಬುವವರ ಮಗಳು 17 ವರ್ಷದ ನಂದಿನಿ ಎಂಬಾಕೆ ತೋಟದ ಕೂಲಿ ಲೈನ್ ಮನೆಯಿಂದ ನಾಪತ್ತೆಯಾಗಿರುವುದಾಗಿ ಗ್ರಾಮಾಂತರ ಪೊಲೀಸರಲ್ಲಿ ದೂರು ನೀಡಲಾಗಿದೆ.

ಯುವಕ ನಾಪತ್ತೆ

ಚಿಕ್ಕಮಗಳೂರು: ಕೃಷಿ ಕೆಲಸ ಮಾಡಿಕೊಂಡಿದ್ದ ತಾಲ್ಲೂಕಿನ ಹಳೇ ಲಕ್ಯಾ ಗ್ರಾಮದ ಭರತ ಎಂಬ ಯುವಕ ಮಾರ್ಚ್ 9 ರಂದು ಮನೆಯಿಂದ ಹೋದವನು ನಾಪತ್ತೆಯಾಗಿರುವುದಾಗಿ ಆತನ ತಂದೆ ಯೋಗೀಶ್ ಗ್ರಾಮಾಂತರ ಪೊಲೀಸರಲ್ಲಿ ದೂರು ಸಲ್ಲಿಸಿದ್ದಾರೆ.

ವಿವಾಹಿತ ಮಹಿಳೆ ಕಾಣೆ

ಚಿಕ್ಕಮಗಳೂರು: ವಿವಾಹಿತ ಮಹಿಳೆಯೊಬ್ಬರು ನಾಪತ್ತೆಯಾಗಿರುವ ಬಗ್ಗೆ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಷಡಾಕ್ಷರಪ್ಪ ಎಂಬುವವರು ದೂರು ನೀಡಿದ್ದು, ತಮ್ಮ ಪತ್ನಿ ಸುಮಾ ಅವರು ಮಾರ್ಚ್11 ರಂದು ಚಿಕಿತ್ಸೆಗೆಂದು ಅಂತರಘಟ್ಟೆ ಆಸ್ಪತ್ರೆಗೆ ಹೋದವರು ಮರಳಿ ಬಂದಿಲ್ಲ ಎಂದು ದೂರು ನೀಡಿದ್ದಾರೆ.

6 ಲಕ್ಷ ಮೌಲ್ಯದ ಆಭರಣ ವಶ



ಬೀರೂರು: ಇಬ್ಬರು ಅಂತಾರಾಜ್ಯ ಸರಗಳರನ್ನು ಬಂಧಿಸಿರುವ ಬೀರೂರು ಪೊಲೀಸರು 6 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ರಾಜಸ್ಥಾನ ಮೂಲದ ಕರೋಲಿ ಜಿಲ್ಲೆಯ ಕಲ್ಯಾಣ್‌ಪುರ್, ಸಾಯಟ ಗ್ರಾಮದ ನಿತೇಶ್(21) ಮತ್ತು ಬಾಬುಲಾಲ್(20) ಬಂಧಿತ ಆರೋಪಿಗಳು. ಫೆ. 13ರಂದು ದೋಗೇಹಳ್ಳಿ ಗ್ರಾಮದಲ್ಲಿ ಅಪರಿಚಿತ ಇಬ್ಬರು ಅಂಗಡಿ ಹತ್ತಿರ ಬೈಕ್‌ನಲ್ಲಿ ಬಂದು ಸಿಗರೇಟ್ ಕೊಂಡು ಸೇದಿದ ನಂತರ ಪೆನ್ ಕೊಡುವಂತೆ ಕೇಳಿದ್ದು, ಅಂಡಿಯ ಮಾಲೀಕಳಾದ ಮಹಿಳೆ ಪೆನ್ ಕೊಡಲು ಹಿಂದೆ ತಿರುಗಿದಾಗ, ಹಿಂದಿನಿಂದ ಆಕೆಯ ಮಾಂಗಲ್ಯ ಸರ ಕಿತ್ತುಕೊಂಡು ಹೋಗಿದ್ದರು. ಪೊಲೀಸರು ಆರೋಪಿಗಳನ್ನು ಪತ್ತೆ ಮಾಡಿ 6 ಲಕ್ಷ ರೂ. ಮೌಲ್ಯದ 44.740 ಗ್ರಾಂ ತೂಕದ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ್ದ ಬೈಕನ್ನು ವಶಪಡಿಸಿಕೊಂಡಿದ್ದಾರೆ.



ಅಜ್ಜಂಪುರ ಸಮೀಪದ ಎಂ.ಹೊಸಹಳ್ಳಿ ಗ್ರಾಮದಲ್ಲಿ ಬಸವೇಶ್ವರರ ಪುತ್ಥಳಿ ಅನಾವರಣಗೊಳಿಸಲಾಯಿತು. ಹುಣಸಘಟ್ಟದ ಶ್ರೀ ಗುರುಮೂರ್ತಿ ಶಿವಚಾರ್ಯ ಸ್ವಾಮೀಜಿ, ಜಿಲ್ಲಾ ಗ್ಯಾರಂಟಿ ಯೋಜನೆ ಅಧ್ಯಕ್ಷ ಎಂ.ಸಿ.ಶಿವಾನಂದಸ್ವಾಮಿ, ನಟರಾಜ್, ನಿರಂಜನ, ಶಶಾಂಕ, ಚೇತನ, ಸಾಗರ, ಗಣೇಶ, ಪಾಲಾಕ್ಷಮ್ಮ, ಕಾವೇರಿ, ಸುಮಾ, ಮಾಲಿನಿ ಮೋಹನ, ತೇಜಸ್ವಿನಿ, ಕಲ್ಪನಾ, ಕಿರಣ್ ಇದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಜೀವನದ ಪ್ರಮುಖ ಘಟ್ಟ



ಶೃಂಗೇರಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯು ಜೀವನದ ಪ್ರಮುಖ ಘಟ್ಟವಾಗಿದ್ದು, ಈ ಹಂತದಲ್ಲಿ ಪರೀಕ್ಷೆಯನ್ನು ಹಗುರವಾಗಿ ಪರಿಗಣಿಸದೆ ಜವಾಬ್ದಾರಿಯುತವಾಗಿ ಎದುರಿಸಬೇಕು ಎಂದು ರೋಟರಿ ಕ್ಲಬ್ ಅಧ್ಯಕ್ಷ ಅಂಬಲಮನೆ ಸುಬ್ರಮಣ್ಯ ಹೇಳಿದರು. ವೈಕುಂಠಪುರ ಸರಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ಎಸ್ಸೆಸ್ಸೆಲ್ಸಿ ತರಗತಿ ವಿದ್ಯಾರ್ಥಿಗಳಿಗೆ ಪೆನ್ ನೀಡಿ ಮಾತನಾಡಿದರು. ತಾಲೂಕಿನ 13 ಪ್ರೌಢಶಾಲೆಯ 560 ಮಕ್ಕಳಿಗೆ ಪೆನ್ ನೀಡಲಾಗಿದ್ದು, ಇದರೊಂದಿಗೆ ಪರೀಕ್ಷೆ ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಧೈರ್ಯ ತುಂಬಲಾಯಿತು. ಪರೀಕ್ಷೆಯನ್ನು ಭಯದಿಂದ ಎದುರಿಸದೆ ಜಾಗೃತರಾಗಿ ತಾಳ್ಮೆಯಿಂದ ಎದುರಿಸಿ ಉತ್ತಮ ಅಂಕ ಗಳಿಸಿ ಎಂದರು. ವೇಣುಮಾಧವ ನಾಯಕ್ ರೋಟರಿ ಕ್ಲಬ್ ಕಾರ್ಯದರ್ಶಿ ಪ್ರಿಯದರ್ಶಿನಿ ಹೆಗ್ಡೆ, ಮಂಜುಳಾ ಸುಬ್ರಮಣ್ಯ, ಮುಖ್ಯ ಶಿಕ್ಷಕ ಈಶ್ವರ್ ಇತರರು ಇದ್ದರು.

ಚಿಕ್ಕಮಗಳೂರಲ್ಲಿ ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯಡಿ ವ್ಯಾಪಾರ ಮೇಳ

ಆಕರ್ಷಣೀಯ ಪ್ರದರ್ಶನ

ಚಿಕ್ಕಮಗಳೂರು: ನಗರದ ಆಜಾದ್ ಪಾರ್ಕ್ ವೃತ್ತದಲ್ಲಿ ಏರ್ಪಡಿಸಲಾಗಿರುವ ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯ ವಸ್ತು ಪ್ರದರ್ಶನ ಹಾಗೂ ವ್ಯಾಪಾರ ಮೇಳದಲ್ಲಿ ವೈವಿಧ್ಯಮಯ ಮಳಿಗೆಗಳನ್ನು ತೆರೆಯಲಾಗಿದ್ದು, ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಸಾಂಪ್ರದಾಯಿಕ ಉಡುಗೆ, ತೊಡುಗೆಗಳು, ಆಟಿಕೆಗಳು, ಸಿದ್ಧಪಡಿಸಿದ ಸಾಂಬಾರ ಪದಾರ್ಥಗಳು, ಪಾದರಕ್ಷೆಗಳು, ಅಲಂಕಾರಿಕ ವಸ್ತುಗಳು ಸೇರಿದಂತೆ ಹಲವು ಉತ್ಪನ್ನಗಳ ಒಟ್ಟು 54 ಮಾರಾಟ ಮಳಿಗೆಗಳನ್ನು ತೆರೆಯಲಾಗಿದ್ದು, ಚಿಕ್ಕಮಗಳೂರು ಜಿಲ್ಲೆ ಸೇರಿದಂತೆ ಹಾಸನ, ಚನ್ನಪಟ್ಟಣ, ತುಮಕೂರು, ಬೆಂಗಳೂರು ಇನ್ನಿತರೆ ಜಿಲ್ಲೆಗಳಿಂದ ಪಿಎಂ ವಿಶ್ವಕರ್ಮ ಯೋಜನೆಯ ಫಲಾನುಭವಿಗಳು ಆಗಮಿಸಿ ಮೇಳದಲ್ಲಿ ಭಾಗವಹಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಂದ ಪ್ರಸಂಶಾ ಪತ್ರ ಪಡೆದಿರುವ ಚನ್ನಪಟ್ಟಣದ ಸಾಂಪ್ರದಾಯಿಕ ಗೊಂಬೆಗಳ ತಯಾರಕರಾದ ಶಾಲಿನಿ ಹಾಗೂ ತಮಕೂರಿನ ಕೋಕಿಲಾ ಅವರು ಪ್ರದರ್ಶನಕ್ಕಿಟ್ಟಿರುವ ಗೊಂಬೆಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂತು.

ಚಿಕ್ಕಮಗಳೂರು ಜಿಲ್ಲೆ ತರೀಕೆರೆಯ ಹೆಚ್.ಡಿ. ಶಿವಕುಮಾರ್ ಅವರು ಸಾಗುವಾನಿ ಮರದಲ್ಲಿ





> ಪ್ರಧಾನಿ ಮಂತ್ರಿಗಳಿಂದ ಪ್ರಮಾಣ ಪತ್ರ ಸ್ವೀಕರಿಸಿದ್ದು ಸಂತಸ ತಂದಿದೆ. ಸಹಜವಾಗಿಯೇ ಚನ್ನಪಟ್ಟಣದ ಗೊಂಬೆಗಳಿಗೆ ಎಲ್ಲೆಡೆ ಉತ್ತಮ ಬೇಡಿಕೆ ಇದೆ. ಇಲ್ಲಿಯೂ ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.
> ■ ಶಾಲಿನಿ, ಚನ್ನಪಟ್ಟಣ

ತಯಾರಿಸಿರುವ ಜೋಡೆತ್ತು-ಗಾಡಿಗಳು, ಕುಂಟಿಗೆ, ಕೂರಿಗೆ ಇನ್ನಿತರೆ ಕೃಷಿ ಉಪಕರಣಗಳ ಕಲಾಕೃತಿಗಳು ಮೇಳದ ಪ್ರಮುಖ ಆಕರ್ಷಣೆಯಾಗಿದೆ.

ಮೂಡಿಗೆರೆ ತಾಲ್ಲೂಕು ಬಿ.ಹೊಸಳ್ಳಿಯ ಸುಮತಿ ಅವರು ತೆರೆದಿರುವ ಬಿದಿರಿನಿಂದ ತಯಾರಿಸಿದ ಮನೆ ಬಳಕೆ ವಸ್ತುಗಳ ಮಳಿಗೆ, ಬೆಂಗಳೂರಿನ ಪರಿಸರ ಸ್ನೇಹಿ ನಾರು ಹಾಗೂ ಬಟ್ಟೆಗಳಿಂದ ತಯಾರಿಸಿದ ಬ್ಯಾಗ್‌ಗಳ ಮಳಿಗೆ, ಮಣ್ಣಿನ ಮಡಿಕೆಗಳು, ಬಿದಿರಿನ ಅಲಂಕಾರಿಕ ವಸ್ತುಗಳು, ಬೆಂಗಳೂರಿನ ಬಿದಿರಿನ ಅಲಂಕಾರಿಕ ವಸ್ತುಗಳು ಶಿವಮೊಗ್ಗದ ಹ್ಯಾಂಡ್‌ಲೂಮ್ ಹಾಗೂ ಖಾದಿ ವಸ್ತ್ರಗಳ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂತು.

ಇದಲ್ಲದೆ ಮಹಿಳಾ ಟೈಲರ್‌ಗಲೇ ತಯಾರಿಸಿದ ವಸ್ತ್ರಗಳು, ಅಪ್ಪಟ ಹಿತ್ತಾಳೆ, ಕಂಚು ಇನ್ನಿತರೆ ಆಭರಣಗಳ ಗೋಲ್ಡ್‌ಸ್ಮಿತ್ ಮಳಿಗೆಗಳನ್ನು ಇಲ್ಲಿ ತೆರೆಯಲಾಗಿದೆ.



> ಕೃಷಿ ಸಂಬಂಧಿತ ಎಲ್ಲಾ ಕಲಾಕೃತಿಗಳನ್ನು ಮರದಲ್ಲಿ ಕೆತ್ತನೆ ಮಾಡಿ ಮಾರಾಟ ಮಾಡುತ್ತೇವೆ. ಬೆಲೆ ಸ್ವಲ್ಪ ದುಬಾರಿ ಆದರೂ ಉತ್ತಮ ಬೇಡಿಕೆ ಇದೆ. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಇತರೆ ಗ್ರಾಹಕರು ವಸ್ತುಗಳನ್ನು ಖರೀದಿಸುತ್ತಾರೆ. ಪಿಎಂ ವಿಶ್ವಕರ್ಮ ಯೋಜನೆ ನೆರವು ಸಿಕ್ಕಿರುವುದು ಅನುಕೂಲವಾಗಿದೆ.
> ■ ಹೆಚ್.ಡಿ.ಶಿವಕುಮಾರ್, ತರೀಕೆರೆ

ಕೇಂದ್ರ, ಸರ್ಕಾರವು ಸಾಂಪ್ರದಾಯಿಕ ಕರಕುಶಲ ಉತ್ಪನ್ನಗಳ ತಯಾರಿಕೆಗೆ ಹಣಕಾಸಿನ ಸೌಲಭ್ಯ ಕಲ್ಪಿಸುವ ಮೂಲಕ ಪ್ರೋತ್ಸಾಹ ನೀಡುವ ಜೊತೆಗೆ ಅವುಗಳಿಗೆ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಗಳನ್ನು ಹಮ್ಮಿಕೊಳ್ಳುತ್ತಿರುವುದು ಉತ್ತಮ ಯೋಜನೆಯಾಗಿದೆ. ನಾಳೆಯೂ ಮಾರಾಟ ಮೇಳ ನಡೆಯಲಿದ್ದು, ಗ್ರಾಹಕರು ಖರೀದಿಸುವ ಮೂಲಕ ಪಿ.ಎಂ. ವಿಶ್ವಕರ್ಮ ಯೋಜನೆಯ ಫಲಾನುಭವಿಗಳನ್ನು ಪ್ರೋತ್ಸಾಹಿಸಬೇಕು ಎಂದು ವ್ಯಾಪಾರಿಗಳು ಮನವಿ ಮಾಡಿದರು.

ಶಾಸಕ ಹೆಚ್.ಡಿ.ತಮ್ಮಯ್ಯ ಹೇಳಿಕೆ

ಅಭಿವೃದ್ಧಿಗೆ ಆದ್ಯತೆ



ಚಿಕ್ಕಮಗಳೂರು: ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕೆ ವಾರ್ಷಿಕ 57 ಸಾವಿರ ಕೋಟಿ ರೂ. ಮೀಸಲಿಡುವ ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೂ ಅನುದಾನ ನೀಡಿ ಸಮರೋಪಾದಿಯಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತಿದೆ ಶಾಸಕ ಹೆಚ್.ಡಿ. ತಮ್ಮಯ್ಯ ತಿಳಿಸಿದರು.

ಅವರು ಶನಿವಾರ ಫಲಾಹಾರಸ್ವಾಮಿ ಮಠದಲ್ಲಿ ಲೋಕೋಪಯೋಗಿ ಇಲಾಖೆ, ಪಿಆರ್‌ಇಡಿ, ಎಸ್‌ಸಿಪಿ ಯೋಜನೆ ಮತ್ತು ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ಸುಮಾರು 2.25 ಕೋಟಿ ರೂ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು.

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಗರದಲ್ಲಿ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಲೋಕೋಪಯೋಗಿ ಇಲಾಖೆ ಸಚಿವ ಜಾರಕಿಹೊಳಿ ಇವರ ಸಹಕಾರದೊಂದಿಗೆ ಅನುದಾನ ತಂದು ಜನಪರ ಕೆಲಸಕ್ಕೆ ಬಳಸುತ್ತಿರುವುದಾಗಿ ತಿಳಿಸಿದರು.

ಫಲಾಹಾರಸ್ವಾಮಿ ರಸ್ತೆ 30 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗುವುದು. ಈಗಾಗಲೇ ಮುಖ್ಯಮಂತ್ರಿಗಳ ವಿಶೇಷ ನಿಧಿಯಿಂದ 3 ಕೋಟಿ ರೂ ಬಿಡುಗಡೆಯಾಗಿದ್ದು, ಬಜೆಟ್‌ನಲ್ಲಿ ಜಿಲ್ಲೆಗೆ 50 ಕೋಟಿ ರೂ ಅನುದಾನ ಮಂಜೂರು ಮಾಡಲಾಗಿದೆ ಎಂದು ತಿಳಿಸಿದರು.

ಮುತ್ತಿನಪುರ ವೀರಭದ್ರೇಶ್ವರ ದೇವಸ್ಥಾನದ ಭಕ್ತರಿಗೆ ಸಂತೋಷ ಆಗುವಂತೆ ಪ್ರವಾಸೋದ್ಯಮ ಸಚಿವ ಹೆಚ್.ಕೆ ಪಾಟೀಲ್‌ರವರ ಮನವೊಲಿಸಿ 20 ಲಕ್ಷ ರೂಗಳಿಗೆ ಮರು ಮಂಜೂರಾತಿ ಆದೇಶ ಕೊಡಿಸಿರುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಫಲಾಹಾರಸ್ವಾಮಿ ಮಠದ ಪೀಠಾಧ್ಯಕ್ಷ ಮುರುಗೇಂದ್ರ ಸ್ವಾಮೀಜಿ ವಹಿಸಿದ್ದರು. ಮಲ್ಲೇನಹಳ್ಳಿ ಕಲ್ಲೇಶ್, ತಿಮ್ಮಯ್ಯ, ಪ್ರವೀಣ್, ನಂದೀಶ್, ಶಶಿಧರಆರಾಧ್ಯ, ಸುರೇಶ್, ಎಇಇ ಮಲ್ಲಿಕಾರ್ಜುನ, ಶಿವಕುಮಾರ್, ಗಿರೀಶ್ ಇದ್ದರು.

ಸರ್ಕಾರದ ವಿರುದ್ಧ ಬಲಗೈ ಸಮುದಾಯ ಪ್ರತಿಭಟನೆ

ಮೂಡಿಗೆರೆ: ರಾಜ್ಯ ಸರ್ಕಾರ ಒಳ ಮೀಸಲಾತಿ ಯೋಜನೆಯಿಂದ ಬಲಗೈ ಸಮುದಾಯ ಮತ್ತೆ ತುಳಿತಕ್ಕೆ ಮುಂದಾಗಿದೆ ಎಂದು ರಘುಪತಿ ಭಾಳೂರು ಹೇಳಿದರು. ಶುಕ್ರವಾರ ಸಂಜೆ ಬಲಗೈ ಸಮುದಾಯಗಳ ಯುವ ಒಕ್ಕೂಟ ಆಯೋಜಿಸಿದ್ದ ಪಂಜಿನ ಕಾರ್ಯಕ್ರಮದ ಅಂಗವಾಗಿ ಲಯನ್ಸ್ ವೃತದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿ. ಇವತ್ತು ನಮ್ಮ ಸಮುದಾಯ ಪ್ರತಿ ಹಂತದಲ್ಲೂ ತುಳಿತಕ್ಕೆ ಒಳಗಾಗುತ್ತಿದ್ದರೂ ಇದರ ವಿರುದ್ಧ ಹೋರಾಟ ಮಾಡಿ ಸರಿಪಡಿಸುವ ಬದಲು ಇವತ್ತಿನ ಕಾರ್ಯಕ್ರಮಕ್ಕೆ ಭಾಷಣಕಾರರಾಗಿ ಬರಬೇಕಿದ್ದ ಡಾ. ರಮೇಶ್ ಅವರಿಗೆ ಬಾರದಂತೆ ತಡೆಯುವ ಕೆಲಸ ಮಾಡಿದ್ದಾರೆ. ಇಲ್ಲಿ ಯಾರು ಸ್ವಂತಕಾಗಿ ರಾಜಕೀಯಕೋಸ್ಕರ ಬಂದಿಲ್ಲ, ಈ



ಸರ್ಕಾರದಲ್ಲಿ 19 ಜನ ದಲಿತ ಶಾಸಕರು ಇದ್ದರೆ ಅದರಲ್ಲಿ ಆಡಳಿತ ಪಕ್ಷದ 13 ಜನ ಶಾಸಕರು ಇದ್ದಾರೆ ಆದರೆ ಒಬ್ಬರು ಸಹ ಬಾಯಿ ಬಿಡುತ್ತಿಲ್ಲ ಇವರಿಗೆಲ್ಲ ಅಧಿಕಾರವೇ ಮುಖ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಬಾನುಪ್ರಕಾಶ್ ಹೆಸಗಲ್, ಅಂಗಡಿ ಚಂದ್ರು, ಜಗದೀಶ್ ಚಕ್ರವರ್ತಿ, ನವೀನ್ ಕೋಳೂರು, ರಾಘವೇಂದ್ರ, ಚಿನ್ನಿಗ, ಅಭಿಜಿತ್ ಹೆಡದಾಳು, ಸಚಿನ್ ಬಾನಹಳ್ಳಿ ಭೈರಪ್ಪ ಹ್ಯಾರಗುಡ್ಡೆ ಮತ್ತಿತರರಿದ್ದರು.

ಕರಿಯಮ್ಮ, ಚಿಕ್ಕಮ್ಮದೇವಿ ಜಾತ್ರಾ ಮಹೋತ್ಸವ

ತರೀಕೆರೆ: ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದ ಕರಿಯಮ್ಮದೇವಿ ಮತ್ತು ಚಿಕ್ಕಮ್ಮದೇವಿಯವರ ಜಾತ್ರಾ ಮಹೋತ್ಸವ ಶನಿವಾರ ವಿಜೃಂಭಣೆಯಿಂದ ನೆರವೇರಿತು.ಭಕ್ತರು ರಥಕ್ಕೆ ಹೂವು, ಬಾಳೆಹಣ್ಣು, ಫಲಪುಷ್ಪ, ಮಂಗಳ ದ್ರವ್ಯಗಳನ್ನು ಎಸೆದು ಭಕ್ತಿ ಮೆರೆದರು. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಸುತ್ತಾ ಬರುತ್ತಿರುವ ಲಿಂಗದಹಳ್ಳಿ ಗ್ರಾಮದ ತರಕಾರಿ ಸುರೇಶ್ ಮತ್ತು ಮಹಮದ್‌ರಸೂಲ್ ರವರನ್ನು ಗೌರವಿಸಲಾಯಿತು. ಕರಿಯಮ್ಮದೇವಿಯ ಬೆಳ್ಳಿ ಬಾವುಟ, ಪೂಜಾ ಸಾಮಗ್ರಿಗಳನ್ನು ಮುಂದಿನ ಒಂದು ವರ್ಷದ ಅವಧಿಗೆ ಮನೆಯಲ್ಲಿಟ್ಟುಕೊಂಡು ಪೂಜೆ ಸಲ್ಲಿಸುವ ಸಲುವಾಗಿ ಜಮ್ಮಾಪುರ ಗ್ರಾಮದ ಶೇಖರಪ್ಪ ಮತ್ತು ಕುಟುಂಬಸ್ಥರು 1,13,101 ರೂ.ಗಳಿಗೆ ಹರಾಜು ಕೂಗಿ ಪಡೆದುಕೊಂಡರು. ಶಾಸಕ ಜಿ.ಹೆಚ್.ಶ್ರೀನಿವಾಸ್, ಕೆಡಿಪಿ ಸದಸ್ಯೆ ರಚನಾ ಶ್ರೀನಿವಾಸ್,ಕೆ.ವಿ.ದರ್ಶನ್,ಸಂತೋಷ್,ಅಬೂಬಕರ್‌ಕುಟ್ಟಿ,ಜನಾರ್ದನಗೌಡ, ಎಂ.ಕೆ. ಚಂದ್ರಪ್ಪ, ಶೇಖರಪ್ಪ, ಕರಿಯಮ್ಮ ಮತ್ತು ಚಿಕ್ಕಮ್ಮದೇವಿ ದೇವಸ್ಥಾನ ಸಮಿತಿ ಪದಾಧಿಕಾರಿಗಳು ಹಾಗೂ ಅಪಾರ ಭಕ್ತರು ಹಾಜರಿದ್ದರು.





ಚಿಕ್ಕಮಗಳೂರಿನ ಟೌನ್ ಮಹಿಳಾ ಸಮಾಜ ನಗರದ ಎಂಎಲ್‌ವಿ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಸರಳಾ ಶ್ರೀಧರ್ ಉದ್ಘಾಟಿಸಿದರು. ಟೌನ್ ಮಹಿಳಾ ಸಮಾಜ ಅಧ್ಯಕ್ಷೆ ನೇತ್ರಾ ವೆಂಕಟೇಶ್, ರಚಿತಾ ಮಹಿಳಾ ಸಮಾಜದ ಅಧ್ಯಕ್ಷೆ ಕವಿತಾ ಗೋಪಾಲ ಶ್ವೇತಾ, ಶುಭದಾ, ಶೈಲಾ ನಾಗೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕನ್ನಡ ಮಾಧ್ಯಮದವರು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಬೇಕು

ಶೃಂಗೇರಿ: ಗ್ರಾಮೀಣ ಭಾಗದ ಸರಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿ, ಕನ್ನಡ ಮಾಧ್ಯಮದಲ್ಲಿ ಓದಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಉನ್ನತ ಸ್ಥಾನ ಪಡೆಯಬಹುದು ಎಂದು ಚೀಫ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಬೆಂಗಳೂರಿನ ಎಚ್.ಆರ್.ಪ್ರಭುದ್ದ ಹೇಳಿದರು.



ಮೆಣಸೆ ಗ್ರಾಮ ಪಂಚಾಯಿತಿ ಪಿಎಂ ಶಾಸಕರ ಸರಕಾರಿ ಶಾಲೆಯಲ್ಲಿ ಶನಿವಾರ ಶಾಲಾ ಸಮಿತಿ ಮತ್ತು ಗ್ರಾಮಸ್ಥರು ನೀಡಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ಹಳ್ಳಿ ಭಾಗದವರೆಂಬ ಹಿಂಜರಿಕೆ ಬೇಡ.ಮಲೆನಾಡು ಭಾಗದಿಂದ ಸಾಕಷ್ಟು ಜನರು ಬೇರೆ ಬೇರೆ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದವರು ಇದ್ದಾರೆ. ವಿದೇಶದಲ್ಲೂ ಸಾಕಷ್ಟು ಜನರು ಉದ್ಯೋಗವಕಾಶ ಪಡೆದಿದ್ದಾರೆ. ಅವಕಾಶಗಳು ಹುಡುಕಿಕೊಂಡು ಬರುವುದಿಲ್ಲ, ನಾವೇ ಅವಕಾಶ ಹುಡಕಬೇಕು.ಸರಕಾರಿ ಶಾಲೆಯಲ್ಲಿ ಉತ್ತಮ ಪಾಠ, ಪ್ರವಚನ ನಡೆಯುತ್ತಿದೆ.ತರಬೇತಿ ಪಡೆದ ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾರೆ ಎಂದರು.

ಮೆಣಸೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಸಂಧ್ಯಾಮರಿಯಪ್ಪನಾಯ್ಕ್ ಮಾತನಾಡಿ, ಇದೇ ಶಾಲೆಯಲ್ಲಿ ಓದಿ ರಾಜ್ಯದ ಉನ್ನತ ಹುದ್ದೆ ಅಲಂಕರಿಸಿದ ಪ್ರಭುದ್ಧರವರ ಸಾಧನೆ ಎಲ್ಲರಿಗೂ ಅನುಕರಣೀಯ. ಖಾಸಗಿ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವ ಕಾಲದಲ್ಲಿ ಇವರ ಸಾಧನೆಯು ಬೇರೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನದ ದಾರಿಯಾಗಲಿ ಎಂದರು.

ಶಾಲಾ ಸಮಿತಿ ಅಧ್ಯಕ್ಷ ಸಂತೋಷ್ ಕಾಳ್ಯ ಅಧ್ಯಕ್ಷತೆ ವಹಿಸಿದ್ದರು. ಪ್ರಭುದ್ಧರವರ ತಾಯಿ ಉಷಾರಾಮಚಂದ್ರಸ್ವಾಮಿ, ಮುಖ್ಯ ಶಿಕ್ಷಕಿ ಜಯಂತಿ, ಅರುಣಭಂಡಾರಿ, ಲಿಂಗಪ್ಪ, ತ್ರಿಮೂರ್ತಿ ಇದ್ದರು.

ನೂತನ ತಂತ್ರಜ್ಞಾನಗಳ ಬಳಕೆ ಕುರಿತು ಪತ್ರಕರ್ತರಿಗೆ ಕಾರ್ಯಾಗಾರ

ಮಾಧ್ಯಮಗಳು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಬೇಕು

ಚಿಕ್ಕಮಗಳೂರು: ಬಡವರ ಕಷ್ಟಗಳನ್ನು, ಸಮಸ್ಯೆಗಳನ್ನು ಸಮಾಜದ ಮತ್ತು ಸರ್ಕಾರದ ಗಮನಕ್ಕೆ ತರುವ ಕೆಲಸವನ್ನು ಮಾಧ್ಯಮಗಳು ಮಾಡಬೇಕುಎಂದು ಶಾಸಕ ಎಚ್.ಡಿ.ತಮ್ಮಯ್ಯ ಸಲಹೆ ಮಾಡಿದರು.

ಹೊನ್ನ ಬಿತ್ತೇವು ಹೊಲಕೆಲ್ಲ ಮತ್ತು ನ್ಯೂಸ್‌ಕಿಂಗ್ ಬಳಗ ನಗರದ ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಪತ್ರಕರ್ತರಿಗೆ ಆಯೋಜಿಸಿರುವ ಎ.ಐ.ಕೃತಕ ಬುದ್ಧಿಮತ್ತೆ ಹಾಗೂ ನೂತನ ತಂತ್ರಜ್ಞಾನಗಳ ಬಳಕೆ ಕುರಿತ ಎರಡು ದಿನಗಳ ತರಬೇತಿ ಶಿಬಿರಕ್ಕೆ ಶನಿವಾರ ಚಾಲನೆ ನೀಡಿಅವರು ಮಾತನಾಡಿದರು.

ಹೊಸ ಹೊಸ ಆವಿಷ್ಕಾರಗಳು, ತಂತ್ರಜ್ಞಾನಗಳಿಂದಾಗಿ ಮಾಧ್ಯಮ ಕ್ಷೇತ್ರ ಅತಿ ಕಡಿಮೆ ಸಮಯದಲ್ಲಿ ಬಹಳಷ್ಟು ವೇಗವಾಗಿ ಬೆಳೆದಿದೆ. ಸುದ್ದಿಗಳನ್ನು ಜನರಿಗೆ ಶೀಘ್ರವಾಗಿ ತಲುಪಿಸುವ ಉದ್ದೇಶದಿಂದ ಮಾಧ್ಯಮಗಳು ಕಾರ್ಯ ನಿರ್ವಹಿಸುತ್ತಿವೆಯಾದರೂ ದೃಶ್ಯ ಮಾಧ್ಯಮಗಳಲ್ಲಿ ಕೆಲವೊಮ್ಮೆ ಸುಳ್ಳು ಸುದ್ದಿಗಳು ಬಿತ್ತರವಾಗುತ್ತಿರುವುದರ ಬಗ್ಗೆ ಕೆಲವರಲ್ಲಿ



ಅಸಮಾಧಾನಗವಿದೆ ಎಂದು ಶಾಸಕ ಎಚ್ .ಡಿ.ತಮ್ಮಯ್ಯ ಹೇಳಿದರು.

ಸುದ್ದಿಗಳನ್ನು ಜನರಿಗೆ ಶೀಘ್ರವಾಗಿ ತಲುಪಿಸುವ ಭರದಲ್ಲಿ ಸುಳ್ಳು ಸುದ್ದಿಯನ್ನು ಬಿತ್ತರಿಸುವ ಕೆಲಸವನ್ನು ಮಾಡಬಾರದು, ಅಪಘಾತಗಳು, ಅವಘಡಗಳು ನಡೆದ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಿಸುವುದನ್ನು ಬಿಟ್ಟು ಜೀವ ಉಳಿಸಲು ಮುಂದಾಗಬೇಕು ಎಂದು ತಿಳಿಸಿದರು.

ಸರ್ಕಾರಗಳ, ಜನಪ್ರತಿನಿಧಿಗಳ, ಅಧಿಕಾರಿಗಳ ತಪ್ಪನ್ನುಎತ್ತಿ ತೋರಿಸಿ ಎಚ್ಚರಿಸುವ ಕೆಲಸವನ್ನು ಮಾಧ್ಯಮಗಳು ಮಾಡಬೇಕು ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ಹೆಚ್.ಹೆಚ್. ದೇವರಾಜ್ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಯುವ ಜನತೆ ಮೊಬೈಲ್‌ನಿಂದ ಸಾಧ್ಯವಾದಷ್ಟು ದೂರವಿರಬೇಕು ಎಂದು ಕಿವಿಮಾತು ಹೇಳಿದರು. ಮೊಬೈಲೇ ಜೀವನವಲ್ಲ, ಅದಿಲ್ಲದಿದ್ದರೂ ನಮ್ಮ ಬದುಕು ನಡೆಯುತ್ತದೆ ಎಂಬುದನ್ನು ಯುವ ಜನತೆ ಅರ್ಥ ಮಾಡಿಕೊಂಡು ಮೊಬೈಲನ್ನು ಮಿತವಾಗಿ ಬಳಸಬೇಕು ಎಂದು ಸಲಹೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಆರ್.ದೇವರಾಜ್ ಶೆಟ್ಟಿ ಮಾತನಾಡಿ, ನೂತನ ತಂತ್ರಜ್ಞಾನವನ್ನು ಯುವಜನತೆ ಸದುಪಯೋಗಪಡಿಸಿಕೊಳ್ಳಬೇಕು, ಸಮಾಜಕ್ಕೆ, ದೇಶಕ್ಕೆ ಒಳಿತಾಗುವ ರೀತಿ ತಂತ್ರಜ್ಞಾನವನ್ನು ಬಳಕೆ ಮಾಡಬೇಕುಎಂದು ಮನವಿ ಮಾಡಿದರು.

ಸಿಪಿಐ ಕಾರ್ಯದರ್ಶಿ ಜಿ.ರಘು ಮಾತನಾಡಿ, ಮೊಬೈಲ್ ಸೇರಿದಂತೆಎಲ್ಲಾ ತಂತ್ರಜ್ಞಾನಗಳು ಒಳ್ಳೆಯದಕ್ಕೆ ಮಾತ್ರ ಬಳಕೆಯಾಗಬೇಕು ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ರಾಜ್ಯಾಧ್ಯಕ್ಷ ಎನ್.ರಾಜು, ರೈತ ಸಂಘದ ಮುಖಂಡ ಗುರುಶಾಂತಪ್ಪ, ಸಾಹಿತಿ ಡಿ.ಎಂ.ಮಂಜುನಾಥ ಸ್ವಾಮಿ, ಪಿಳ್ಳೆನಹಳ್ಳಿ ವಿಜಯಕುಮಾರ್, ಜೆಡಿಎಸ್ ಮುಖಂಡ ಹೆಚ್.ಎಸ್.ಮಂಜಪ್ಪ, ನಟರಾಜ್ ಎಸ್.ಕೊಪ್ಪಲು ಉಪಸ್ಥಿತರಿದ್ದರು.

ಶೃಂಗೇರಿಯ ಭಾರತಿ ಬೀದಿಯಿಂದ ಕೆವಿಆರ್ ರಸ್ತೆಗೆ ಸಾಗುವ ಹಾದಿಯ ಅವ್ಯವಸ್ಥೆ

ಅಪಘಾತಕ್ಕೆ ಕಾರಣವಾಗುತ್ತಿರುವ ರಸ್ತೆ ಮತ್ತು ತಿರುವು

ಶೃಂಗೇರಿ: ಪಟ್ಟಣದ ಭಾರತಿ ಬೀದಿಯಿಂದ ಕೆ ವಿಆರ್ ರಸ್ತೆ ಮೂಲಕ ಸಾಗುವ ಶೃಂಗೇರಿ ಜೈಪುರ ರಸ್ತೆಗೆ ಸಂಪರ್ಕ ಕಲ್ಪಿಸುವ ಬೈಪಾಸ್ ರಸ್ತೆ ಕೆಲವೆಡೆ ತುಂಬಾ ಕಿರಿದು ಮತ್ತು ತಿರುವುಗಳಿಂದ ಕೂಡಿದ್ದು ಅಪಘಾತದ ತಾಣವಾಗಿದೆ.

ಕೆವಿರ್ ರಸ್ತೆಯಿಂದ ಶ್ರೀಮಠದ ಕಡೆಗೆ ಹೋಗುವ ಬೈಪಾಸ್ ರಸ್ತೆಯ ವೃತ್ತವು ಅತ್ಯಂತ ಕಿರಿದಾಗಿದ್ದು ವೃತ್ತದಲ್ಲಿ ಸಾಗುವಾಗ ಎದುರಿನಿಂದ ಬರುವ ವಾಹನಗಳು ಕಾಣದೆ ಪ್ರತಿನಿತ್ಯ ಅಪಘಾತವಾಗುವ ಪ್ರದೇಶವಾಗಿದ್ದು ಆತಂಕದಲ್ಲಿಯೇ ವಾಹನಗಳು ಸಂಚರಿಸಬೇಕಾಗಿದೆ. ಬೇಗಾನೆ ರಾಮಯ್ಯ ವೃತ್ತದಿಂದ ಮಠಕ್ಕೆ ಹೋಗುವ ಬೈಪಾಸ್ ರಸ್ತೆಯ ವೃತ್ತದವರೆಗೂ ಅತ್ಯಂತ ಜನಸಂದಣಿ ಮತ್ತು ವಾಹನಗಳ ಸಂಚಾರ ಹಾಗೂ ನಿಲುಗಡೆ ಜಾಸ್ತಿ ಆಗಿರುತ್ತದೆ. ಹಾಗೆಯೇ ಇದರ ಮುಂದುವರಿದ ಈ ರಸ್ತೆಯು ಮೆಣಸೆ ಸೇತುವೆ ವರೆಗೂ ಅಂಗಡಿ ಮುಂಗಟ್ಟುಗಳು ಎಂಎಸ್‌ಐಎಲ್ ಗ್ಯಾರೇಜ್ ಮಾಂಸದ ಅಂಗಡಿಗಳು ದಿನಸಿ ಮುಂತಾದ ಅಂಗಡಿಗಳಿದ್ದು ಯಾವಾಗಲೂ ಜನದಟ್ಟಣೆ ಜಾಸ್ತಿ ಆಗಿರುತ್ತದೆ.



ಇದೇ ರಸ್ತೆಯ ಶೃಂಗೇರಿ ಜೈಪುರ ರಾಜ್ಯ ಹೆದ್ದಾರಿ ರಸ್ತೆಗೆ ತಲುಪುವ ಕೊನೆಯ ಪಾಯಿಂಟ್ ಸಮೀಪ ರಕ್ತೇಶ್ವರಿ ದೇವಸ್ಥಾನ. ಅಂಗಡಿಗಳು ಮತ್ತು ರುದ್ರಭೂಮಿ ಇದ್ದು ರಸ್ತೆಯು ತೀರ ಕಿರಿದಾಗಿ ಅಪಘಾತಕಾರಿತಿರುವಿನಿಂದಕೂಡಿದರಸ್ತೆಯಾಗಿದೆ. ಈ ಭಾಗದ ರಸ್ತೆ ಅಗಲೀಕರಣವಾಗಬೇಕೆಂದು ಸಾರ್ವಜನಿಕರ ಆಗ್ರಹ ಕೇಳಿ ಬರುತ್ತಿದೆ.

ಮುಖ್ಯವಾಗಿ ಈ ರಸ್ತೆಯಲ್ಲಿ ಬರುವ ಮುಖ್ಯಬೀದಿಯ ಬೇಗಾನೆ ರಾಮಯ್ಯ ವೃತ್ತ ಹಾಗೂ ಶ್ರೀಮಠದ ಕಡೆಗೆ ಹೋಗುವ ಬೈಪಾಸ್ ರಸ್ತೆಯ ವೃತ್ತವು ಅತಿ ಶೀಘ್ರದಲ್ಲಿ ಅಗಲೀಕರಣವಾಗಬೇಕೆಂದು ಒತ್ತಾಯ ಕೇಳಿ ಬರುತ್ತಿದೆ. ಪಟ್ಟಣಕ್ಕೆ ಬರುವರಸ್ತೆ ಏಕಮುಖಿ ರಸ್ತೆಯಾಗಿದ್ದು ಬಹುತೇಕ ಎಲ್ಲಾ ವಾಹನಗಳು ಪಟ್ಟಣಕ್ಕೆ ಬರುವ ಪ್ರವಾಸಿ ವಾಹನಗಳ ಸಹಿತ ಇಲ್ಲಿಯೇ ಬಂದು ಗಾಂಧಿ ಮೈದಾನದಲ್ಲಿ ಪಾರ್ಕಿಂಗ್ ಮಾಡಲಿದ್ದಾರೆ. ಇದರಿಂದ ಪ್ರತಿನಿತ್ಯ ಇಲ್ಲಿ ವಾಹನಗಳು ಸಂಚರಿಸುತ್ತಿದ್ದು ಕಿರಿದಾಗಿರುವುದರಿಂದ ಎದುರಿನಿಂದ ಬರುವ ವಾಹನ ಕಾಣದೆ ಅಪಘಾತಗಳು ಹೆಚ್ಚಾಗುತ್ತಿದೆ.

ಅಲ್ಲದೇ ವೃತ್ತದ ಬಳಿಯ ರಸ್ತೆಯ ಒಂದು ಪಾರ್ಶ್ವದ ತುಂಗಾ ನದಿಯ ದಡದಲ್ಲಿ ಅಕ್ರಮವಾಗಿ ಕಟ್ಟಡಗಳು ಮೇಲೇಳುತ್ತಿದ್ದು ಅಂಗಡಿ ಮಳಿಗೆಗಳು ತಲೆ ಎತ್ತುತ್ತಿವೆ .ವೃತ್ತವು ಕಿರಿದಾಗಿದ್ದು ಇದರಿಂದ ವಾಹನಗಳು ಎದುರಿನಿಂದ ಬರುವಾಗ ಅಂಗಡಿ ಮಳಿಗೆಗಳು ಅಡ್ಡವಾಗಿ ಅಪಘಾತಗಳು ಹೆಚ್ಚಾಗುತ್ತಿದೆ. ನಿತ್ಯ ಅಪಘಾತಗಳು ನಡೆಯುತ್ತಿರುವ ಬಗ್ಗೆ ಜನಪ್ರತಿನಿಧಿಗಳ ಅಧಿಕಾರಿಗಳ ಕಣ್ಣಿಗೆ ಬೀಳದಿರುವುದರಿಂದ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-66,140-82,509	ರಾಶಿ-37,899-58,399
ರಾಶಿ-41,366-54,599	ಚಾಲಿ-26,999-43,299
ಬೆಟ್ಟೆ-50,182-61,009	ಕೆಂಪುಗೋಟು-20,169-39,269
ಗೊರಬಲು-19,000-38,509	ಬಿಳಿಗೋಟು-10,786-34,070
	ಸಿಪ್ಪೆಗೋಟು-10,899-22,600

ವ್ಯಕ್ತಿ ನಾಪತ್ತೆ: ಮಾಹಿತಿಗೆ ಮನವಿ



ಶಿವಮೊಗ್ಗ : ವಿಜಯನಗರ ಜಿಲ್ಲೆಯ ಹೊಸಪೇಟೆಯ ಕೌಲಪೇಟೆ ಕುರುಬರ ಓಣಿಯ ನಿವಾಸಿ 35 ವರ್ಷದ ದಾಸನಾಳ ಮಂಜುನಾಥ ಡಿ. ಎನ್ನುವವರು ಶಿವಮೊಗ್ಗ ನಗರದ ಅಚ್ಯುತರಾವ್ ಲೇಔಟ್‌ನಿಂದ ಫೆಬ್ರವರಿ 19 ರಿಂದ ನಾಪತ್ತೆಯಾಗಿದ್ದಾರೆ.

ನಾಗರಾಜ್ ನ್ಯೂ ಕ್ಲಿನಿಕ್‌ನಲ್ಲಿ ಸ್ಕ್ಯಾನ್ ಮಾಡಿರುವ ಸಲುವಾಗಿ ಇವರನ್ನು ಕರೆದುಕೊಂಡು ಬರಲಾಗಿದ್ದು, ಸ್ಕ್ಯಾನ್ ಮಾಡಿದ ಬಳಿಕ ಆಸ್ಪತ್ರೆಯಲ್ಲಿ ಕುಳಿತುಕೊಂಡಿದ್ದ ಇವರು ಶೌಚಾಲಯಕ್ಕೆ ಹೋಗುವುದಾಗಿ ಹೇಳಿ ಹೋದವರು ಮನೆಯವರ ಕಣ್ತಪ್ಪಿಸಿ ನಾಪತ್ತೆಯಾಗಿದ್ದಾರೆ. ಇದುವರೆಗೂ ಇವರ ಸುಳಿವು ಸಿಕ್ಕಿಲ್ಲ. ಈ ಸಂಬಂಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇವರ ಸುಳಿವು ಸಿಕ್ಕವರು ಜಯನಗರ ಠಾಣೆ ಅಥವಾ ಸೋದರ ಸಂಬಂಧಿ 9980695182 ಮೊಬೈಲ್‌ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಲಾಗಿದೆ.

ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

ಶಿವಮೊಗ್ಗ : ನಿರ್ಮಾಣ ಹಂತ ಕಟ್ಟಡದಿಂದ ಬಿದ್ದು ಕಾರ್ಮಿಕ ಮೃತಪಟ್ಟಿರುವ ಘಟನೆ ಶರಾವತಿ ಡೆಂಟಲ್ ಕಾಲೇಜು ಬಳಿಯ ಗೋಲ್ಡನ್ ಸಿಟಿಯಲ್ಲಿ ಶುಕ್ರವಾರ ನಡೆದಿದೆ. ಬೊಮ್ಮನಕಟ್ಟೆಯ ನಿವಾಸಿ ರೇವಣ್ಣ (67) ಮೃತ ಕಾರ್ಮಿಕನಾಗಿದ್ದು, ಕ್ಯೂರಿಂಗ್ ಮಾಡಿ ಕೆಳಗೆ ಇಳಿಯುತ್ತಿದ್ದ ಸಂದರ್ಭದಲ್ಲಿ ಆಯ ತಪ್ಪಿ ಕೆಳಗೆ ಬಿದ್ದಿದ್ದಾರೆ. ತಕ್ಷಣವೇ ಬಡಾವಣೆಯ ನಿವಾಸಿಗಳು ಹಾಗೂ ಸಹೋದ್ಯೋಗಿಗಳು ಆಸ್ಪತ್ರೆಗೆ ಕರೆದೊಯ್ದರಾದರೂ ಮಾರ್ಗ ಮಧ್ಯದಲ್ಲಿಯೇ ಅಸುನೀಗಿದ್ದಾರೆ. ತುಂಗಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಲಿಂಡರ್ ಸಮಸ್ಯೆ ಇಲ್ಲ



ಹೊಸನಗರ: ತಾಲೂಕಿನಲ್ಲಿ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್‌ಗಳಿಗೆ ಭರವಿಲ್ಲ, ಸಾರ್ವಜನಿಕರು ಯಾವುದೇ ಭಯಪಡುವ ಅಗತ್ಯವಿಲ್ಲ ಎಂದು ಹೊಸನಗರದ ಬಾಲಾಜಿ ಇಂಡಿಯನ್ ಗ್ಯಾಸ್ ಏಜೆನ್ಸಿ ಮಾಲೀಕ ಜಗದೀಶ್ ತಿಳಿಸಿದ್ದಾರೆ.

ಕಳೆದ ಕೆಲವು ದಿನಗಳಿಂದ ಸಿಲಿಂಡರ್ ಪೂರೈಕೆ ಕುರಿತು ಕೇಳಿಬರುತ್ತಿರುವ ಸುಳ್ಳು ಸುದ್ದಿಗಳಿಂದ ಆತಂಕಗೊಂಡಿರುವ ಸಾರ್ವಜನಿಕರು ಹಳೇ ಸಾಗರ ರಸ್ತೆಯಲ್ಲಿರುವ ಬಾಲಾಜಿ ಇಂಡಿಯನ್ ಗ್ಯಾಸ್ ಗೋಡೌನ್ ಹಾಗೂ ಮಾವಿನಕೊಪ್ಪದಲ್ಲಿರುವ ಇಂಡಿಯನ್ ಗ್ಯಾಸ್ ಕಚೇರಿಗೆ ಬುಕ್ ಮಾಡಲು ಓಡಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ಗೃಹ ಬಳಕೆಯ ಸಿಲಿಂಡರ್ ದಾಸ್ತಾನು ಇದೆ. ಆದರೆ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಗ್ಯಾಸ್ ಬುಕ್ಕಿಂಗ್‌ನಲ್ಲಿ ವ್ಯತ್ಯಾಸವಾಗುತ್ತಿದೆ ಎಂದರು. ಸಾರ್ವಜನಿಕರು ತಾಳ್ಮೆಯಿಂದ ಗ್ಯಾಸ್ ಬುಕ್ ಮಾಡಿದರೆ ಒಂದೆರಡು ದಿನದಲ್ಲಿ ನಿಮಗೆ ಒಟಿಪಿ ಬರುತ್ತದೆ. ನಿಮ್ಮ ಮನೆಯ ಬಾಗಿಲಿಗೆ ನಮ್ಮ ಏಜೆನ್ಸಿಯ ಹುಡುಗರು ಬಂದು ಒಟಿಪಿ ನಂಬರ್ ಪಡೆದು ಸಿಲಿಂಡರ್ ವಿತರಿಸುತ್ತಾರೆ ಎಂದರು.

ಏ. 2ರಿಂದ ಶ್ರೀಧರ ಸ್ವಾಮಿಗಳ ಆರಾಧನಾ ಮಹೋತ್ಸವ

ಸಾಗರ : ತಾಲೂಕಿನ ವರದಹಳ್ಳಿಯ ಶ್ರೀಧರಾಶ್ರಮದಲ್ಲಿ ಏಪ್ರಿಲ್ 2ರಿಂದ 4ರವರೆಗೆ ಸದ್ಗುರು ಭಗವಾನ್ ಶ್ರೀಧರ ಸ್ವಾಮಿಗಳ ಐವತ್ಮೂರನೆ ವರ್ಷದ ಆರಾಧನಾ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಏ. 2ರಂದು ಪ್ರಾತಃಕಾಲದಿಂದ ಧಾರ್ಮಿಕ ಕಾರ್ಯ ಕ್ರಮಗಳು ಪ್ರಾರಂಭಗೊಳ್ಳಲಿದ್ದು, ಯಾಗಶಾಲೆ ಪ್ರವೇಶ, ಗಣಪತಿ ಮೂಲಮಂತ್ರ ಹವನ, ಅನ್ನಸೂಕ್ತ ಹವನ ಇದ್ದು, ಸಂಜೆ ಪಲ್ಲಕ್ಕಿ ಉತ್ಸವ ಹಾಗೂ ಅಷ್ಟಾವಧಾನ ಸೇವೆ ಇರುತ್ತದೆ. ಏ. 3ರಂದು ಪುರುಷ ಸೂಕ್ತ ಹವನ, ಗುರುಮೂಲಮಂತ್ರ ಹವನ, ಪೂರ್ಣಾಹುತಿ, ಸಂಜೆ ಪಲ್ಲಕ್ಕಿ ಉತ್ಸವ ಹಾಗೂ ಅಷ್ಟಾವಧಾನ ಸೇವೆ ಇರುತ್ತದೆ. ಏ. 4ರಂದು ಶ್ರೀ ಸದ್ಗುರು ಸಮಾಧಿಗೆ ಶತರುದ್ರಾಭಿಷೇಕ, ಸಹಸ್ರನಾಮಾರ್ಚನಾಪೂರ್ವಕ ಕಲ್ಪೋಕ್ತ ಮಹಾಪೂಜೆ, ಪಲ್ಲಕ್ಕಿ ಉತ್ಸವ ಹಾಗೂ ಸದ್ಗುರು ಭಗವಾನ್ ಶ್ರೀಧರ ಸ್ವಾಮಿಗಳ ಆರಾಧನಾ ಮಹೋತ್ಸವ ನಡೆಯಲಿದೆ ಎಂದು ಶ್ರೀಧರ ಸೇವಾ ಮಹಾಮಂಡಲದ ಪ್ರಧಾನ ಕಾರ್ಯದರ್ಶಿ ಕಾನ್ಲೆ ಶ್ರೀಧರ ರಾವ್ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಮಾ.17: ರಾಷ್ಟ್ರೀಯ ಸಮ್ಮೇಳನ

ಶಿವಮೊಗ್ಗ : ಕುವೆಂಪು ವಿವಿ, ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು ಸಂಯುಕ್ತಾಶ್ರಯದಲ್ಲಿ ಮಾ.17ರಂದು ಬೆಳಿಗ್ಗೆ 10.30ಕ್ಕೆ ಜ್ಞಾನ ಸಹ್ಯಾದ್ರಿ, ಶಂಕರಘಟ್ಟದ ಬಸವ ಸಭಾ ಭವನದಲ್ಲಿ ಭಾರತ ಸಂವಿಧಾನ, ಸಾಮಾಜಿಕ ನ್ಯಾಯ ಮತ್ತು ಸುಸ್ಥಿರ ಅಭಿವೃದ್ಧಿ, ಬಹು ಶಿಸ್ತಿನ ದೃಷ್ಟಿಕೋನ ಕುರಿತು ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಯುಎಸ್ಎಂಆರ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಎಂ. ಮುತ್ತಯ್ಯ ತಿಳಿಸಿದ್ದಾರೆ.



ಕುವೆಂಪು ವಿಶ್ವವಿದ್ಯಾಲಯದಿಂದ ಶಂಕರಘಟ್ಟದ ಜ್ಞಾನ ಸಹ್ಯಾದ್ರಿಯಲ್ಲಿ ನಡೆದ ಸಹ್ಯಾದ್ರಿ ಉತ್ಸವದಲ್ಲಿ ಸಾಗರದ ಇಂದಿರಾ ಗಾಂಧಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿ ಪಡೆದು ಬೀಗಿದರು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

ಸಾಗರ : ಇಲ್ಲಿನ ಶ್ರೀ ಮಹಾಗಣಪತಿ ಜಾತ್ರಾ ಮಹೋತ್ಸವ ಅಂಗವಾಗಿ ಮಾ. 23ರಿಂದ 27ರವರೆಗೆ ಮಹಾ ಗಣಪತಿ ಸಾಂಸ್ಕೃತಿಕ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮ ನೀಡಬಯಸುವ ಕಲಾವಿದರು, ಕಲಾತಂಡಗಳು ಮಾ. 16ರ ಸಂಜೆ 5ರೊಳಗೆ ತಾವು ನೀಡುವ ಕಾರ್ಯಕ್ರಮ ಕುರಿತ ವಿವರವನ್ನು ದೇವಾಲಯ ಕಚೇರಿಯ ಮಂಜುನಾಥ್ ಅವರಿಗೆ ತಲುಪಿಸಬೇಕು. ಹೆಚ್ಚಿನ ವಿವರಗಳಿಗಾಗಿ ವಿ.ಟಿ.ಸ್ವಾಮಿ (ಮೊ. 9880871716), ಶಿವಮೂರ್ತಿ (9480257577), ಡಿ.ದಿನೇಶ್ (ಮೊ.8550884149) ಸಂಪರ್ಕಿಸಲು ವಿ.ಟಿ.ಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.



ಸೊರಬ : ಚಂದ್ರಗುತ್ತಿ ಸಮೀಪದ ಚನ್ನಪಟ್ಟಣ ಗ್ರಾಮದಲ್ಲಿ ಹೊಸ ಆವೃತ್ತಿ ಹೊಂದಿರುವ ದೇವಾಲಯ ಮಾರಿಕಾಂಬ ದೇವಿಯ ವಾರ್ಷಿಕ ಸಮರಾಧನೆ ಶುಕ್ರವಾರ ನಡೆಯಿತು. ಅರ್ಚಕ ಮಧು ಭಟ್ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮ ನಡೆಯಿತು. ದೇವಸ್ಥಾನದ ಸಮಿತಿ ಅಧ್ಯಕ್ಷ ರವೀಂದ್ರನಾಥ್ ಪಾಟೀಲ್ ಮತ್ತಿತರರು ಪಾಲ್ಗೊಂಡಿದ್ದರು.

ಕ್ಯಾಂಟೀನ್ ಉದ್ಘಾಟಿಸಿದ ಸಚಿವ ಮಧು ಬಂಗಾರಪ್ಪ ಸಲಹೆ

ಇಂದಿರಾ ಕ್ಯಾಂಟೀನ್ ಬಳಸಿ

ಶಿವಮೊಗ್ಗ: ಕಾರ್ಮಿಕರು, ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಅನುಕೂಲವಾಗಿರುವ ಇಂದಿರಾ ಕ್ಯಾಂಟಿನ್ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದರು.

ಹೊಳೆಹೊನ್ನೂರು ಪಟ್ಟಣ ಪಂಚಾಯತ್ ವತಿಯಿಂದ ಪಟ್ಟಣದ ಗಾಂಧಿ ಸರ್ಕಲ್ ಬಳಿ ನೂತನವಾಗಿ ನಿರ್ಮಿಸಲಾಗಿರುವ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಗೆ ಒಟ್ಟು 16 ಇಂದಿರಾ ಕ್ಯಾಂಟೀನ್ ಮಂಜೂರಾಗಿದ್ದು, ಹೊಳೆಹೊನ್ನೂರು ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಈ ಕ್ಯಾಂಟೀನ್ 12 ನೆಯದ್ದಾಗಿದೆ. ಇಂದಿರಾ ಕ್ಯಾಂಟಿನ್‌ನಿಂದಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸಹಕಾರ ಆಗಲಿದೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ 20 ಅಂಶಗಳ ಕಾರ್ಯದಲ್ಲಿ ಮೊದಲನೆಯದ್ದೇ ಆಹಾರ ಭದ್ರತೆಯಾಗಿತ್ತು. ಮುಖ್ಯಮಂತ್ರಿಯವರು ಸಹ ಯಾವುದೇ ವ್ಯಕ್ತಿ ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಮೊದಲಿಗೆ ಆದ್ಯತೆ ನೀಡಿದ್ದು ಅನ್ನಭಾಗ್ಯ ಯೋಜನೆಗೆ ಎಂದರು.

ಇಂದಿರಾ ಕ್ಯಾಂಟೀನ್‌ನಲ್ಲಿ ಪ್ರತಿ ದಿನ ವಿವಿಧ ಬಗೆಯ ತಿಂಡಿ ಮತ್ತು ಊಟ ಲಭ್ಯವಿದೆ. ತಿಂಡಿಗೆ ರೂ.5 ಮತ್ತು ಊಟಕ್ಕೆ ರೂ.10 ಇರುತ್ತದೆ. ಸಾರ್ವಜನಿಕರು ಕ್ಯಾಂಟೀನ್‌ಗೆ ಬರಬೇಕು. ಆಹಾರದ ಗುಣಮಟ್ಟದ ಪರೀಕ್ಷೆ ಮಾಡಿ, ಸಹಕರಿಸಬೇಕೆಂದರು.

ಶಾಲೆಗಳಲ್ಲಿ 57 ಲಕ್ಷ ಮಕ್ಕಳಿಗೆ ಬಿಸಿಯೂಟ, ಮೊಟ್ಟೆ, ಹಾಲನ್ನು ನೀಡಲಾಗುತ್ತಿದೆ. ನಾನು ಸಹ ಶಾಲೆಗಳಿಗೆ ಭೇಟಿ ನೀಡಿದ ವೇಳೆ ಬಿಸಿಯೂಟ ಸೇವನೆ ಮಾಡುತ್ತೇನೆ. ಅಧಿಕಾರಿಗಳು ಸಹ ಭೇಟಿ ನೀಡಿದ ವೇಳೆ ಬಿಸಿಯೂಟ ಸೇವಿಸಿ, ಗುಣಮಟ್ಟವನ್ನು ಪರೀಕ್ಷಿಸಬೇಕು ಎಂದರು.



ಹೊಳೆಹೊನ್ನೂರಿಗೆ ಕೆಪಿಎಸ್ ಶಾಲೆ: ಹೊಳೆಹೊನ್ನೂರು ಸರ್ಕಾರಿ ಪ್ರೌಢಶಾಲೆಯನ್ನು ಕೆಪಿಎಸ್ ಶಾಲೆಯನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಇಲ್ಲಿ ಎಲ್‌ಕೆಜಿಯಿಂದ 12 ನೇ ತರಗತಿವರೆಗೆವರೆಗೆ ಉಚಿತವಾಗಿ ಒಂದೇ ಸೂರಿನಡಿ ಶಿಕ್ಷಣ ಮತ್ತು ಉಚಿತ ಸಾರಿಗೆ ವ್ಯವಸ್ಥೆ, ಕಂಪ್ಯೂಟರ್, ಕೌಶಲ್ಯಾಭಿವೃದ್ದಿ, ಕಲೆ ಇತರೆ ಪೂರಕ ಶಿಕ್ಷಣ ನೀಡಲಾಗುವುದು ಎಂದರು.

ಗ್ರಾಮಾಂತರ ಶಾಸಕಿ ಶಾರದಾ ಪೂರ್ಯನಾಯ್ಕ ಮಾತನಾಡಿ, ಬಡವರಿಗೆ ಇಂದಿರಾ ಕ್ಯಾಂಟೀನ್ ಬಹು ಉಪಯುಕ್ತವಾಗಿದೆ. ಇಲ್ಲಿ ಆಹಾರದ ಗುಣಮಟ್ಟ ನಿರ್ವಹಣೆ ಚೆನ್ನಾಗಿ ಮಾಡಿಕೊಂಡು ಹೋದರೆ ಇಂದಿರಾ ಕ್ಯಾಂಟೀನ್ ಯೋಜನೆ ಸಾರ್ಥಕವಾಗುತ್ತದೆ ಎಂದರು.

ಡಿಯುಡಿಸಿ ಯೋಜನಾ ನಿರ್ದೇಶಕ ರಂಗಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ಹೊಳೆಹೊನ್ನೂರಲ್ಲಿ ಇಂದು ಉದ್ಘಾಟಿಸುತ್ತಿರುವುದು 12ನೇ ಕ್ಯಾಂಟಿನ್ ಆಗಿದೆ. ಪ್ರತಿ ದಿನ ಬೆಳಿಗ್ಗೆ 2 ತರಹದ ತಿಂಡಿ ಸಿದ್ದವಿರುತ್ತದೆ. ಬೆಳಗಿನ ತಿಂಡಿಗೆ ರೂ. 5 ಮತ್ತು ಮಧ್ಯಾಹ್ನ, ರಾತ್ರಿ ಊಟಕ್ಕೆ ತಲಾ ರೂ. 10 ದರ ನಿಗದಿಪಡಿಸಲಾಗಿದೆ ಎಂದರು.

ಹಾಪ್ಕಾಮ್ಸ್ ಅಧ್ಯಕ್ಷ ವಿಜಯಕುಮಾರ್, ಕೆಶಿನಾಕೃತೋ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯ ದೇವಿಕುಮಾರ್, ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಅಪರ ಜಿಲ್ಲಾಧಿಕಾರಿ ಅಭಿಷೇಕ್ ವಿ ಪಾಲ್ಗೊಂಡಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ

ಜಿಲ್ಲೆಯಲ್ಲಿ ಅಡುಗೆ ಅನಿಲ ಸರಬರಾಜಿನಲ್ಲಿ ಸಮಸ್ಯೆ ಇಲ್ಲ

ಶಿವಮೊಗ್ಗ : ಜಿಲ್ಲೆಯಲ್ಲಿ ಅಡುಗೆ ಅನಿಲದ ಸರಬರಾಜಿನಲ್ಲಿ ಗಂಭೀರ ಸಮಸ್ಯೆ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಶನಿವಾರ ಸುದ್ದಿಗಾರರ ಜೊತೆ ಮಾತನಾಡಿ, ಜಿಲ್ಲೆಯಲ್ಲಿನ ಅಡುಗೆ ಅನಿಲದ ಸರಬರಾಜು ಹಾಗೂ ಕುಡಿಯುವ ನೀರಿನ ಸ್ಥಿತಿ ಬಗ್ಗೆ ಅಧಿಕಾರಿಗಳೊಂದಿಗೆ ವಿಸ್ತಾರವಾಗಿ ಚರ್ಚೆ ಮಾಡಲಿದ್ದೇನೆ ಎಂದರು.

ಬಜೆಟ್‌ನಲ್ಲಿ ಜಿಲ್ಲೆಗೆ ಯಾವುದೇ ವಿಶೇಷ ಅನುದಾನ ಸಿಗದ ಬಗ್ಗೆ ಪ್ರತಿಕ್ರಿಯಿಸಿ, ಜಿಲ್ಲೆಯ ಅನೇಕ ಬೇಡಿಕೆಗಳು ಬಾಕಿಯಿದೆ. ಅದನ್ನು ಸಪ್ಲಿಮೆಂಟರಿಯಾಗಿ ಬಿಡುಗಡೆಯಾಗುತ್ತದೆ. ಹಿಂದೆ ಕೂಡ ಮಾಡಿದ್ದಾರೆ. ಶರಾವತಿ ಸಂತ್ರಸ್ಥರ ಬೇಡಿಕೆ ಈಡೇರಿಕೆ ಕೂಡ ಪ್ರಮುಖ ವಿಷಯವಾಗಿದೆ ಎಂದರು.



ಸಭೆ ನಡೆಸಿದ್ದು ತಪ್ಪಲ್ಲ

ದಾವಣಗೆರೆ ಉಪ ಚುನಾವಣೆಯಲ್ಲಿ ನಾವೇ ಗೆಲ್ಲುತ್ತೇವೆ. ಈಗಾಗಲೇ ಉಸ್ತುವಾರಿಗಳ ಆಯ್ಕೆ ನಡೆದು, ಸಭೆಯೂ ಆಗಿದೆ. ಯಾವುದೇ ಗೊಂದಲವಿಲ್ಲ, ಪಕ್ಷದ ತೀರ್ಮಾನಕ್ಕೆ ಎಲ್ಲರೂ ಬದ್ಧ. ಶಾಸಕ ಗೋಪಾಲಕೃಷ್ಣ ಬೇಳೂರು ಸೇರಿ 25 ಜನ ಶಾಸಕರು ಸಭೆ ನಡೆಸಿದ್ದು ತಪ್ಪಲ್ಲ. ಎಲ್ಲರಿಗೂ ಸಚಿವ ಸ್ಥಾನ ಕೇಳುವ ಹಕ್ಕಿದೆ. ಅವರು ಪಕ್ಷಕ್ಕೆ ತಿಳಿಸಿಯೇ ಸಭೆ ನಡೆಸಿದ್ದಾರೆ ಎಂದರು.

ಸರಿಯಾಗಿರುತ್ತದೆ

ಯತೀಂದ್ರ ಸಿದ್ದರಾಮಯ್ಯ ಮುಂದಿನ ಉಸ್ತುವಾರಿ ಎಂದು ಸಿಎಂ ಹೇಳಿದ್ದಾರೆ ಎಂಬ ಪ್ರಶ್ನೆಗೆ ಆ ವಿಚಾರ ನನಗೆ ಗೊತ್ತಿಲ್ಲ ಎಂದರು. ಕಾಂಗ್ರೆಸ್ ಪಕ್ಷದವರೇ ಬಜೆಟ್ಟನ್ನು ವಿರೋಧಿಸುತ್ತಿದ್ದಾರೆ. ಶಾಸಕ ಇಕ್ಬಾಲ್ ಅಪಸ್ವರ ಎತ್ತಿದ್ದಾರಲ್ಲಾ ಎಂಬ ಪ್ರಶ್ನೆಗೆ ಅದು ಸ್ವಭಾವಿಕ. ಅವರ ಕ್ಷೇತ್ರದ ಬೇಡಿಕೆಗೆ ಸ್ಪಂದಿಸದಿದ್ದಾಗ ಹೇಳಿದ್ದಾರೆ. ಅದು ಸರಿಯಾಗುತ್ತದೆ ಎಂದು ಪ್ರತಿಕ್ರಿಯಿಸಿದರು.

ಸರ್ಕಾರಿ ಶಾಲೆ ಮತ್ತು ಕನ್ನಡ ಶಾಲೆಗಳನ್ನು ಮುಚ್ಚುವ ಪ್ರಶ್ನೆಯೇ ಇಲ್ಲ. ಬಿಜೆಪಿ ಕಾಲದಲ್ಲಿ ಮುಚ್ಚಿದ್ದಾರೆ. ಅದು ನನಗೆ ಬೇಡ. ಕನ್ನಡ ಮಾಧ್ಯಮ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು ಮತ್ತು ಶಿಕ್ಷಕರಿಗೆ ಅನುದಾನಿತ ಶಿಕ್ಷಕರಾಗಿ ನೇಮಕ ಮಾಡಿಕೊಳ್ಳಬೇಕು ಎಂಬ ಬೇಡಿಕೆ ಇದೆ. ಅದೊಂದು ಬಾಕಿ ಇದೆ. ಕನ್ನಡ ಪ್ರಾಧಿಕಾರದ ಅಧ್ಯಕ್ಷರು ಮತ್ತು ಇನ್ನಿತರ ಗಣ್ಯರ ಜೊತೆ ಚರ್ಚೆ ನಡೆಸಿ, ಒತ್ತಡ ತರುವ ಕೆಲಸ ಮಾಡಿದ್ದೇವೆ. ಅದು ಕೂಡ ಶೀಘ್ರದಲ್ಲೇ ಬಗೆಹರಿಯುತ್ತದೆ ಎಂದರು.

ಶಿವಮೊಗ್ಗ ವಿಮಾನ ನಿಲ್ದಾಣದ ನೈಟ್‌ಲ್ಯಾಂಡಿಂಗ್ ಕಾಮಗಾರಿಗೆ ಹಣ ಬಿಡುಗಡೆಯಾಗಿ ಕಾಮಗಾರಿ ಪ್ರಾರಂಭವಾಗಿದೆ. ಆರು ತಿಂಗಳೊಳಗೆ ಕೆಲಸ ಮುಗಿಸುವ ಭರವಸೆ ನೀಡಿದ್ದಾರೆ ಎಂದರು.

ಹೊಂಬುಜ ಕ್ಷೇತ್ರದಲ್ಲಿ ಸಂಘ ಪೂಜೆ

ರಿಪ್ಪನ್ ಪೇಟೆ : ತ್ರಿಕೂಟ ಜಿನಾಲಯದ ಶ್ರೀ 1008 ಪಾರ್ಶ್ವನಾಥ ಸ್ವಾಮಿಗೆ 108 ಕಲಶಗಳ ಮಹಾಭಿಷೇಕ ಹಾಗೂ ಸಂಘಪೂಜೆ ಕಾರ್ಯಕ್ರಮವು ಜಗದ್ಗುರು ಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಕಂಬದಹಳ್ಳಿ ಶ್ರೀ ಜೈನ್ ಮಠದ ಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಹಾಗೂ ಕೊಲ್ಲಾಪುರ ಶ್ರೀ ಜೈನ್ ಮಠದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮಿಗಳ ಉಪಸ್ಥಿತಿಯಲ್ಲಿ ಭಕ್ತರು ಮಹಾಭಿಷೇಕ ಹಾಗೂ ಧಾರ್ಮಿಕ ಪೂಜಾ ವಿಧಾನಗಳಲ್ಲಿ ಭಾಗವಹಿಸಿದರು. ಪ್ರಾತಃಕಾಲದಲ್ಲಿ ಕುಮುದ್ವತಿ ತೀರ್ಥದಿಂದ ಅಗ್ರೋದಕ ತರಲಾಯಿತು.

ಈ ಸಂದರ್ಭದಲ್ಲಿ ಮಂಗಳ ಪ್ರವಚನ ನೀಡಿದ ಶ್ರೀಗಳು, ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಶಾಂತಿನಾಥ ಸ್ವಾಮಿ ಸನ್ನಿಧಿಯಲ್ಲಿ ನಡೆಯುವ ಮಹಾಭಿಷೇಕ ಜೈನ ಧರ್ಮದ ಆಚರಣೆ. ಜೀವನದಲ್ಲಿ ಕಷ್ಟ- ಕಾರ್ಪಣ್ಯ ಇರುವುದು ಸಹಜ. ಆದರೆ ಜೀವನ ಪಾವನವಾಗಲು ಧರ್ಮ ಪರಿಪಾಲನೆಯಿಂದ ವಿಘ್ನಗಳು ದೂರವಾಗುತ್ತವೆ ಎಂದು ಹೇಳಿದರು.



ಅಧಿನಾಯಕ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಮಹಾಮಾತೆ ಯಕ್ಷಿ ಅಭೀಷ್ಟವರಪ್ರದಾಯಿನಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ವಿಶೇಷ ಪೂಜಾ ವಿಧಾನಗಳು ನಡೆಯಿತು. ಬೆಂಗಳೂರಿನ ಶ್ರೀಮತಿ ರೂಪಲ್ ಜೈನ್ ಹಾಗೂ ಶ್ರೀ ರಜನೀಶ್ ಜೈನ್ ಸೇವಾಕರ್ತರಾಗಿ ಭಾಗವಹಿಸಿದ್ದು, ಶ್ರೀಗಳು ಆಶೀರ್ವದಿಸಿದರು. ವಿವಿಧ ಊರುಗಳಿಂದ ಆಗಮಿಸಿದ ಭಕ್ತರು ಶ್ರೀಕ್ಷೇತ್ರದ ಜಿನಮಂದಿರಗಳ ದರ್ಶನ ಪಡೆದು ಧನ್ಯರಾದರು.ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಯಕ್ಷಗಾನ ಪ್ರದರ್ಶನವೂ ನಡೆಯಿತು.

ಇಂದು ನೂತನ ಪದಾಧಿಕಾರಿಗಳ ಪದಗ್ರಹಣ

ಶಿವಮೊಗ್ಗ : ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಜಿಲ್ಲಾ ಮಟ್ಟದ ನೌಕರರ ಸಮಾವೇಶ ಮಾ.15ರಂದು ಬೆಳಗ್ಗೆ 10 ಗಂಟೆಗೆ ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲಾಧ್ಯಕ್ಷ ಎಂ.ಹೆಚ್. ಮಲ್ಲಿಕಾರ್ಜುನ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಪಂ ಸಿಇಒ ಎನ್.ಹೇಮಂತ್ ಉದ್ಘಾಟಿಸಲಿದ್ದಾರೆ. ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಶ್ರೀ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಹನುಮಂತಪ್ಪ, ಜಿಪಂ ಉಪಕಾರ್ಯದರ್ಶಿ ಅನ್ನಪೂರ್ಣ ಎನ್. ಮುದುಕಮ್ಮನವರ್ ಮತ್ತಿತರರನು ಆಗಮಿಸಲಾಗಿದೆ. ಕುವೆಂಪು ವಿವಿ ಕನ್ನಡ ವಿಭಾಗದ ಡಾ.ಜಿ.ಪ್ರಶಾಂತ್ ನಾಯಕ್ ವಾಲ್ಮೀಕಿ ನಾಯಕ ಜನಾಂಗದ ಸಾಂಸ್ಕೃತಿಕ ಜವಾಬ್ದಾರಿ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದರು.

ಶ್ರೀ ರಂಗನಾಥಸ್ವಾಮಿ ನೂತನ ರಥ ಸಮರ್ಪಣಾ ಕಾರ್ಯಕ್ರಮ

ಸೊರಬ: ಪಟ್ಟಣದ ಆರಾಧ್ಯ ದೇವ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ನೂತನ ರಥ ಸಮರ್ಪಣಾ ಕಾರ್ಯಕ್ರಮ ಮಾ.24ರಿಂದ 30ರವರೆಗೆ ನಡೆಯಲಿದೆ ಎಂದು ಶ್ರೀರಂಗನಾಥ ದೇವಸ್ಥಾನದ ನೂತನ ಬ್ರಹ್ಮ ರಥ ಸಮಪರ್ಣಾ ಸಮಿತಿ ಅಧ್ಯಕ್ಷ ಎಚ್. ಗಣಪತಿ ಹುಲ್ತಿಕೊಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶ್ರೀ ರಂಗನಾಥ ದೇವಸ್ಥಾನದ ಬ್ರಹ್ಮ ರಥ ನಿರ್ಮಾಣ ಕಾರ್ಯ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಮಪರ್ಣಾಗೊಳಿಸಲು ಶನಿವಾರ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ 25 ಲಕ್ಷ ಅನುದಾನದ ಜೊತೆಗೆ ಭಕ್ತರು ದೇಣಿಗೆ ನೀಡಿದ್ದರಿಂದ ಉತ್ತಮವಾದ ರಥ ನಿರ್ಮಿಸಲು ಸಾಧ್ಯವಾಗಿದೆ. ಧಾರ್ಮಿಕ ಕಾರ್ಯಕ್ರಮದ ಜವಾಬ್ದಾರಿಯನ್ನು ದೇವಸ್ಥಾನದ ಪ್ರಧಾನ ಅರ್ಚಕ ಘನಪಾಠಿ ನಾರಾಯಣ ಭಟ್ ಮರಾಠೆ ಅವರು ವಹಿಸಿಕೊಂಡಿದ್ದಾರೆ. ಮಾ.28 ರಂದು ಬೆಳಗ್ಗೆ 9ಕ್ಕೆ ಸಾಗರ ರಸ್ತೆಯ ಎಪಿಎಂಸಿ ಪ್ರಾಂಗಣದಿಂದ ನೂತನ ರಥವು ಪುರಪ್ರವೇಶವಾಗಲಿದೆ. ಮಹಿಳೆಯರಿಂದ ಪೂರ್ಣಕುಂಭ ಮೆರವಣಿಗೆ, ವಿವಿಧ ವಾದ್ಯ ಘೋಷಗಳೊಂದಿಗೆ ದೇವಸ್ಥಾನದ ಮುಂಭಾಗಕ್ಕೆ ಸ್ವಾಗತ ಮಾಡಿಕೊಳ್ಳಲಾಗುವುದು ಎಂದರು.



ಮಾ.29ರಂದು ಸಂಜೆ 4 ಕ್ಕೆ ಶ್ರೀನಿವಾಸಕಲ್ಯಾಣಧಾರ್ಮಿಕಪೂಜೆ, 30ರಂದು ಬ್ರಹ್ಮ ರಥ ಸಮರ್ಪಣಾ ಕಾರ್ಯಕ್ರಮ ನಡೆಯಲಿದ್ದು, ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಬ್ರಹ್ಮ ರಥ ಸಮರ್ಪಣಾ ಕಾರ್ಯಕ್ರಮದಲ್ಲಿ ಸಚಿವ ಮಧು ಬಂಗಾರಪ್ಪ, ಸಂಸದ ಬಿ.ವೈ. ರಾಘವೇಂದ್ರ ಇತರರು ಪಾಲ್ಗೊಳ್ಳಲಿದ್ದಾರೆ ಎಂದರು.

ತಹಶೀಲ್ದಾರ್ ಕೆ. ಪುರಂದರ, ಬ್ರಹ್ಮ ರಥ ಸಮರ್ಪಣಾ ಸಮಿತಿ ಸಂಚಾಲಕ ಘನಪಾಠಿ ನಾರಾಯಣ ಭಟ್ ಮರಾಠೆ, ಕಾರ್ಯದರ್ಶಿ ಪರಶುರಾಮ ಸಣ್ಣಬೈಲ್, ಖಜಾಂಚಿ ಪ್ರಶಾಂತ ಮೇಸ್ತ್ರಿ, ಮೆರವಣಿಗೆ ಸಮಿತಿ ಸಂಚಾಲಕ ಶಿವಾನಂದ ಬಿಳಗಿ, ಧಾರ್ಮಿಕ ಸಮಿತಿ ಸಂಚಾಲಕ ಬಂದಗಿ ಬಸವರಾಜ ಶೇಟ್, ಪ್ರಚಾರ ಸಮಿತಿ ಸಂಚಾಲಕ ಡಿ. ಶಿವಯೋಗಿ, ಅಲಂಕಾರ ಸಮಿತಿ ಸಂಚಾಲಕ ಡಿ. ಶಿವಯೋಗಿ, ಬಗರ್ ಹುಕುಂ ಸಮಿತಿ ಸಂಚಾಲಕ ಎಂ.ಡಿ. ಶೇಖರ್, ಪುರಸಭೆ ಮಾಜಿ ಸದಸ್ಯ ಪ್ರಸನ್ನ ಕುಮಾರ್ ದೊಡ್ಮನೆ, ಎಚ್. ಪ್ರಕಾಶ್ ಹಳೇಸೊರಬ, ಡಾಕಪ್ಪ ಪಾಣಿ, ಜಿ. ಕೆರಿಯಪ್ಪ, ಸುರೇಶ್ ಭಂಡಾರಿ ಉಪಸ್ಥಿತರಿದ್ದರು.

ಜೆಡಿಎಸ್ ಪಕ್ಷವನ್ನು ಮಹಿಳೆಯರೇ ಬಲಪಡಿಸಲಿ: ಶಾರದಾ

ಶಿವಮೊಗ್ಗ : ಮಹಿಳೆಯರು ಹೆಚ್ಚು ಸಂಘಟಿತರಾಗಿ ಪಕ್ಷ ಬಲಪಡಿಸಬೇಕು ಎಂದು ಶಿವಮೊಗ್ಗ ಗ್ರಾಮಾಂತರ ಶಾಸಕಿ ಶಾರದಾ ಪೂರ್ಯಾನಾಯ್ಕ ಹೇಳಿದರು.

ಜಿಲ್ಲಾ ಜೆಡಿಎಸ್ ಕಛೇರಿಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಗೀತಾ ಸತೀಶ್ ಅವರಿಗೆ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿ ಮನೆ ಮನೆಗೂ ಹೋಗಿ ಪಕ್ಷದ ಸಂಘಟನೆ ಮಾಡಬೇಕು. ನಮ್ಮೊಳಗೆ ಏನೇ ಭಿನ್ನಾಭಿಪ್ರಾಯವಿರಲಿ, ನಾಲ್ಕು ಗೋಡೆಯ ಮಧ್ಯೆ ಅದನ್ನು ಬಗೆಹರಿಸಿಕೊಳ್ಳಬೇಕು. ಮುಂದೆ ಮಹಾನಗರಪಾಲಿಕೆ, ತಾಪಂ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಬರಲಿದ್ದು, ಮಹಿಳಾ ಕಾರ್ಯಕರ್ತರು ಚುನಾವಣೆಗೆ ಸಿದ್ಧರಾಗಿ ಜನವರ ಕೆಲಸ ಮಾಡಬೇಕು. ಅದಕ್ಕೆ ಮಹಿಳೆಯರಿಗೆ ಹೆಚ್ಚಿನ ಶಕ್ತಿ ಬರಲಿ ಇನ್ನೂ ಹೆಚ್ಚಿನ ಉತ್ಸಾಹದಿಂದ ಪಕ್ಷದ ಎಲ್ಲಾ ಕಾರ್ಯಕರ್ತರು ಸೇರಿ ಕೆಲಸ ಮಾಡೋಣ ಎಂದರು.



ಜಿಲ್ಲಾ ಜೆಡಿಎಸ್ ಕಛೇರಿಯಲ್ಲಿ ಸಂಭ್ರಮದ ವಾತಾವರಣ ಮೂಡಿದೆ. ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪಕ್ಷಕ್ಕೆ ಬಲ ತುಂಬಿದ್ದಾರೆ ಎಂದರು. ರಾಜ್ಯ ಮಹಿಳಾ ಪ್ರಮುಖರಾದ ರಶ್ಮೀ ರಾಮೇಗೌಡ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಮೇದಿನಿ ವಿಶೇಷ ಉಪನ್ಯಾಸ ನೀಡಿದರು.

ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಮರು ಆಯ್ಕೆಯಾದ ಜಿಲ್ಲಾ ಮಹಿಳಾ ಅಧ್ಯಕ್ಷ ಗೀತಾ ಸತೀಶ್ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಜೆಡಿಎಸ್ ಉಪಾಧ್ಯಕ್ಷ ಕೆ.ಬಿ. ಪ್ರಸನ್ನಕುಮಾರ್ ,ಜಿಲ್ಲಾ ಜೆಡಿಎಸ್ ಅಧ್ಯಕ್ಷ ರಾಮಕೃಷ್ಣ, ಮಾಜಿ ಅಧ್ಯಕ್ಷ ಕಡಿದಾಳ್ ಗೋಪಾಲ್, ನಗರಾಧ್ಯಕ್ಷ ದೀಪಕ್ ಸಿಂಗ್, ಪ್ರಮುಖರಾದ ನರಸಿಂಹ ಗಂಧದಮನೆ, ದಾದಾಪೀರ್, ಗ್ರಾಮಾಂತರ ಯುವ ಅಧ್ಯಕ್ಷ ಮಧು, ತ್ಯಾಗರಾಜ್, ಹೆಚ್. ಎಂ.ಸಂಗಯ್ಯ, ಮುಖಂಡರು ಉಪಸ್ಥಿತರಿದ್ದರು.

ಮಿಷನ್ ಸುರಕ್ಷಾ ಅಭಿಯಾನ ಸಭೆಯಲ್ಲಿ ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ

ಮಕ್ಕಳಿಗೆ ಶಿಕ್ಷಣ ನೀಡುವುದು ಎಲ್ಲರ ಕರ್ತವ್ಯ



ಶಿವಮೊಗ್ಗ: ಮಕ್ಕಳಲ್ಲಿ ಬಾಲ್ಯವಿವಾಹ, ಲೈಂಗಿಕ ದೌರ್ಜನ್ಯದ ಕುರಿತು ಪರಿಣಾಮ ಕಾರಿಯಾಗಿ ಅರಿವು ಮೂಡಿಸುವ ಜೊತೆಗೆ ಮೂಲಭೂತ ಸೌಕರ್ಯಗಳು ಮತ್ತು ಶಿಕ್ಷಣ ನೀಡುವುದು ಎಲ್ಲರ ಕರ್ತವ್ಯ ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಹೇಳಿದರು.

ಜಿಲ್ಲಾಡಳಿತ, ಜಿ.ಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತಾಲೂಕು ಆಡಳಿತ ಮತ್ತು ತಾಲೂಕು ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಜಿ.ಪಂ. ಸಭಾಂಗಣದಲ್ಲಿ ಏರ್ಪಡಿಸಿದ್ದ ಮಿಷನ್ ಸುರಕ್ಷಾ ಅಭಿಯಾನದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಿಗಾಗಿ ಹಾಗೂ ಸಮಾಜಕ್ಕಾಗಿ ಮಾಡುತ್ತಿರುವ ಸೇವೆ ಎಂದು ತಿಳಿದು ನಿಯಮಿತವಾಗಿ ಈ ಕಾರ್ಯ ನಿರ್ವಹಣೆಯಲ್ಲಿ ತೊಡಗಬೇಕೆಂದರು.

ಮಕ್ಕಳ ಜೀವನ ಅತ್ಯಮೂಲ್ಯವಾಗಿದ್ದು ಅವರನ್ನು ನಾವು ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ ಇತರೆ ಅಪರಾಧಗಳಿಂದ ರಕ್ಷಣೆ ಮಾಡಿ, ಕಡ್ಡಾಯವಾಗಿ ಶಾಲೆಗೆ ದಾಖಲಾಗುವಂತೆ ಮಾಡಬೇಕು. ಪೋಕ್ಸೊ ಪ್ರಕರಣ ಆಗದಂತೆ, ಮಾದಕ ವಸ್ತುಗಳಿಂದ ಮಕ್ಕಳನ್ನು ದೂರವಿರುವಂತೆ ಪರಿಣಾಮಕಾರಿಯಾಗಿ ಅರಿವು ಮೂಡಿಸಬೇಕು. ಮಗುವಿನ ಬೆಳವಣಿಗೆ ಹಾಗೂ ಶೈಕ್ಷಣಿಕ ಅವಕಾಶಗಳನ್ನು ಅರಿತು ಅಧಿಕಾರಿಗಳು ಸಂವೇದನಾ ಶೀಲತೆಯಿಂದ ನಡೆದುಕೊಳ್ಳಬೇಕು ಎಂದರು.

ಸಂಕಷ್ಟಕ್ಕೀಡಾದ, ಮಾನಸಿಕವಾಗಿ ನೊಂದ ಮಕ್ಕಳಿಗೆ ಸಾಂತ್ವನ ಮತ್ತು ನೆರವು ನೀಡುವ ಟೆಲಿ ಮನಸ್ ಸಹಾಯವಾಣಿ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು. ಮಕ್ಕಳಿಗೆ ನಿಯಮಗಳನ್ನು ಪಾಲಿಸುವುದನ್ನು ಕಲಿಸಬೇಕು. ಈ ಎಲ್ಲ ಸಮಗ್ರ ವಿಷಯಗಳನ್ನು ಮಕ್ಕಳಲ್ಲಿ ಮತ್ತು ಪೋಷಕರಲ್ಲಿ ಮನದಟ್ಟು ಮಾಡುವ ಉದ್ದೇಶದಿಂದ ಪ್ರತಿ ತಾಲ್ಲೂಕು ಪರಿಶೀಲನೆ ಮಾಡಲಾಗುತ್ತಿದೆ. ಅಧಿಕಾರಿಗಳು ಈ ವಿಷಯಗಳ ಗಂಭೀರತೆ ಅರ್ಥ ಮಾಡಿಕೊಂಡು, ಯಾವುದೇ ಲೋಪವಾಗದಂತೆ ಕಾರ್ಯವೆಸಗಬೇಕು ಎಂದರು.

ಜಿಪಂ ಸಿಇಒ ಹೇಮಂತ್ ಎನ್. ಮಾತನಾಡಿ, ಖಾಸಗಿ ಶಾಲೆಯವರು ಎಸ್‌ಎಸ್‌ಎಲ್ಸಿ ಯಲ್ಲಿ ತಮ್ಮ ಶಾಲೆಗೆ ಉತ್ತಮ ಫಲಿತಾಂಶ ಬರಬೇಕೆಂಬ ಉದ್ದೇಶದಿಂದ 9 ನೇ ತರಗತಿಗೆ ವಿದ್ಯಾರ್ಥಿಗಳಿಗೆ ಟಿಸಿ ಕೊಟ್ಟು ಶಾಲೆಯಿಂದ ಹೊರಗೆ ಕಳುಹಿಸಬಾರದು. ಶಿಕ್ಷಣದ ಗುರಿ, ಪಾಠದೊಂದಿಗೆ, ಆಟ ಮತ್ತು ಊಟವೂ ಆಗಿರಬೇಕು.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆ ತರಲೇಬೇಕು. ಶಿಕ್ಷಣ ಸಚಿವರೂ ಕೂಡ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗಂಭೀರವಾಗಿ ಪರಿಗಣಿಸಿದ್ದಾರೆ ಎಂದರು.

ತಾಲೂಕಿನಲ್ಲಿ 85 ಲೈಂಗಿಕ ದೌರ್ಜನ್ಯ (ಪೋಕ್ಸೊ) ಪ್ರಕರಣ ದಾಖಲಾಗಿದ್ದು ಮಕ್ಕಳ ಮೇಲಿನ ಅಪರಾಧ ತಡೆಯಲು ಕಾವಲು ಸಮಿತಿ ಸಭೆಗಳಲ್ಲಿ, ಮಕ್ಕಳ ಗ್ರಾಮ ಸಭೆಗಳಲ್ಲಿ ಪರಿಣಾಮಕಾರಿಯಾಗಿ ಮಕ್ಕಳಲ್ಲಿ ಅರಿವು ಮೂಡಿಸಬೇಕು ಎಂದರು.

ಜಿಲ್ಲಾಧಿಕಾರಿಗಳು, ಮಕ್ಕಳ ಜೀವನ ಹಾಳಾಗ್ತಾ ಇದೆ. ನಾವು ಕೇವಲ ಅಂಕಿ ಸಂಖ್ಯೆಗಳಲ್ಲಿ ಈ ಪ್ರಕರಣಗಳನ್ನು ನೋಡದೆ, ಮಾನವೀಯತೆಯಿಂದ ಕೆಲಸ ಮಾಡಬೇಕು ಎಂದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ತಾಜುದ್ದೀನ್ ಖಾನ್, ಪಾಲಿಕೆ ಆಯುಕ್ತ ಕೆ.ಮಾಯಣ್ಣ ಇದ್ದರು.

ಸಚಿವರಿಗೆ ಶ್ರೀ ಡಿ. ದೇವರಾಜ ಅರಸು ಜನಸ್ಪಂದನ ಸೇವಾ ಟ್ರಸ್ಟ್ ಮನವಿ

ಹಳ್ಳಿಗಳಿಗೆ ಪರಿಶುದ್ಧ ಕುಡಿಯುವ ನೀರು ಸರಬರಾಜು ಮಾಡಿ

ಭದ್ರಾವತಿ : ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ದೊಣಬಘಟ್ಟ ಮತ್ತು ಬಿಳಿಕಿ ಗ್ರಾಪಂ ವ್ಯಾಪ್ತಿಯ ಹಳ್ಳಿಗಳಿಗೆ ಪರಿಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಭದ್ರಾ ನದಿಯಿಂದ ನೀರು ಒದಗಿಸಲು ಕ್ರಮ ಕೈಗೊಳ್ಳುವಂತೆ ಜನ್ನಾಪುರ ಶ್ರೀ ಡಿ. ದೇವರಾಜ ಅರಸು ಜನಸ್ಪಂದನ ಸೇವಾ ಟ್ರಸ್ಟ್ ವತಿಯಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್. ಮಧುಬಂಗಾರಪ್ಪ ಅವರಿಗೆ ಮನವಿ ಸಲ್ಲಿಸಿ ಆಗ್ರಹಿಸಲಾಗಿದೆ.

ಈ ಸಂಬಂಧ ಟ್ರಸ್ಟ್ ಛೇರ್ಮನ್, ನಗರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಆರ್. ವೇಣುಗೋಪಾಲ್ ಮನವಿ ಸಲ್ಲಿಸಿದ್ದು, ಕಳೆದ ಸುಮಾರು 50 ವರ್ಷಗಳಿಂದ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ. ಹೋರಾಟದ ಸ್ಮರಣೆಗಾಗಿ ಗ್ರಾಮೀಣೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಇದಕ್ಕೆ ಪೂರಕವಾಗಿ ವಿಧಾನಸಭಾ ಕ್ಷೇತ್ರದ ದೊಣಬಘಟ್ಟ ಹಾಗೂ ಬಿಳಿಕಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಪರಿಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳುವುದು.



ಪ್ರಸ್ತುತ ದೊಣಬಘಟ್ಟ ಮತ್ತು ಬಿಳಿಕಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಬಿಳಿಕಿ ಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದು, ಈ ಕೆರೆಯಲ್ಲಿ ಮೀನು ಸಾಕಾಣಿಕೆ ಮಾಡುತ್ತಿರುವುದರಿಂದ ಹಾಗು ಸುತ್ತಮುತ್ತಲಿನ ಜಮೀನುಗಳಿಂದ ರಾಸಾಯನಿಕ ಮಿಶ್ರಿತ ನೀರು ಸೇರ್ಪಡೆಗೊಳ್ಳುತ್ತಿರುವುದರಿಂದ ಕೆರೆಯ ನೀರು ಕಲ್ಮಶಗೊಳ್ಳುತ್ತಿದೆ. ಈ ನೀರಿನ ಬಳಕೆಯಿಂದ ಗ್ರಾಮಸ್ಥರು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಈ ನಡುವೆ ಗ್ರಾಮಸ್ಥರು ದೂರದ ನಗರ ಪ್ರದೇಶದ ಕುಡಿಯುವ ನೀರನ್ನು ಅವಲಂಬಿಸುವಂತಾಗಿದೆ. ಗ್ರಾಮಸ್ಥರು ನಗರ ಪ್ರದೇಶಕ್ಕೆ ಬಂದು ಹೋಗಲು ಸಾಕಷ್ಟು ತೊಂದರೆ ಎದುರಿಸುತ್ತಿದ್ದಾರೆಂದು ವೇಣುಗೋಪಾಲ್ ಮನವಿಯಲ್ಲಿ ವಿವರಿಸಿದ್ದಾರೆ.

ನಗರಸಭೆ ವ್ಯಾಪ್ತಿಯ ಕಾಗದನಗರ ಸಮೀಪದ ಭದ್ರಾ ನದಿಯಿಂದ ದೊಣಬಘಟ್ಟ ಮತ್ತು ಬಿಳಿಕಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಪರಿಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡಬಹುದಾಗಿದ್ದು, ಈ ಹಿನ್ನಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು ಹಾಗು ತಾಲೂಕಿನ ವಿವಿಧ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಹೆಚ್ಚುವರಿ ಕುಡಿಯುವ ನೀರಿನ ಟ್ಯಾಂಕ್‌ಗಳು, ಪೈಪ್ ಲೈನ್ ಅಳವಡಿಕೆ ಮತ್ತು ಫಿಲ್ಟರ್ ಪಂಪ್ ಹೌಸ್ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸುವಂತೆ ಸಚಿವರಿಗೆ ವೇಣುಗೋಪಾಲ್ ಆಗ್ರಹಿಸಿದ್ದಾರೆ.

ಮನವಿಗೆ ಸ್ಪಂದಿಸಿರುವ ಸಚಿವರು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಪಂ ಸಿಇಒಗೆ ಸೂಚಿಸದ್ದಾರೆಂದು ಸಚಿವರ ವಿಶೇಷ ಕರ್ತವ್ಯಾಧಿಕಾರಿ ಕೆ.ಸಿ. ಶ್ರೀಪತಿ ವೇಣುಗೋಪಾಲ್ ಅವರಿಗೆ ತಿಳಿಸಿದ್ದಾರೆ.

ಕಿರುಸುದ್ದಿ

ಉಣ್ಣೆ ಸಂಸ್ಕರಣಾ ಕೇಂದ್ರ ಸ್ಥಾಪನೆಗೆ ಪ್ರಸ್ತಾವನೆ

ನಾಯಕನಹಟ್ಟಿ: ಹೋಬಳಿಯ ಮಲ್ಲೂರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ರೇಖಲಗೆರೆ ಅಮೃತ್ ಮಹಲ್ ಕಾವಲಿನಲ್ಲಿ ಕೇಂದ್ರೀಯ ಉಣ್ಣೆ ಸಂಸ್ಕರಣ ಕೇಂದ್ರ ಸ್ಥಾಪಿಸಲು ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್ ಡಿ ಕುಮಾರಸ್ವಾಮಿ ಕೇಂದ್ರ ಜವಳಿ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ ಎಂದು ಜೆಡಿಎಸ್ ಮುಖಂಡ ವೀರಭದ್ರಪ್ಪ ತಿಳಿಸಿದ್ದಾರೆ. ರೇಖಲಗೆರೆ ಅಮೃತ್ ಮಹಲ್ ಕಾವಲಿನಲ್ಲಿ ಕೇಂದ್ರೀಯ ಉಣ್ಣೆ ಸಂಸ್ಕರಣ ಕೇಂದ್ರ ಸ್ಥಾಪಿಸಿದರೆ ಸ್ಥಳೀಯ ಉಣ್ಣೆಗೆ ಹೆಚ್ಚಿನ ಬೆಲೆ ಒದಗಿಸುವುದು, ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆ ಮತ್ತು ಕುರಿಗಾಯಿಗಳಿಗೆ ಉದ್ಯೋಗ ಅವಕಾಶ ಒದಗಿಸುವುದು ಈ ಕೇಂದ್ರದ ಮುಖ್ಯ ಉದ್ದೇಶ. ಪ್ರಸ್ತುತ ಕೇಂದ್ರೀಯ ಉಣ್ಣೆ ಸಂಸ್ಕರಣ ಕೇಂದ್ರ ಉತ್ತರ ಭಾರತದ ರಾಜಸ್ಥಾನ್ ರಾಜ್ಯದ ಜೈಪುರ ಹತ್ತಿರವಿರುವ ಅವಿಕಾ ನಗರದಲ್ಲಿದೆ, ದಕ್ಷಿಣ ಭಾರತದಲ್ಲಿ ಇಲ್ಲ, ಆದ್ದರಿಂದ ಕರ್ನಾಟಕದ ಬರಪೀಡಿತ ಪ್ರದೇಶ ಎಂಬ ಹಣೆಪಟ್ಟಿ ಹೊತ್ತಿರುವ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ನಾಯಕನಹಟ್ಟಿ ಹೋಬಳಿಗೆ ಕೇಂದ್ರೀಯ ಉಣ್ಣೆ ಸಂಸ್ಕರಣ ಕೇಂದ್ರ ಸ್ಥಾಪಿಸಿದರೆ ಈ ಭಾಗದ ರೈತರಿಗೆ ಹಾಗೂ ಕುರಿಗಾಹಿಗಳಿಗೆ ಮತ್ತು ಉಣ್ಣೆ ಕೈಮಗ್ಗ ದಾರರಿಗೆ ತುಂಬಾ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ರೈತ ಮುಖಂಡ ತಿಪ್ಪೇಸ್ವಾಮಿ ಆರೋಗ್ಯ ವಿಚಾರಣೆ

ಹಿರಿಯೂರು: ರೈತಸಂಘದ ಜಿಲ್ಲಾಧ್ಯಕ್ಷ ಕೆ.ಟಿ.ತಿಪ್ಪೇಸ್ವಾಮಿ ಅನಾರೋಗ್ಯದಿಂದ ಬಳಲುತಿದ್ದು, ಇವರ ನಿವಾಸಕ್ಕೆ ಜೆಡಿಎಸ್ ಮುಖಂಡ ರವೀಂದ್ರಪ್ಪ ಹಾಗೂ ಜಿಲ್ಲಾಧ್ಯಕ್ಷ ಮಂಜುನಾಥ್, ರೈತ ಮುಖಂಡ ಮುಂಗಸವಳ್ಳಿ ತಿಮಣ್ಣ ಬೇಟಿ ನೀಡಿ ಆರೋಗ್ಯ ವಿಚಾರಿಸಿದರು. ಶೀಘ್ರ ಗುಣಮುಖವಾಗಿ ರೈತಪರ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತೇನೆ ಎಂದು ತಿಪ್ಪೇಸ್ವಾಮಿ ಹೇಳಿದರು.

ಡಾ.ಎಸ್.ಎಂ.ಸಾಧನಾ ರಾಜ್ಯಕ್ಕೆ 5ನೇ ರ‍್ಯಾಂಕ್

ಚಿತ್ರದುರ್ಗ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಡೆಸಿದ ದಂತ ವೈದ್ಯಕೀಯ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಚಿತ್ರದುರ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹಿರಿಯ ನಿವಾಸಿ ವೈದ್ಯೆ ಡಾ.ಎಸ್.ಎಂ.ಸಾಧನಾ ರಾಜ್ಯಕ್ಕೆ 5ನೇ ರ‍್ಯಾಂಕ್ ಪಡೆದಿದ್ದಾರೆ. ನಗರದ ಮೈರಾಡ್ ಸಂಸ್ಥೆಯ ಉದ್ಯೋಗಿ ಎಂ.ಎಸ್.ವೇದಮೂರ್ತಿ ಮತ್ತು ಎಂ.ಮಂಗಳಾ ಅವರ ದ್ವಿತೀಯ ಪುತ್ರಿಯಾದ



ಡಾ.ಸಾಧನಾ ಚಿತ್ರದುರ್ಗದ ಪ್ರಸಿದ್ಧ ಎಸ್‌ಜೆಎಂ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಎಂಡಿಎಸ್ ವ್ಯಾಸಂಗ ಮಾಡಿದ್ದಾರೆ. ಬೆಂಗಳೂರಿನ ರಾಜರಾಜೇಶ್ವರಿ ದಂತ ವೈದ್ಯಕೀಯ ಕಾಲೇಜಿನಲ್ಲಿ ಬಿಡಿಎಸ್ ಪದವಿ ಪೂರೈಸಿದ್ದು, ಅಲ್ಲಿಯೂ ಸಹ ಚಿನ್ನದ ಪದಕ ಪಡೆದಿದ್ದರು.

ನರೇಶ್‌ಕುಮಾರ್‌ಗೆ ಜಿಲ್ಲಾ ರಕ್ಷಣಾಧಿಕಾರಿ ಪ್ರಶಂಸಾ ಪತ್ರ

ಪರಶುರಾಂಪುರ: ಸ್ಥಳೀಯ ಪೊಲೀಸ್ ಠಾಣೆಯ ಮುಖ್ಯ ಪೇದೆ ನರೇಶ್ ಕುಮಾರ್‌ಗೆ ಎಸ್‌ಪಿ ರಂಜಿತಾಕುಮಾರ್ ಬಂಡಾರು ಪ್ರಶಂಸಾ ಪತ್ರ ನೀಡಿ ಸೇವೆಯನ್ನ ಶ್ಲಾಘಿಸಿದ್ದಾರೆ. 2016ರಲ್ಲಿ ಮಾರಣಾಂತಿಕ ಅಪಘಾತ ಪ್ರಕರಣದಲ್ಲಿ ಅಮಾನತು



ಪಡಿಸಿಕೊಂಡಿದ್ದ ಆಟೋ ಮಾಲೀಕರನ್ನು ಪತ್ತೆ ಮಾಡಿ ನ್ಯಾಯಾಲಯದ ಮುಖಾಂತರ ಆಟೋವನ್ನ ವಾರಸುದಾರರಿಗೆ ಕೊಡಿಸಿ ದೀರ್ಘ ಕಾಲದಿಂದ ಉಳಿದಿದ್ದ ಆಟೋವನ್ನ ವಿಲೇವಾರಿ ಮಾಡಿ ಕರ್ತವ್ಯ ನಿರ್ವಹಿಸಿದ್ದಕ್ಕಾಗಿ ಪ್ರಶಂಸಾ ಪತ್ರ ನೀಡಲಾಗಿದೆ.

ಮಹಿಳಾ ದಿನಾಚರಣೆ

ಹಿರಿಯೂರು: ನಗರದ ರೋಟರಿ ಸಭಾಭವನದಲ್ಲಿ ರೋಟರಿ ಸಂಸ್ಥೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಸರ್ವೋದಯ, ಬ್ರಹ್ಮಜ್ಞಾನ ಸಮಾಜ ಇವರುಗಳ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ರೆಡ್‌ಕ್ರಾಸ್ ಚೇರ್ಮನ್ ಹೆಚ್.ಎಸ್.ಸುಂದರ್‌ರಾಜ್, ವೈಸ್‌ಚೇರ್ಮನ್ ಬಿ.ಕೆ.ನಾಗಣ್ಣ, ರೋಟರಿಅಧ್ಯಕ್ಷ ಕೆ.ಎ.ವರುಣ್, ಸರ್ವೋದಯ ಬ್ರಹ್ಮಜ್ಞಾನ ಸಮಾಜಅಧ್ಯಕ್ಷರಾದಎಲ್.ಆನಂದಶೆಟ್ಟಿ, ಯುತ್‌ರೆಡ್ ಕ್ರಾಸ್ ಶಶಿಕಲಾ ರವಿಶಂಕರ್, ಹೆಚ್.ಎಸ್. ಪ್ರಶಾಂತ್ ಪ್ರೇಮರಾಣಿ, ಗಾಯತ್ರಿ ಶಿವರಾಂ, ನಮಿತಾ ಅಭಿನಂದನ್, ನಾಗರತ್ನ ಬದರೀನಾಥ್ ಸೇರಿದಂತೆ ವಿವಿಧ ಸೇವಾಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.




ಚಿಕ್ಕಜಾಜೂರು ಸಮೀಪದ ಕಲ್ಲವ್ವನಾಗತಿಹಳ್ಳಿ ಶಾಲೆಗೆ ಗ್ರಾಮ ಪಂಚಾಯಿತಿ ಸದಸ್ಯ ಕೆ.ಎಚ್.ರಂಗನಾಥ್ ವಿದ್ಯಾರ್ಥಿಗಳಿಗೆ ಉಚಿತವಾಗಿ 30 ಸಾವಿರ ರೂ. ಮೌಲ್ಯದ ಬಟ್ಟೆಯನ್ನು ವಿತರಿಸಿದರು. ಸಿಬ್ಬಂದಿ ಪ್ರಶಾಂತ್, ಲತಾ, ಲೋಹಿತ್, ಹಾಲೇಶ್, ಮಲ್ಲಿಕಾರ್ಜುನ, ಮಾರುತಿ ಇದ್ದರು.

ವಿದ್ಯೆ ಜೊತೆ ಉತ್ತಮ ಸಂಸ್ಕಾರ ಇರಲಿ

ಹೊಸದುರ್ಗ: ವಿದ್ಯಾರ್ಥಿಗಳು ಉತ್ತಮ ಅಂಕ ಪಡೆಯುವ ಜೊತೆಗೆ ಸಂಸ್ಕಾರ ಮೈಗೂಡಿಸಿಕೊಳ್ಳಬೇಕು. ಆಗ ನಿರ್ದಿಷ್ಟವಾದ ಗುರಿಯನ್ನು ಮುಟ್ಟಲು ಸುಲಭವಾಗುತ್ತದೆ. ವಾರ್ಷಿಕ ಪರೀಕ್ಷೆ ಸಮೀಪ ಬರುತ್ತಿರುವುದರಿಂದ ಅತಿ ಹೆಚ್ಚಿನ ಸಮಯವನ್ನು ವಿದ್ಯಾಭ್ಯಾಸದಲ್ಲಿ



ತೊಡಗಿಸಿಕೊಳ್ಳುವುದರಿಂದ ಹೆಚ್ಚಿನ ಅಂಕ ಗಳಿಸಬಹುದು ಮತ್ತು ಮುಂದಿನ ವಿಷಯ ಆಯ್ಕೆ ಮಾಡೊಕೊಳ್ಳುವಾಗ ಅನುಕೂಲವಾಗುತ್ತದೆ ಎಂದು ಮುಖ್ಯ ಶಿಕ್ಷಕ ಸಿ.ಎಮ್. ಮಲ್ಲಿಕಾರ್ಜುನ್ ತಿಳಿಸಿದರು.ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹೊಸದುರ್ಗ ತಾಲ್ಲೂಕಿನ ಕಾರೇಹಳ್ಳಿ ಗುರುರೇಣುಕಾ ಪ್ರೌಢ ಶಾಲೆ ಮತ್ತು ಚಿಕ್ಕಬ್ಯಾಲದಕೆರೆ ಗೇಟಿನ ಮಾರುತಿ ಗ್ರಾಮಾಂತರ ಪ್ರೌಢ ಶಾಲೆಯ 10 ನೇ ತರಗತಿ ಮಕ್ಕಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭ ಮತ್ತು ವಿಶೇಷ ಬೋಧನಾ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ತಂದೆ ತಾಯಿ ಗುರು ಹಿರಿಯರನ್ನ ಗೌರವಿಸುವಂತಹ ಶಿಕ್ಷಣ ಪಡೆದುಕೊಳ್ಳುವ ಅವಶ್ಯಕತೆ ಇದೆ. ಎಂದರು. ಯೋಗೀಶ, ಶಂಕರನಾಯ್ಕ್, ಗುರುನಾಥ್ ಹಾಗೂ ಗ್ರಾಮಸ್ಥರು ಇದ್ದರು.



ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಬೀಸನಹಳ್ಳಿ ಕರಿಯಮ್ಮ ಜಾತ್ರೆ ಶನಿವಾರ ಅದ್ದೂರಿಯಾಗಿ ನಡೆಯಿತು. ಆವಿನಹಟ್ಟಿ ಗೌಡ್ರು ಕುಟುಂಬದವರು ದೊಡ್ಡ ಎಡೆ ಹಾಕಿಸಿದರು.

ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಉಸ್ತುವಾರಿ ಸಚಿವ ಡಿ.ಸುಧಾಕರ್ ಅಭಿಮತ

ಆಸರೆಯಾದ ಯೋಜನೆ

ಚಿತ್ರದುರ್ಗ: ಮಹಿಳೆಯರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಇಂದು ಮಹಿಳೆಯರ ಬದುಕಿಗೆ ಆಸರೆಯಾಗಿವೆ ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಮಿಷನ್ ಶಕ್ತಿ ಹಾಗೂ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ನಗರದ ಜಿಲ್ಲಾ ವಾಲ್ಮೀಕಿ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

2023ರ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಮಹಿಳೆಯರನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ನಮ್ಮ ಸರ್ಕಾರ ಯೋಜನೆಗಳನ್ನು ಜಾರಿಗೆ ತಂದಿದೆ. ಗೃಹ ಜ್ಯೋತಿ ಯೋಜನೆ, ಗೃಹಲಕ್ಷ್ಮಿ ಯೋಜನೆಯಡಿ ರೂ.2,000 ಹಣ, ಯುವ ಜನತೆಗೆ ಯುವನಿಧಿ, ಶಕ್ತಿ ಯೋಜನೆಯಡಿ ಉಚಿತ ಪ್ರಯಾಣದಂತಹ ಯೋಜನೆಗಳು ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸಿವೆ. ಇಂತಹ ಕೆಲಸಗಳು ಸರ್ಕಾರದ ಮೂಲಕ ಸಾಧ್ಯವೇ ಎಂಬ ಅನುಮಾನ ಮೊದಲಿತ್ತು, ಆದರೆ ನಮ್ಮ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಎಂದರು.

ಮಹಿಳೆ ಎಂದರೆ ಶಕ್ತಿಯ ಸ್ವರೂಪಿ ಎಂಬುದನ್ನು ನಮ್ಮ ಪುರಾಣಗಳು ಮತ್ತು ಇತಿಹಾಸ ಸಾರುತ್ತಾ ಬಂದಿವೆ. ಆದಿಪರಾಶಕ್ತಿ, ಚಾಮುಂಡೇಶ್ವರಿಯಂತಹ ಶಕ್ತಿ ದೇವತೆಗಳನ್ನು ನಾವು ಆರಾಧಿಸುತ್ತೇವೆ. ಮಹಿಳೆಯರಿಗೆ ಗೌರವ ನೀಡುವ ಸಂಸ್ಕೃತಿ ನಮ್ಮ



ದೇಶದ್ದು. ಮನೆಯ ದೀಪ ಬೆಳಗುವ ಶಕ್ತಿ ಮಹಿಳೆಯ ಕೈಯಲ್ಲಿದೆ. ಸಂಸಾರದಲ್ಲಿ ಶಾಂತಿ ನೆಲೆಸಲು ಮಹಿಳೆಯೇ ಕಾರಣ ಎಂದು ಅಭಿಪ್ರಾಯಪಟ್ಟರು.

ದೇಶದ ಉಕ್ಕಿನ ಮಹಿಳೆ ಇಂದಿರಾ ಗಾಂಧಿಯವರು 18 ವರ್ಷಗಳ ಕಾಲ ದೇಶವನ್ನು ಮುನ್ನಡೆಸಿ ಬಡವರ ಪರವಾದ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವರ ದಾರಿಯಲ್ಲೇ ಸಾಗುತ್ತಿರುವ ನಮ್ಮ ಸರ್ಕಾರವು ಬಡವರ ಪರ ಯೋಜನೆಗಳಿಗೆ ಮೊದಲ ಆದ್ಯತೆ ನೀಡುತ್ತಿದೆ ಎಂದು ಸಚಿವರು ಸ್ಮರಿಸಿದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ, ಮಾಜಿ ದೇವದಾಸಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ, ಮಹಿಳಾ ಪೌರಕಾರ್ಮಿಕರಿಗೆ ಸನ್ಮಾನ ಹಾಗೂ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಯೋಜನೆಯಡಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಚಳ್ಳಕೆರೆ ಶಾಸಕರು ಹಾಗೂ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಟಿ.ರಘುಮೂರ್ತಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್.ಶಿವಣ್ಣ, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿದರು.

- ಮಹಿಳೆಯರನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ಸರ್ಕಾರ ಯೋಜನೆಗಳನ್ನು ಜಾರಿಗೆ ತಂದಿದೆ
- ಉಚಿತ ಯೋಜನೆಗಳು ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸಿವೆ
- ಸರ್ಕಾರವು ಬಡವರ ಪರ ಯೋಜನೆಗಳಿಗೆ ಮೊದಲ ಆದ್ಯತೆ ನೀಡುತ್ತಿದೆ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು, ಆದಿ ಜಾಂಬವ ಅಭಿವೃದ್ಧಿ ನಿಗಮ ಅಧ್ಯಕ್ಷ ಜಿ.ಎಸ್.ಮಂಜುನಾಥ್, ಕೆಡಿಪಿ ಸದಸ್ಯರಾದ ಸುನಂದಾ, ಸಂತೋಷ್, ಜಿಲ್ಲಾ ಗ್ಯಾರಂಟಿ ಯೋಜನೆ ಸದಸ್ಯೆ ಇಂದಿರಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಹೆಚ್.ವಿಜಯಕುಮಾರ್, ಜಿಲ್ಲಾ ನಿರೂಪಣಾಧಿಕಾರಿ ಡಿ.ಮಂಜುನಾಥ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜೆ.ವೈಶಾಲಿ, ನೇರ್ಲಗಿ ಫೌಂಡೇಷನ್ ಅಧ್ಯಕ್ಷೆ ಮಮತಾ ನೇರ್ಲಗಿ ಹಾಜರಿದ್ದರು.

ಡಾ.ಮೆಲ್ವಿನ್‌ಕುಮಾರ್ ಮಾಹಿತಿ

ಎಚ್‌ಪಿವಿ ಸುರಕ್ಷಿತ



ಚಿತ್ರದುರ್ಗ: ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಕಂಡುಬರಲು ಹ್ಯೂಮನ್ ಪ್ಯಾಪಿಲೋಮ ವೈರಸ್ (ಎಚ್‌ಪಿವಿ) ಹೆಚ್ಚಾಗಿ ಕಾರಣವಾಗುತ್ತದೆ. ಇದನ್ನು ತಪ್ಪಿಸಲು ನೀಡುವ ಎಚ್‌ಪಿವಿ ಲಸಿಕೆ ಸುರಕ್ಷಿತವಾಗಿದ್ದು, ಗರ್ಭಕಂಠದ ಕ್ಯಾನ್ಸರ್ ಬಾರದಂತೆ ತಡೆಗಟ್ಟುತ್ತದೆ ಎಂದು ಲಸಿಕಾಕರಣದ ರಾಜ್ಯ ಯೋಜನಾಧಿಕಾರಿ ಡಾ.ಮೆಲ್ವಿನ್ ಕುಮಾರ್ ಹೇಳಿದರು.

ನಗರದ ನೆಹರು ನಗರ ಆರೋಗ್ಯ ಕೇಂದ್ರದಲ್ಲಿ, ಶುಕ್ರವಾರ ಆಯೋಜಿಸಿದ ಎಚ್‌ಪಿವಿ ಲಸಿಕಾ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಎಚ್‌ಪಿವಿ ಜನನಾಂಗದ ಸೋಂಕುಗಳಿಗೆ ಕಾರಣವಾಗುವ ಒಂದು ಸಾಮಾನ್ಯ ವೈರಸ್. ಭಾರತದಲ್ಲಿ ಕ್ಯಾನ್ಸರ್ ಪತ್ತೆಯಾದ ಮಹಿಳೆಯರ ಪೈಕಿ ಗರ್ಭಕಂಠದ ಕ್ಯಾನ್ಸರ್ ತುತ್ತಾದವರ ಸಂಖ್ಯೆ ಎರಡನೇ ಸ್ಥಾನದಲ್ಲಿದೆ. ದೇಶಾದ್ಯಂತ ನಡೆಯುತ್ತಿರುವ ಲಿಸಿಕಾಕರಣದ ಅಭಿಯಾನದಲ್ಲಿ ಮುಖ್ಯವಾಗಿ 14 ವರ್ಷ ತುಂಬಿದ 15 ವರ್ಷದ ಒಳಗಿನ ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಬಿ.ವಿ.ಗಿರೀಶ್ ಮಾತನಾಡಿ, ಎಚ್.ಪಿ.ವಿ. ಲಸಿಕೆ ಹೊಸದೇನಲ್ಲ. ಜಗತ್ತಿನಾದ್ಯಂತ ಈಗಾಗಲೇ 50 ಕೋಟಿ ಲಸಿಕೆಗಳನ್ನು ನೀಡಲಾಗಿದೆ ಎಂದರು.

ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ ಮಾಹಿತಿ ನೀಡುತ್ತಾ ಯಾವುದೇ ಊಹಾಪೋಹಗಳಿಗೆ ಕಿವಿಗೊಡದೆ ಪೋಷಕರು 14 ವರ್ಷ ತುಂಬಿದ 15 ವರ್ಷದ ಒಳಗಿನ ಹೆಣ್ಣು ಮಕ್ಕಳನ್ನು ಲಸಿಕಾ ಕೇಂದ್ರಕ್ಕೆ ಕರೆತಂದು ಲಸಿಕೆಗಳನ್ನು ಹಾಕಿಸಿ. ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಯಲು ಜನರು ಮುಂದೆ ಬರಬೇಕೆಂದು ಕರೆ ನೀಡಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಟಿ.ಕೃಷ್ಣನಾಯಕ್, ಡಾ. ಸೈಯದ್ ಬಿಲಾಲ್. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಜಾನಕಿ, ಸಂತೋಷ್, ವ್ಯಾಕ್ಸಿನ್ ಕೋಲ್ಡ್ ಚೈನ್ ಮ್ಯಾನೇಜರ್ ವೀರೇಶ್, ಆಶಾ ಮೆಂಟರ್ ತಬಿತಾ, ಎಚ್‌ಓ ಹನುಮಂತಪ್ಪ, ಪಿಎಚ್‌ಸಿಓ ಮನು, ಸಿಬ್ಬಂದಿ ಲಿಖಿತ, ಪದ್ಮ ಇದ್ದರು.

ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು

ನಾಯಕನಹಟ್ಟಿ: ವಿಜ್ಞಾನದ ವಿದ್ಯಾರ್ಥಿಗಳು ವಿಜ್ಞಾನದ ವಿಷಯದಲ್ಲಿ ಸಾಧನೆ ಮಾಡಲು ಸಿ.ವಿ ರಾಮನ್ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಯಶಸ್ಸು ಕಾಣಲು ಸಾಧ್ಯ ಎಂದು ಮಲ್ಲೂರಹಳ್ಳಿ ಮೂಗಬಸವೇಶ್ವರ ಹೈಟೆಕ್ ಶಾಲೆಯ ಕಾರ್ಯದರ್ಶಿ ಕೆ.ಆರ್. ತಿಪ್ಪೇಸ್ವಾಮಿ ಹೇಳಿರು.

ಶನಿವಾರ ನಾಯಕನಹಟ್ಟಿ ಸಮೀಪದ ಮಲ್ಲೂರಹಳ್ಳಿ ಗ್ರಾಮದಲ್ಲಿ ಮೂಗಬಸವೇಶ್ವರ ಹೈಟೆಕ್ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಿ.ವಿ ರಾಮನ್ ತಮಗೆ ವಿಜ್ಞಾನದಲ್ಲಿ ಆಸಕ್ತಿ ಇದ್ದುದರಿಂದ ಹೆಚ್ಚಿನ ವೇತನದ ಕೆಲಸವನ್ನು ಬಿಟ್ಟು ವಿಜ್ಞಾನದ ವಿಷಯದಲ್ಲಿ ಏನಾದರೂ



ಸಾಧನೆ ಮಾಡಲೇಬೇಕು ಎಂಬ ಹಂಬಲದಿಂದ ಹಗಲು ರಾತ್ರಿ ಕಷ್ಟಪಟ್ಟು ಬೆಳಕಿನ ಚದುರುವಿಕೆ ಎಂಬ ವಿಷಯದಲ್ಲಿ ಮಹತ್ವದ ಸಾಧನೆ ಮಾಡಿ ನೊಬೆಲ್ ಪ್ರಶಸ್ತಿ ಪಡೆದು ಸಾಧನೆ ಮಾಡಿದರು ಎಂದು ತಿಳಿಸಿದರು.

ಕೆ.ಟಿ. ಓಬಳೇಶ, ಎಚ್.ಕೆ. ಜ್ಯೋತಿ, ಗೀತಾ, ಎಚ್.ವಿ. ಶಿಲ್ಪ, ಜಿ.ಪಿ.ಪಾಲಾಕ್ಷ, ವಿಜಯಲಕ್ಷ್ಮಿ, ಕೆ.ಒ.ಚಂದನ, ಸುಚಿತ್ರ ಇದ್ದರು.

ಬಡ, ಕೂಲಿಕಾರ್ಮಿಕರ ಮಕ್ಕಳ ಭವಿಷ್ಯ ರೂಪಿಸಬೇಕು

ಹೊಸದುರ್ಗ: ಗ್ರಾಮೀಣ ರೈತರ, ಕೂಲಿ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಶಿಕ್ಷಕರು ಹೆಚ್ಚಿನ ಆಶ್ರಮವಹಿಸಿ ಅವರ ಬದುಕಿಗೆ ದಾರಿ ದೀಪವಾಗಿ ಮಕ್ಕಳ ಭವಿಷ್ಯವನ್ನು ರೂಪಿಸುವುದು ಅತ್ಯಗತ್ಯ ಎಂದು ಯುವ ಮುಖಂಡ ಬಿ.ಜಿ.ಅರುಣ್ ತಿಳಿಸಿದರು.

ತಾಲೂಕಿನ ಸಣ್ಣಕಿಟ್ಟದ ಹಳ್ಳಿಯ ಸರ್ಕಾರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕಿನ್ನರ ಕಲರವ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಗ್ರಾಮಗಳ ಅಭಿವೃದ್ಧಿಯಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಸರ್ಕಾರಗಳಿಂದ ಇಂತಹ ಗ್ರಾಮಗಳನ್ನು ಅಭಿವೃದ್ಧಿಪಡಿಸಿ ಮುಖ್ಯ ವಾಹಿನಿಗೆತರುವಕೆಲಸಮಾಡಬೇಕು. ಸಣ್ಣಕಿಟ್ಟದಹಳ್ಳಿಗ್ರಾಮದಲ್ಲಿ ಹಿಂದುಳಿದ ವರ್ಗಗಳ ಕುಟುಂಬಗಳು ಹೆಚ್ಚಾಗಿ ವಾಸವಾಗಿದ್ದು ಶಿಕ್ಷಣ, ಸ್ವಚ್ಛತೆ, ನೈರ್ಮಲೀಕರಣ ಕುರಿತಾದ ವಿಚಾರಗಳನ್ನ ಊರಿನ ಪ್ರಜ್ಞಾವಂತ ಯುವಕರು ತಿಳಿಸಬೇಕು. ಸರ್ಕಾರಿ



ಶಾಲೆಗಳಲ್ಲಿ ನುರಿತ ಶಿಕ್ಷಕರ ತಂಡ ಕಾರ್ಯನಿರ್ವಹಿಸುತ್ತಿದ್ದು ಎಸ್ ಡಿ ಎಂ ಸಿ ಸದಸ್ಯರು ಹಾಗೂ ಶಿಕ್ಷಕರ ಮಧ್ಯೆ ಅವಿನಾಭಾವ ಸಂಬಂಧವಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಶಾಂತಪ್ಪ, ಎಇ ಸಿ ಓ.ಎಂ. ಶಶಿಧರ, ರಾಜಪ್ಪ, ಎಸ್ ಡಿ ಎಂ ಸಿ ಅಧ್ಯಕ್ಷ ಚಿಕ್ಕಪ್ಪ, ಪ್ರಭಾರ ಮುಖ್ಯ ಶಿಕ್ಷಕ ಡಿ. ಶ್ರೀನಿವಾಸ ಇದ್ದರು.



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮುದಾಯ, ಶೈಕ್ಷಣಿಕ ಸ್ವಯಂಸೇವಕರು ಹಾಗೂ ಅಕ್ಷರ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಗಣಿತ ಕಲಿಕಾ ಆಂದೋಲನ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಚಿಕ್ಕಜಾಜೂರಿನ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು ಪ್ರಥಮ ಸ್ಥಾನ ಪಡೆದಿರುತ್ತಾರೆ. 20 ಮಕ್ಕಳು ಪ್ರಥಮ ರ‍್ಯಾಂಕ್, 15 ಮಕ್ಕಳು ದ್ವಿತೀಯ ರ‍್ಯಾಂಕ್, ನಾಲ್ಕು ಮಕ್ಕಳು ತೃತೀಯ ರ‍್ಯಾಂಕ್ ಪಡೆದಿರುತ್ತಾರೆ.

ಚಿಕ್ಕಚೆಲ್ಲೂರು ರೈತ ನಾಗರಾಜ್‌ಗೆ ಪ್ರಗತಿಪರ ಕೃಷಿಕ ಪ್ರಶಸ್ತಿ

ಪರಶುರಾಂಪುರ: ಬಯಲುಸೀಮೆಯಲ್ಲಿ ಗೋಡಂಬಿ ಜತೆ ಮಿಶ್ರ ಬೆಳೆ ಬೆಳೆದು ಮಾದರಿಯಾದ ಚಿಕ್ಕಚೆಲ್ಲೂರು ಗ್ರಾಮದ ರೈತ ನಾಗರಾಜ್‌ಗೆ ಪುತ್ತೂರಿನ ರಾಷ್ಟ್ರೀಯ ಗೇರು ನಿರ್ದೇಶನಾಲಯ ಪ್ರಗತಿಪರ ಕೃಷಿಕ ಪ್ರಶಸ್ತಿ ನೀಡಿದೆ.

ಇವರು ಗೋಡಂಬಿ ಜತೆ ಮಿಶ್ರ ಬೆಳೆ ಬೆಳೆದು ಹೆಚ್ಚು ಆದಾಯದ ಗಳಿಸುವುದರ ಮೂಲಕ ಬಯಲು ಸೀಮೆಯ ರೈತರಿಗೆ ಮಾದರಿಯಾಗಿದ್ದಾರೆ.

ವೆಂಗುರ್ಲಾ 4 ಹಾಗೂ ವಿಆರ್‌ಐ 3 ತಳಿಯ ಗೋಡಂಬಿ ಗಿಡಗಳನ್ನು ಬೆಳೆದಿದ್ದಾರೆ. ಇದರಲ್ಲಿ ಸಾಲಿನಿಂದ ಸಾಲಿಗೆ 26 ಅಡಿ ಮತ್ತು ಗಿಡದಿಂದ ಗಿಡಕ್ಕೆ 13 ಅಡಿ ಅಂತರ ವಿಟ್ಟಿದ್ದಾರೆ. ವಿ4 ತಳಿಯ ಮಧ್ಯೆ ಭಾಗದಲ್ಲಿ ವಿಆರ್‌ಐ 3 ತಳಿಯ ಗೋಡಂಬಿ ಗಿಡಗಳನ್ನ





ನೆಟ್ಟಿದ್ದಾರೆ. ಪ್ರಾಂಭದಲ್ಲಿ ಮಿಶ್ರ ಬೆಳೆಯಾಗಿ ಶೇಂಗಾ, ಬೂದುಗುಂಬಳ, ಚೆಂಡು ಹೂವು, ನುಗ್ಗೆ ಕಾಯಿ ಸೀತಾಫಲವನ್ನು ಅಂತರ ಬೆಳೆಯಾಗಿ ಬೆಳೆದು ಆರ್ಥಿಕ ಲಾಭ ಪಡೆದಿದ್ದಾರೆ. ಗೋಡಂಬಿ ಬೆಳೆ ಮಳೆ ಹಾಗೂ ಅಂತರ್ಜಲ ಕೊರತೆ ಎದುರಿಸುತ್ತಿರುವ ಬಯಲುಸೀಮೆಗೆ ವರದಾನವಾಗಿದೆ. ತೋಟವನ್ನು ಸರಿಯಾಗಿ ನೋಡಿಕೊಂಡಲ್ಲಿ ಹೆಚ್ಚಿನ ಆದಾಯಗಳಿಸಬಹುದು. ಗೋಡಂಬಿ ಬೆಳೆಯನ್ನು 3 ವರ್ಷ ಪಾಲಿಸಿದರೆ ಅದು 30 ವರ್ಷ ರೈತನನ್ನು ಪಾಲಿಸುತ್ತದೆ ಎಂದು ರೈತ ನಾಗರಾಜ ತಿಳಿಸಿದ್ದಾರೆ.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಸೂಚನೆ

ತಂಬಾಕುಮುಕ್ತ ಗ್ರಾಮ ಹೆಚ್ಚಿಸಲು ಕ್ರಮ ಕೈಗೊಳ್ಳಿ

ಚಿತ್ರದುರ್ಗ: ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಹೆಚ್ಚು ಅರಿವು ಮೂಡಿಸುವ ಮೂಲಕ ತಂಬಾಕು ಮುಕ್ತ ಗ್ರಾಮಗಳನ್ನಾಗಿ ಮಾಡಲು ಕ್ರಮವಹಿಸಬೇಕು. ಜಿಲ್ಲೆಯ ಎಲ್ಲ ಗ್ರಾಮಗಳನ್ನೂ ತಂಬಾಕು ಮುಕ್ತ ಗ್ರಾಮಗಳನ್ನಾಗಿ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ತ್ರೈಮಾಸಿಕ ಸಮನ್ವಯ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯುವ ಜನತೆಯು ಹೆಚ್ಚಾಗಿ ತಂಬಾಕಿನ ದುಶ್ಚಟಗಳಿಗೆ ಒಳಗಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇದರಿಂದಾಗಿ ಸಮಾಜದಲ್ಲಿ ಸಾವಿನ ಸಂಖ್ಯೆಯಲ್ಲಿ ಹೆಚ್ಚಾಗಿ ಯುವಕರೇ ಬಲಿಯಾಗುತ್ತಿದ್ದಾರೆ. ಹಾಗಾಗಿ ತಂಬಾಕಿನ ದುಷ್ಪರಿಣಾಮಗಳ ಕುರಿತು ಆರೋಗ್ಯ ಇಲಾಖೆಯು



ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಕಸ ವಿಲೇವಾರಿ ವಾಹನದಲ್ಲಿ ಆಡಿಯೋ ಜಿಂಗಲ್ಸ್ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದ ಅವರು, ತಂಬಾಕು ಮುಕ್ತ ಗ್ರಾಮ ಘೋಷಣೆಗೆ ಸಹಕರಿಸಿದ ಆಯಾ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಮೇ31 ರಂದು ಆಚರಿಸಲಾಗುವ ವಿಶ್ವ ತಂಬಾಕು ರಹಿತ ದಿನದ ಕಾರ್ಯಕ್ರಮದಲ್ಲಿ ಗೌರವಿಸಬೇಕು ಎಂದು ಸೂಚನೆ ನೀಡಿದರು.

ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಕಳೆದ ನಾಲ್ಕು ತಿಂಗಳಿನಲ್ಲಿ ಪ್ರತಿ ತಾಲ್ಲೂಕಿನಲ್ಲಿ ತಲಾ 20 ಕಾರ್ಯಾಚರಣೆಯ ಗುರಿ ನಿಗದಿಪಡಿಸಿದ್ದು, ಜಿಲ್ಲೆಯಲ್ಲಿ ಒಟ್ಟು 120 ಕಾರ್ಯಾಚರಣೆಯ ಗುರಿಗೆ ಕೇವಲ 32 ಕಾರ್ಯಾಚರಣೆ ಮಾತ್ರ ನಡೆಸಲಾಗಿದೆ. ಸಮರ್ಪಕವಾಗಿ ತಂಬಾಕು ಕಾರ್ಯಾಚರಣೆ ನಡೆಸದೇ ಕಡಿಮೆ ಪ್ರಗತಿ ಸಾಧಿಸಿದ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಶೋಕಾಸ್ ನೀಡುವಂತೆ ತಾಕೀತು ಮಾಡಿದರು.

ತಾಲ್ಲೂಕು ಮಟ್ಟದಲ್ಲಿ ತಂಬಾಕು ನಿಯಂತ್ರಣ ಸಮಿತಿಯ ತನಿಖಾ ದಳದ ಸದಸ್ಯರೊಂದಿಗೆ ನಿಯಮಿತವಾಗಿ ತ್ರೈಮಾಸಿಕ ಸಭೆ ಹಾಗೂ ತಂಬಾಕು ಕಾರ್ಯಾಚರಣೆ ನಡೆಸಿ ಗುರಿ ಸಾಧಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಪಂ ಉಪಕಾರ್ಯದರ್ಶಿ ಡಾ.ಎಂ.ರಂಗಸ್ವಾಮಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್, ತಂಬಾಕು ನಿಯಂತ್ರಣಾಧಿಕಾರಿ ಡಾ.ರೇಖಾ, ಡಾ.ಸಿ.ಓ.ಸುಧಾ, ಡಾ.ಕಾಶಿ, ಡಾ.ಚಂದ್ರಶೇಖರ್ ಕಂಬಾಳಿಮಠ್, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಡಿ.ಎಂ.ಅಭಿನವ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ವೀರಶೈವ ಲಿಂಗಾಯತ ಮಹಾಸಭಾದಿಂದ ಹೊಳಲ್ಕೆರೆಯಲ್ಲಿ ಆಯೋಜನೆ

ಮೇ 2ರಂದು ಜಗಜ್ಯೋತಿ ಬಸವೇಶ್ವರ ಜಯಂತಿ

ಹೊಳಲ್ಕೆರೆ: ಬಸವೇಶ್ವರ ಜಯಂತಿಯನ್ನು ಮೇ ತಿಂಗಳ 2ನೇ ತಾರೀಕು ಹೊಳಲ್ಕೆರೆ ಪಟ್ಟಣದಲ್ಲಿ ಆಯೋಜನೆ ಮಾಡಲಾಗುತ್ತದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಪ್ರಭಾಕರ ಮಾಳಿಗೆ ತಿಳಿಸಿದರು.

ಹೊಳಲ್ಕೆರೆ ಪಟ್ಟಣದ ಒಂಟಿ ಕಂಬದ ಮುರುಘಾಮಠದ ಆವರಣದಲ್ಲಿ ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಲಿಂಗಾಯತ ಸಮುದಾಯದ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಸವೇಶ್ವರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಪ್ರತಿವರ್ಷದಂತೆ ಈ ವರ್ಷವೂ ಬಸವೇಶ್ವರ ಜಯಂತಿಯನ್ನು ವಿಜೃಂಭಣೆಯಿಂದ ಕೈಗೊಳ್ಳಬೇಕು. ಸ್ವಾಮಿಗಳು, ರಾಜಕಾರಣಿಗಳು, ಸರ್ಕಾರದ ಪ್ರತಿನಿಧಿಗಳನ್ನು ಆಹ್ವಾನಿಸಬೇಕು. ತಾಲೂಕಿನಲ್ಲಿರುವ ಪ್ರತಿಭಾವಂತ ಹಾಗೂ ವಿಶೇಷ ಸಾಧನೆ ಮಾಡಿದ ವ್ಯಕ್ತಿಗಳನ್ನು ಗುರುತಿಸಿ ಸನ್ಮಾನಿಸುವುದು ಹಾಗೂ ಬಸವೇಶ್ವರರ ಸಂದೇಶಗಳನ್ನ ತಾಲೂಕಿನ ಬಿತ್ತರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ಚರ್ಚಿಸಲಾಯಿತು ಎಂದು ತಿಳಿಸಿದರು.

ಮುಖಂಡಗಿರೀಶ್‌ಮಾತನಾಡಿ,ಮೇ2ರಂದುಪಟ್ಟಣದಸಂವಿಧಾನಸೌಧದಲ್ಲಿ ಜಯಂತಿಯನ್ನು ಆಚರಿಸಲು ದಿನ ಅಂತಿಮಗೊಳಿಸಲಾಗಿದೆ. ರಾಷ್ಟ್ರೀಯ ಅಧ್ಯಕ್ಷರಾದ ಈಶರ ಖಂಡ್ರೆ, ಸೇರಿದಂತೆ ಸಮಾಜದ ಪ್ರಮುಖರನ್ನ ಆಹ್ವಾನಿಸಬೇಕು ಎಂದು ಸಭೆಯಲ್ಲಿ ಚರ್ಚಿಸಲಾಗಿದೆ. ಈ ನಿಟ್ಟಿನಲ್ಲಿ ಇನ್ನೊಂದು ಸಭೆಯನ್ನ ಮುಂದಿನ ವಾರ ಕೈಗೊಂಡು ಬಸವೇಶ್ವರರ ಜಯಂತಿಗೆ ಸಿದ್ಧತೆಯನ್ನ ಕೈಗೊಂಡು ಅದ್ಭುತವಾಗಿ ಜಯಂತಿ ನಡೆಸಲಾಗುತ್ತದೆ ಎಂದು ತಿಳಿಸಿದರು.



ಉಪಾಧ್ಯಕ್ಷ ಬಸವರಾಜ್ ಅಂದನೂರು ಮಾತನಾಡಿ, ಈ ವರ್ಷ ಪ್ರತ್ಯೇಕವಾದ ಸಮಿತಿಯನ್ನು ರಚಿಸಲಾಗಿದೆ. ಸಮಿತಿಗೆ ಮುತ್ತುಗದೂರು ರುದ್ರಪ್ಪ ಇವರನ್ನು ಅಧ್ಯಕ್ಷರನ್ನಾಗಿ ಕಾರ್ಯದರ್ಶಿಯಾಗಿ ಬಿದುರ್ಗದ ಹನುಮಂತಪ್ಪ ಇವರನ್ನು ನಿಯೋಜನೆ ಮಾಡಿದೆ. ತಾಲೂಕಿನ ಎಲ್ಲಾ ಗ್ರಾಮಗಳ ಮುಖಂಡರನ್ನು ಸಮಿತಿಯಲ್ಲಿ ಸೇರಿಸಿದೆ ಎಂದರು.

ಮಹಾಸಭೆಯ ಕಾರ್ಯದರ್ಶಿ ಮಲ್ಲಿಕಾರ್ಜುನ್, ಬಸವೇಶ್ವರ ಜಯಂತಿ ಸಮಿತಿ ಅಧ್ಯಕ್ಷ ಮುತ್ತುಗದೂರು ರುದ್ರಪ್ಪ, ಸಿದ್ದರಾಮೇಶ್ವರ ಜಯಂತಿ ಅಧ್ಯಕ್ಷ ಶಶಿಧರ, ಉಪಾಧ್ಯಕ್ಷ ರಮೇಶಪ್ಪ ಇತರರು ಇದ್ದರು.

ಕಿರುಸುದ್ದಿ

ನಾಳೆ ಉಕ್ಕಡಗಾತ್ರಿಯಲ್ಲಿ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ

ಮಲೇಬೆನ್ನೂರು: ಸಮೀಪದ ಉಕ್ಕಡಗಾತ್ರಿಯ ಗ್ರಾಮದ ಶ್ರೀಕರಿಬಸವೇಶ್ವರ ಗದ್ದಿಗೆ ಟ್ರಸ್ಟ್ ಕಮಿಟಿ ಹಾಗೂ ಹರಪನಹಳ್ಳಿಯ ಜನನಿ ಯೋಗ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಮಾ.16ರ ಸೋಮವಾರ ಉಕ್ಕಡಗಾತ್ರಿಯಲ್ಲಿ ಉಚಿತ ಪ್ರಕೃತಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಆಸ್ಪತ್ರೆಯ ನಿರ್ದೇಶಕ ಮತ್ತು ಮುಖ್ಯ ವೈದ್ಯಾಧಿಕಾರಿ ಡಾ. ರಾಜೇಶ್ ಪಾದೇಕಲ್ ನೇತೃತ್ವದಲ್ಲಿ ತಜ್ಞ ವೈದ್ಯರು ಉಚಿತ ವೈದ್ಯಕೀಯ ಸಮಾಲೋಚನೆ ನಡೆಸುವರು. ಜತೆಗೆ ಆಹಾರ ಸಲಹೆ, ರಕ್ತದಲ್ಲಿನ ಸಕ್ಕರೆ ಅಂಶ ತಪಾಸಣೆ, ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಸಮಾಲೋಚನೆ, ಅಕ್ಯುಪಂಕ್ಚರ್ ಮತ್ತು ಅಕ್ಯುಪ್ರೆಶರ್, ಬೊಜ್ಜು ಮತ್ತು ಬೆನ್ನು ನೋವು ಸಮಸ್ಯೆಗೆ ಚಿಕಿತ್ಸೆ ಮತ್ತಿತರ ಸೌಲಭ್ಯಗಳಿರುತ್ತವೆ. ಬೆನ್ನುನೋವು, ಕೀಲುನೋವು, ಅಧಿಕ ರಕ್ತದ ಒತ್ತಡ, ಬೊಜ್ಜು, ಮಧುಮೇಹ, ಹೈಪರ್ ಟೆನ್ಷನ್, ಥೈರಾಯ್ಡ್ ತೊಂದರೆ, ಗ್ಯಾಸ್ಟ್ರೈಟೀಸ್, ಮೈಗ್ರೇನ್, ನಿದ್ರಾಹೀನತೆ, ಉದ್ವಿಗ್ನತೆ, ಪಾರ್ಶ್ವವಾಯು, ಸ್ಪಾಂಡಿಲೈಟಿಸ್ ಮತ್ತಿತರ ಸಮಸ್ಯೆಗಳಿಂದ ಬಳಲುವವರು ಶಿಬಿರದ ಪ್ರಯೋಜನ ಪಡೆಯಬಹುದು. ವಿವರಗಳಿಗೆ ಮೊಬೈಲ್ 9449177677, 9980897536 ಸಂಪರ್ಕಿಸಬಹುದು ಎಂದು ಉದಯಶಂಕರ ತಿಳಿಸಿದರು.


ಯುದ್ಧ ನಿಲ್ಲಿಸಿ ಶಾಂತಿ ಸ್ಥಾಪಿಸಿ: ಸಿಪಿಐ

ದಾವಣಗೆರೆ: ವಿಶ್ವದಲ್ಲಿ ನಡೆಯುತ್ತಿರುವ ಯುದ್ಧಗಳನ್ನು ನಿಲ್ಲಿಸಿ ಶಾಂತಿ ಸ್ಥಾಪಿಸಬೇಕು ಹಾಗೂ ಅಡುಗೆ ಅನಿಲದ ಬೆಲೆಯನ್ನು ಕೇಂದ್ರ ಸರ್ಕಾರ ಇಳಿಸಬೇಕು ಎಂದು ಆಗ್ರಹಿಸಿ ಸಿಪಿಐ ದಾವಣಗೆರೆ ಜಿಲ್ಲಾ ಮಂಡಳಿ ವತಿಯಿಂದ ಗಾಂಧಿ ಸರ್ಕಲ್ ಬಳಿ ಪ್ರತಿಭಟನೆ ನಡೆಸಲಾಯಿತು.

ಅಮೇರಿಕಾದ ಪ್ರಚೋದನೆಯೊಂದಿಗೆ ಇಸ್ರೇಲ್ ಇರಾನ್ ಮೇಲೆ ನಡೆಸುತ್ತಿರುವ ಯುದ್ಧವು ಲಾಭಕ್ಕಾಗಿ ನಡೆಯುತ್ತಿದೆ. ಇದರಿಂದ ಅಮಾಯಕ ಜನರು ಬಲಿಯಾಗುತ್ತಿದ್ದಾರೆ. ಆದ್ದರಿಂದ ವಿಶ್ವಸಂಸ್ಥೆ ಮಧ್ಯೆ ಪ್ರವೇಶಿಸಿ ಯುದ್ಧವನ್ನು ತಕ್ಷಣ ನಿಲ್ಲಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು, ಸಹ ಕಾರ್ಯದರ್ಶಿ ಕಾಂ. ಹೆಚ್.ಜಿ. ಉಮೇಶ್, ಜಿಲ್ಲಾ ಮಂಡಳಿ ಸದಸ್ಯರಾದ ಕಾಂ.ಪಿ. ಷಣ್ಮುಖಸ್ವಾಮಿ ಹಾಗೂ ಕೆ. ಬಾನಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಕಾಂ.ಜಿ. ಯಲ್ಲಪ್ಪ, ಕಾಂ. ಕೆ.ಜಿ. ಶಿವಮೂರ್ತಿ, ಕೆರನಳ್ಳಿ ರಾಜು, ಎ. ತಿಪ್ಪೇಶ್, ನಾಗಮ್ಮ, ಸರೋಜಾ, ಪುಷ್ಪಾ, ಚಿನ್ನಪ್ಪ, ವಿ. ಲಕ್ಷ್ಮಣ, ನರೇಗಾ ರಂಗನಾಥ್, ಚಮನಸಾಬ್, ಸುರೇಶ್, ಜಯಣ್ಣ, ಶರಣಪ್ಪ, ಶಿವಕುಮಾರ್ ಶೆಟ್ಟರ್, ಮೌನೇಶ್, ಮರಿಯಪ್ಪ, ರೈಡರ್ ರಂಗನಾಥ್ ಇದ್ದರು.

ಸಿದ್ಧಾರೂಢ ವೃದ್ಧಾಶ್ರಮದ ಪಾರ್ವತಮ್ಮ ನಿಧನ

ಬಸವಾಪಟ್ಟಣ: ಇಲ್ಲಿನ ಸಿದ್ಧಾರೂಢ ವೃದ್ಧಾಶ್ರಮದ ವಯೋವೃದ್ಧರಿಗೆ ತಾಯಿಯಂತಿದ್ದ ಪಾರ್ವತಮ್ಮ (81) ಅವರು ಅನಾರೋಗ್ಯದಿಂದ ಶನಿವಾರ ಬೆಳಗ್ಗೆ ನಿಧನರಾದರು.



ಮೃತರಿಗೆ ನಾಲ್ವರು ಪುತ್ರಿಯರು ಹಾಗೂ ಇಬ್ಬರು ಪುತ್ರರು ಇದ್ದಾರೆ. ಸಿದ್ಧಾರೂಢ ವೃದ್ಧಾಶ್ರಮದ ಮಾಲೀಕ ಗುರುಮೂರ್ತಿ ಅವರು ಹಿರಿಯ ಪುತ್ರ. ಪಾರ್ವತಮ್ಮ ಅವರ ಅಂತ್ಯಕ್ರಿಯೆ ಭಾನುವಾರ ಸಿದ್ಧಾರೂಢ ವೃದ್ಧಾಶ್ರಮದ ಪಕ್ಕದಲ್ಲೇ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸಂತಾಪ: ಪಾರ್ವತಮ್ಮ ಅವರ ನಿಧನಕ್ಕೆ ದಾವಣಗೆರೆ ಜಡೆಸಿದ್ಧ ಶಿವಯೋಗಾಶ್ರಮದ ಡಾ. ಶ್ರೀಶಿವಾನಂದ ಸ್ವಾಮೀಜಿ, ಹದಡಿ ಚಂದ್ರಗಿರಿ ಮಠದ ಶ್ರೀಮುರಳೀಧರ ಸ್ವಾಮೀಜಿ, ಯಲವಟ್ಟಿ ಸಿದ್ಧಾರೂಢ ಮಠದ ಶ್ರೀಯೋಗಾನಂದ ಸ್ವಾಮೀಜಿ, ಹಾನಗಲ್ಲ ತಾಲೂಕು ಹೋತನಹಳ್ಳಿ ಸಿದ್ಧಾರೂಢ ಮಠದ ಶ್ರೀಶಂಕರಾನಂದ ಸ್ವಾಮೀಜಿ, ಚಿತ್ರದುರ್ಗ ಕಬೀರಾನಂದ ಆಶ್ರಮದ ಶ್ರೀಶಿವಲಿಂಗಾನಂದ ಸ್ವಾಮೀಜಿ, ಗವಿಮಠದ ಶ್ರೀಶಿವಕುಮಾರ ಹಾಲಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ನಾರಶೆಟ್ಟಿ ಉಮಾಪತಿ ನಿಧನ

ಕೊಂಡಜ್ಜಿ: ಗ್ರಾಮದ ನಾರಶೆಟ್ಟಿ ಉಮಾಪತಿ(62) ಇವರು ಶನಿವಾರ ಅನಾರೋಗ್ಯದ ಕಾರಣ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಕೊಂಡಜ್ಜಿ ಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.



ಮಲೆಬೆನ್ನೂರು ಪಟ್ಟಣದ ಆಶ್ರಯ ಕಾಲೋನಿ ಉದ್ಯಾನವನದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸ್ವಸಹಾಯ ಸಂಘದ ಮಹಿಳಾ ಸದಸ್ಯರು ಮತ್ತು ಪೌರ ಕಾರ್ಮಿಕರು ಉದ್ಯಾನವನವನ್ನು ಸ್ವಚ್ಛಗೊಳಿಸಿದರು. ಈ ಸಂದರ್ಭದಲ್ಲಿ ಆರೋಗ್ಯ ಕಿರಿಯ ನಿರೀಕ್ಷಕರಾದ ಶಿವರಾಜ್ ಹಾಗು ಸಿಬ್ಬಂದಿ ಪಾಲ್ಗೊಂಡಿದ್ದರು.

ಡಾ.ಎಸ್. ಮಂಜಪ್ಪಗೆ ಎಸ್‌ಟಿಇ ವಾಟರ್ ಅವಾರ್ಡ್

ದಾವಣಗೆರೆ: ಪರಿಸರ ವಿಜ್ಞಾನ ಮತ್ತು ನೀರಿನ ಗುಣಮಟ್ಟ ಸುಧಾರಣಾ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಯನ್ನು ಗುರುತಿಸಿ ದಾವಣಗೆರೆ ಬಿಐಇಟಿ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್. ಮಂಜಪ್ಪ ಅವರಿಗೆ ಸೇವ್ ದಿ ಎನ್ವಿರಾನ್‌ಮೆಂಟ್ ಸಂಸ್ಥೆಯು ಎಸ್‌ಟಿಇ ವಾಟರ್ ಅವಾರ್ಡ್ ಘೋಷಿಸಿದೆ.

ನೀರಿನಲ್ಲಿರುವ ಫ್ಲೋರೈಡ್ ಅಂಶವನ್ನು ತೆಗೆದುಹಾಕುವ ಸುಧಾರಿತ ತಂತ್ರಜ್ಞಾನ ಮತ್ತು ಪರಿಸರ ಸಂರಕ್ಷಣೆಯಲ್ಲಿ ಮಂಜಪ್ಪ ಅವರು ಮಾಡಿರುವ ಸಂಶೋಧನೆ ಪರಿಗಣಿಸಿ ಈ ಗೌರವ ನೀಡಲಾಗುತ್ತಿದೆ ಎಂದು ಸಂಸ್ಥೆ ತಿಳಿಸಿದೆ.

ತಮಿಳುನಾಡಿನ ಚೆನ್ನೈನ ಎಸ್‌ಆರ್‌ಎಂಐಎಸ್‌ಟಿ ಆವರಣದಲ್ಲಿ ಇದೇ ಮಾರ್ಚ್ 26 ಮತ್ತು 27ರಂದು ನಡೆಯಲಿರುವ ಇವಾಶ್ ಅಂತರರಾಷ್ಟ್ರೀಯ ಸಮ್ಮೇಳನ ಹಾಗೂ ಎಸ್‌ಟಿಇ ಸಂಸ್ಥೆಯ 7ನೇ ವಾರ್ಷಿಕ ಸಭೆಯಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ಪ್ರಸ್ತುತ ಡಾ.ಎಸ್. ಮಂಜಪ್ಪ ಅವರು ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರೊಂದಿಗೆ ದಾವಣಗೆರೆಯ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಲಹೆಗಾರರಾಗಿ ಕೂಡ ಸೇವೆ ಸಲ್ಲಿಸುತ್ತಿದ್ದಾರೆ.

ಈ ಕಾರ್ಯಕ್ರಮವು ನೇರ ಮತ್ತು ವರ್ಚುವಲ್ ಎರಡೂ ಮಾದರಿಗಳಲ್ಲಿ ನಡೆಯಲಿದೆ. ಸುಸ್ಥಿರ ಇಂಧನ, ಸಾರ್ವಜನಿಕ ಆರೋಗ್ಯ ಹಾಗೂ ಸಂಪನ್ಮೂಲಗಳ ದಕ್ಷ ನಿರ್ವಹಣೆಯಲ್ಲಿ ಸ್ಮಾರ್ಟ್ ತಂತ್ರಜ್ಞಾನಗಳ ಪಾತ್ರದ ಕುರಿತು ಸಮ್ಮೇಳನದಲ್ಲಿ ಚರ್ಚೆ ನಡೆಯಲಿದೆ. ಮುಖ್ಯವಾಗಿ ಪರಿಸರ ವ್ಯವಸ್ಥೆಯ ಸಮತೋಲನ ಕಾಪಾಡುವಲ್ಲಿ ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಶ್ಲೇಷಣೆಯ ಅನ್ವಯದ ಬಗ್ಗೆ ತಜ್ಞರು ಬೆಳಕು ಚೆಲ್ಲಲಿದ್ದಾರೆ.



ಚನ್ನಗಿರಿ ತಾಲೂಕು ತ್ಯಾವಣಿಗೆ ಗ್ರಾಮದ ಶ್ರೀ ವೀರಾಂಜನೇಯ ಸ್ವಾಮಿಯ ಮೂರ್ತಿಯನ್ನು ಹೊಸದುರ್ಗ ತಾಲೂಕಿನ ವಜ್ರೇಶ್ವರ ಗ್ರಾಮದ ಶ್ರೀ ದಶರಥ ರಾಮೇಶ್ವರ ದೇವಾಲಯದಲ್ಲಿ ಜರುಗಿದ ಧಾರ್ಮಿಕ ಕಾರ್ಯಕ್ರಮದಲ್ಲಿ ಕರೆದೊಯ್ಯಲಾಗಿತ್ತು. ಗ್ರಾಮಕ್ಕೆ ದೇವರು ಹಿಂದಿರುಗಿದ ಬಳಿಕ ವಿಶೇಷ ಪೂಜೆ ಹಾಗೂ ಭಕ್ತರಿಗೆ ಪ್ರಸಾದ ವಿನಿಯೋಗ ನೆರವೇರಿತು.

37 ವೈವಾಹಿಕ ಪ್ರಕರಣ ರಾಜಿ | ನ್ಯಾಯಾಧೀಶೆ ಡಿ.ಕೆ. ವೇಲಾ ಮಾಹಿತಿ

ಅದಾಲತ್‌ನಲ್ಲಿ 6818 ಪ್ರಕರಣ ಇತ್ಯರ್ಥ

ದಾವಣಗೆರೆ: ಸೌಹಾರ್ದಯುತವಾಗಿ ಪ್ರಕರಣಗಳನ್ನು ಬಗೆಹರಿಸಿಕೊಳ್ಳುವಲ್ಲಿ ಲೋಕ್ ಅದಾಲತ್ ಪ್ರಮುಖ ಪಾತ್ರ ವಹಿಸಿದೆ. ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಜಿಲ್ಲೆಯಲ್ಲಿ ಒಟ್ಟು 6818 ಜಾರಿಯಲ್ಲಿರುವ ಪ್ರಕರಣಗಳು ಮತ್ತು 1,72,551 ವ್ಯಾಜ್ಯ ಪೂರ್ವ ಪ್ರಕರಣಗಳು ರಾಜೀ ಮೂಲಕ ಮುಕ್ತಾಯಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು 37 ವೈವಾಹಿಕ ಪ್ರಕರಣಗಳ ರಾಜಿಯಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾ ಧೀಶರಾದ ಡಿ.ಕೆ. ವೇಲಾ ತಿಳಿಸಿದರು.

ವ್ಯಾಜ್ಯ ಪೂರ್ವ 1,72,551 ಪ್ರಕರಣಗಳಿಂದ 13,19,83,769 ರೂ. ವಸೂಲಿ.

ಅವರು ಶನಿವಾರ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಎಲ್ಲಾ ನ್ಯಾಯಾಲಯಗಳಿಂದ ಇದೇ ಮಾರ್ಚ್ 1ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು 42,188 ಪ್ರಕರಣಗಳು ಬಾಕಿ ಇದ್ದವು. ಇದರಲ್ಲಿ ಲೋಕ್ ಅದಾಲತ್ ಗೆ ಒಟ್ಟು 11,841 ಪ್ರಕರಣಗಳನ್ನು ಗುರುತಿಸಲಾಗಿತ್ತು. ಮಧ್ಯಾಹ್ನದ ವೇಳೆಗೆ ಸುಮಾರು 6,818 ಪ್ರಕರಣಗಳು ಯಶಸ್ವಿಯಾಗಿ ಇತ್ಯರ್ಥಗೊಂಡಿವೆ ಎಂದರು.

ಜಿಲ್ಲೆಯಾದ್ಯಂತ ಸುಮಾರು 1,138ಕ್ಕಿಂತ ಹೆಚ್ಚು ಶಾಲಾ ವಿದ್ಯಾರ್ಥಿಗಳ ಜನನ ಪ್ರಮಾಣ ಪತ್ರಗಳ ಕುರಿತು ಕಂದಾಯ ಇಲಾಖೆ ಮತ್ತು ಮಹಾನಗರ ಪಾಲಿಕೆಯ ಅಧಿಕಾರಿಗಳು ರಾಜಿ ಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಮತ್ತು ಅವರುಗಳಿಗೆ ಸರ್ಕಾರದಿಂದ ಬರಬಹುದಾದ ವಿದ್ಯಾರ್ಥಿ ವೇತನ ಹಾಗೂ ಇತರೆ ಅನುಕೂಲತೆಗಳಿಗೆ ಅನುವು ಮಾಡಿಕೊಟ್ಟಂತಾಯಿತು ಎಂದರು.

ಇದರಂತೆ ಇತರೆ ವ್ಯಾಜ್ಯ ಪೂರ್ವ ಪ್ರಕರಣಗಳಾದ ಬ್ಯಾಂಕ್ ಸಾಲ ವಸೂಲಾತಿ, ಕಾರ್ಮಿಕ ವ್ಯಾಜ್ಯಗಳು, ನೀರಿನ ಬಾಕಿ ವಸೂಲಾತಿ, ಕಂದಾಯ ಪ್ರಕರಣ, ಟ್ರಾಫಿಕ್ ಪ್ರಕರಣ ಇತ್ಯಾದಿ ಸೇರಿದಂತೆ ಒಟ್ಟಾರೆ 1,72,551 ಪ್ರಕರಣ ಇತ್ಯರ್ಥಗೊಂಡು 13,19,83,769 ವಸೂಲಾತಿ ಆಗಿರುತ್ತದೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ್ ಮ.ಕರೆಣ್ಣವರ, ಜಿಲ್ಲಾ ನ್ಯಾಯಾಧೀಶಕರುಗಳು, ವಕೀಲರುಗಳು ಉಪಸ್ಥಿತರಿದ್ದರು.



54 ಅಪರಾಧಿಕ ಪ್ರಕರಣ, 165 ಚೆಕ್ ಅಮಾನ್ಯ ಪ್ರಕರಣ, 50 ಬ್ಯಾಂಕ್ ವಸೂಲಾತಿ ಕೇಸ್, 27 ಇತರೆ ಹಣ ವಸೂಲಾತಿ, 55 ಅಪಘಾತ ಪರಿಹಾರ ಪ್ರಕರಣ, 123 ವಿದ್ಯುತ್ ಕಳ್ಳತನದ ಪ್ರಕರಣ, 38 ಪಾಲು ವಿಭಾಗಕ್ಕಾಗಿ ದಾಖಲಿಸಿದ ದಾವೆ, 15 ಮೋಟಾರು ವಾಹನ ಪರಿಹಾರ ಜಾರಿ ಅರ್ಜಿ, 106 ಇತರೆ ಜಾರಿ ಅರ್ಜಿಗಳು ಅಲ್ಲದೆ ಹಲವು ಕಾರಣಕ್ಕಾಗಿ ದಾಖಲಿಸಿದ 72 ದಾವೆಗಳು ಮತ್ತು ಜೀವನಾಂಶ ಕೋರಿ ದಾಖಲಿಸಿದ್ದ ದಾವೆಗಳು 39 ರಾಜೀ ಮೂಲಕ ಇತ್ಯರ್ಥಗೊಂಡಿರುತ್ತವೆ. ಜಿಲ್ಲೆಯಾದ್ಯಾಂತ ಜನನ ಪ್ರಮಾಣ ಪತ್ರ ಕೋರಿ ದಾಖಲಿಸಿದ್ದ 1138 ಪ್ರಕರಣಗಳು ಅದಾಲತ್ತಿನಲ್ಲಿ ಇತ್ಯರ್ಥಗೊಂಡಿವೆ. ಇದಲ್ಲದೇ ಇತರೆ ಪ್ರಕರಣಗಳು ಸೇರಿ ಒಟ್ಟು 6,818 ಜಾರಿಯಲ್ಲಿದ್ದ ಪ್ರಕರಣಗಳು ಇತ್ಯರ್ಥಗೊಂಡಿವೆ.

■ ಡಿ,ಕೆ. ವೇಲಾ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಇಳಿ ವಯಸ್ಸಿನ ಕಲಹ ದೂರ..!

30 ವರ್ಷಗಳ ಕಾಲ ಪ್ರೌಢಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ತಿಪ್ಪೇಸ್ವಾಮಿ ಹಾಗೂ ಸುಮಾ ಎಂಬ ದಂಪತಿಗಳು ಇಂದು ಮತ್ತೆ ಒಂದಾಗುವ ಮೂಲಕ ಗಮನ ಸೆಳೆದರು. ಇವರ ಮಕ್ಕಳು ಉನ್ನತ ಮಟ್ಟದ ಶಿಕ್ಷಣ ಪಡೆದು ಮಗಳು ಡಾಕ್ಟರ್ ಮತ್ತು ಮಗ ಇಂಜಿನಿಯರ್ ವಿದೇಶದಲ್ಲಿ ನೆಲೆಸಿದ್ದಾರೆ. ಇಳಿವಯಸ್ಸಿನಲ್ಲಿ ಸಣ್ಣ ಕಾರಣಕ್ಕೆ ದೂರವಾಗಿದ್ದ ಈ ದಂಪತಿಗಳು, ನ್ಯಾಯಾಧೀಶರ ಮತ್ತು ವಕೀಲರ ಸಮ್ಮುಖದಲ್ಲಿ ರಾಜಿ ಮಾಡಿಕೊಂಡು ಸಂಭ್ರಮಿಸಿದರು.

ಹಣ ಗಳಿಕೆ ಧಾವಂತ ತಂದಿತ್ತು ಮನಸ್ತಾಪ..!

2007ರಲ್ಲಿ ಪ್ರೀತಿಸಿ ಮದುವೆಯಾಗಿದ್ದ ಮತ್ತೊಂದು ದಂಪತಿಗಳು ಕೂಡ ಇಂದು ಒಂದಾದರು. ಕೆಲಸದ ಒತ್ತಡ ಮತ್ತು ಹಣದ ಬೆನ್ನತ್ತಿ ಹೋಗುವ ಧಾವಂತದಲ್ಲಿ ಕುಟುಂಬಕ್ಕೆ ಸಮಯ ಕೊಡಲು ಸಾಧ್ಯವಾಗಲಿಲ್ಲ. ಇದರಿಂದ ಮನಸ್ತಾಪ ಉಂಟಾಗಿತ್ತು. ಆದರೆ ಈಗ ನಮ್ಮ ತಪ್ಪು ನಮಗೆ ಅರ್ಥವಾಗಿದೆ ಎಂದು ಬಸವರಾಜು ಮತ್ತು ರೇಖಾ ದಂಪತಿಗಳು ತಮ್ಮ ಭಾವನೆ ಹಂಚಿಕೊಂಡರು.

ಚನ್ನಗಿರಿ ಡಿವೈಎಸ್ಪಿ ರುದ್ರೇಶ್ ಆತಂಕ

ಆಮಿಷಕ್ಕೆ ವಿದ್ಯಾವಂತರೇ ಬಲಿ



ಹೊನ್ನಾಳಿ: ಹಣ ದ್ವಿಗುಣ ಸೇರಿದಂತೆ ವಿವಿಧ ರೀತಿಯ ಆಸೆ, ಆಮಿಷಗಳಿಗೆ ವಿದ್ಯಾವಂತರೇ ಒಳಗಾಗಿ ಹಣ ಕಳೆದುಕೊ ಳ್ಳುತ್ತಿ ದ್ದಾರೆ ಎಂದು ಚನ್ನಗಿರಿ ಡಿವೈಎಸ್ಪಿ ರುದ್ರೇಶ್ ಎಸ್. ಉಜ್ಜಿನಕೊಪ್ಪ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ ಆನ್‌ಲೈನ್, ಸೈಬರ್‌ಕ್ರೈಂ ಹಾಗೂ ಮಾದಕ ಸೇವನೆಯಿಂದಾಗುವ ಅನಾಹುತಗಳ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, ಆನ್‌ಲೈನ್ ಮುಖಾಂತರ ತಮ್ಮ ಖಾತೆಯಿಂದ ಹಣ ದೋಚಲು ವಿವಿಧ ರೀತಿಯ ಆಮಿಷ ತೋರಿಸಿ, ತಮ್ಮ ಬ್ಯಾಂಕ್ ಖಾತೆಗೆ ನೇರ ಕನ್ನ ಹಾಕಿ ಹಣ ದೋಚುತ್ತಿದ್ದಾರೆ. ಆದ್ದರಿಂದ ಅನಾಮಿಕ ಮೆಸೇಜ್ ಅಥವಾ ಫೋನ್ ಕಾಲ್‌ಗಳಿಗೆ ಉತ್ತರಿಸಬೇಡಿ. ವಿನಾ ಕಾರಣ ನೀವು ಅವರ ಪ್ರಶ್ನೆಗಳಿಗೆ ಉತ್ತರಿಸಿ ಒಟಿಪಿ ಹೇಳಿದರೆ ಅಲ್ಲಿಗೆ ನಿಮ್ಮ ಖಾತೆಯಲ್ಲಿರುವ ಹಣವನ್ನು ಗುಳುಂ ಮಾಡುತ್ತಾರೆ ಎಚ್ಚರ ಎಂದರು.

ಇತ್ತೀಚೆಗೆ ಮಾದಕ ಸೇವನೆಗೆ ವಿದ್ಯಾರ್ಥಿಗಳು ಬಲಿಯಾಗುತ್ತಿದ್ದಾರೆ. ತಮ್ಮ ಪಾಲಕರು ತಮ್ಮನ್ನು ವಿದ್ಯಾವಂತರನ್ನಾಗಿ ಮಾಡಿ. ಸಮಾಜದಲ್ಲಿ ಯೋಗ್ಯ ವ್ಯಕ್ತಿಯನ್ನಾಗಿ ರೂಪಿಸಬೇಕೆಂದು ಕೂಲಿ ನಾಲಿ ಮಾಡಿ ತಮಗೆ ವಿದ್ಯಾಭ್ಯಾಸ ಮಾಡಿಸುತ್ತಾರೆ. ಆದರೆ ಕೆಲ ವಿದ್ಯಾರ್ಥಿಗಳು ಮಾದಕ ಸೇವನೆಗೆ ಬಲಿಯಾಗಿ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ. ಧನಂಜಯ ಮಾತನಾಡಿ, ಗಡಿಯಲ್ಲಿ ಯೋಧರು, ನಾಡಿನಲ್ಲಿ ಪೊಲೀಸರು ಹಾಗೂ ನಮಗೆ ಅನ್ನ ಕೊಡುವ ರೈತರು ಯಾವಾಗಲೂ ಪ್ರಾತಃಸ್ಮರಣೀಯರು ಅವರನ್ನು ಗೌರವಿಸುವ ಕೆಲಸ ಪ್ರತಿನಿತ್ಯ ಆಗಬೇಕು ಎಂದು ತಿಳಿಸಿದರು.

ಗ್ರಂಥಪಾಲಕಾಧಿಕಾರಿ ನಾಗರಾಜ್ ನಾಯ್ಕ್, ಪ್ರಾಧ್ಯಾಪಕರಾದ ಮಹಾಬಲೇಶ್ವರ್, ರಾಘವೇಂದ್ರ, ಗೋವಿಂದಪ್ಪ, ಶ್ರೀನಿವಾಸ್ ಇದ್ದರು.

ವಿಶ್ವ ಮಹಿಳಾ ದಿನಾಚರಣೆ: ಸಾಧಕರಿಗೆ ಸನ್ಮಾನ



ನ್ಯಾಮತಿ: ಪಟ್ಟಣದ ಶ್ರೀಬನಶಂಕರಿ ದೇವಿ ದೇಗುಲದ ಆವರಣದಲ್ಲಿ ಪಟ್ಟಣ ಪಂಚಾಯತಿ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಸಾಧಕರಿಗೆ ಸನ್ಮಾನಿ ಸಲಾಯಿತು.

ಕಾರ್ಯಕ್ರಮದಲ್ಲಿ ಪಪಂ ಮುಖ್ಯಾಧಿಕಾರಿ ಪಿ. ಗಣೇಶ್‌ರಾವ್, ಹೊನ್ನಾಳಿ ಪುರಸಭೆ ಮುಖ್ಯಾಧಿಕಾರಿ ಲೀಲಾವತಿ, ದಾವಣಗೆರೆ ಯೋಜನಾ ನಿರ್ದೇಶಕರ ಕಚೇರಿಯ ಸುಶ್ಮಿತಾ, ನ್ಯಾಮತಿ ಠಾಣೆಯ ಪಿಎಸ್‌ಐ ಶೋಭಾ ರಾಣಿ, ಪಪಂ ಸಮುದಾಯ ಸಂಘಟ ನಾಧಿಕಾರಿ ಎಸ್. ಆರ್. ವೀರಭದ್ರಯ್ಯ, ಕಂದಾಯ ನಿರೀಕ್ಷಕ ಪ್ರವೀಣ್, ಮನು ಆಚಾರ್ ಇದ್ದರು.

ಸೌದೆ ಒಲೆಯತ್ತ ಮುಖ ಮಾಡಿದ ಹೋಟೆಲ್ ಉದ್ಯಮ

ದಾವಣಗೆರೆ: ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯವು ಇದೀಗ ದಾವಣಗೆರೆಯ ಹೋಟೆಲ್ ಉದ್ಯಮಕ್ಕೂ ತಟ್ಟಿದೆ. ಸಿಲಿಂಡರ್ ಅಭಾವದ ಕಾರಣದಿಂದ ನಗರದ ಪ್ರತಿಷ್ಠಿತ ಅಪೂರ್ವ ರೆಸಾರ್ಟ್ ಹೋಟೆಲ್ ಇದೀಗ ಹಳೆಯ ಪದ್ಧತಿಯ ಸೌದೆ ಒಲೆಯತ್ತ ಮುಖ ಮಾಡಿದೆ.

ಈ ಬಗ್ಗೆ ಹೋಟೆಲ್ ಮಾಲೀಕರಾದ ಅಣಬೇರು ರಾಜಣ್ಣ ಮಾತನಾಡಿ, ಹೋಟೆಲ್‌ನಲ್ಲಿ ಅಡುಗೆ ಕಾರ್ಯ ನಿರಂತರವಾಗಿ ನಡೆಯಬೇಕಿರುವುದರಿಂದ ಕಮರ್ಷಿಯಲ್ ಸಿಲಿಂಡರ್ ಸಿಗದೇ ಸಮಸ್ಯೆ ಎದುರಾದ ಹಿನ್ನೆಲೆ, ಒಟ್ಟು ಏಳು ಸೌದೆ ಒಲೆಗಳನ್ನು ನಿರ್ಮಿಸಿ, ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ರೀತಿಯಂತೆ ಕಟ್ಟಿಗೆ ಬಳಸಿ ಅಡುಗೆ ಮಾಡಲಾಗುತ್ತಿದೆ ಎಂದರು.

ಹೋಟೆಲ್‌ಗೆ ಪ್ರತಿನಿತ್ಯ ಸುಮಾರು ಆರು ಕಮರ್ಷಿಯಲ್ ಸಿಲಿಂಡರ್‌ಗಳ ಅಗತ್ಯವಿತ್ತು. ಆದರೆ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ಗೊಂದಲದಿಂದ ಅಡುಗೆ ವ್ಯವಸ್ಥೆಯನ್ನು ನಡೆಸುವುದು ಕಷ್ಟಕರವಾಗಿದ್ದು, ತಾತ್ಕಾಲಿಕವಾಗಿ ಸೌದೆ ಒಲೆಯನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿವರಿಸಿದರು.



ಸೌದೆ ಒಲೆಯಲ್ಲಿ ಮಾಡಿದ ಅಡುಗೆ ಹೆಚ್ಚು ರುಚಿಕರವಾಗುತ್ತದೆ ಎನ್ನುವ ಅಭಿಪ್ರಾಯವೂ ಇದೆ. ಹೋಟೆಲ್ ಬಳಿ ಕಟ್ಟಿಗೆ ಸಿಗುವ ಸೌಲಭ್ಯ ಇರುವುದರಿಂದ ಈ ವಿಧಾನ ಅನುಕೂಲಕರವಾಗಿದೆ. ಆದರೆ ಗ್ಯಾಸ್ ಒಲೆಗೆ ಹೊಂದಿಕೊಂಡಿದ್ದ ಅಡುಗೆ ಭಟ್ಟರು ಈಗ ಸೌದೆ ಒಲೆಯಲ್ಲಿ ಅಡುಗೆ ಮಾಡಲು ಆರಂಭದಲ್ಲಿ ಸ್ವಲ್ಪ ಕಷ್ಟ ಅನುಭವಿಸುತ್ತಿದ್ದಾರೆ ಎಂದು ಹೇಳಿದರು.

ಹೋಟೆಲ್‌ನಲ್ಲಿ ವಿದ್ಯುತ್ ಒಲೆ ವ್ಯವಸ್ಥೆಯೂ ಇದ್ದು, ಅದರಲ್ಲಿ ಟೀ ಹಾಗೂ ಕಾಫಿ ತಯಾರಿಸಲಾಗುತ್ತಿದೆ. ಆದರೆ ಸಿಲಿಂಡರ್ ಸಮಸ್ಯೆ ಹಾಗೂ ಅಡುಗೆ ವ್ಯವಸ್ಥೆಯಲ್ಲಿ ಉಂಟಾದ ಬದಲಾವಣೆಯಿಂದ ಹೋಟೆಲ್‌ಗೆ ಬರುವ ಗ್ರಾಹಕರ ಸಂಖ್ಯೆಯೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ ಎಂದು ತಿಳಿಸಿದರು.



ಬೆಳಗುತ್ತಿ-ಮಲ್ಲಿಗೇನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸರಸ್ವತಿ ಪೂಜೆ, 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಿತು. ಶಾಲಾ ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಇದ್ದರು.

ಸ್ವಾಮಿ ವಿವೇಕಾನಂದ ವೃದ್ಧಾಶ್ರಮಕ್ಕೆ ಅನಿಲ ಅಭಾವ

ದಾವಣಗೆರೆ: ನಗರದ ಡಿ.ಸಿ.ಎಂ ಬಡಾವಣೆಯಲ್ಲಿರುವ ಸ್ವಾಮಿ ವಿವೇಕಾನಂದ ವೃದ್ಧಾಶ್ರಮದಲ್ಲಿ ಕಳೆದ ಕೆಲವು ದಿನಗಳಿಂದ ಅಡುಗೆ ಅನಿಲದ (ಸಿಲಿಂಡರ್) ತೀವ್ರ ಅಭಾವ ಎದುರಾಗಿದೆ. ಇದರಿಂದಾಗಿ ಆಶ್ರಮದಲ್ಲಿರುವ ವೃದ್ಧರಿಗೆ ಸಕಾಲಕ್ಕೆ ಆಹಾರ ಸಿದ್ಧಪಡಿಸಲು ಆಡಳಿತ ಮಂಡಳಿ ಹರಸಾಹಸ ಪಡುತ್ತಿದೆ.

ಈ ಕುರಿತು ಮಾಹಿತಿ ನೀಡಿರುವ ಟ್ರಸ್ಟ್ ಕಾರ್ಯದರ್ಶಿ ಮರಿಯಾಚಾರ್ಯ ಅವರು, ಕಳೆದ 15 ದಿನಗಳಿಂದ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಆಶ್ರಮದಲ್ಲಿ ಒಟ್ಟು 20 ಮಂದಿವೃದ್ಧರಿರುವರು. ಮಯಾಕೊಂಡದಲ್ಲಿರುವ ಮತ್ತೊಂದು ಆಶ್ರಮದಲ್ಲಿ 30 ಮಂದಿ ಆಶ್ರಯ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.



ಸಿಲಿಂಡರ್ ಕೊರತೆಯಿಂದಾಗಿ ವೃದ್ಧರಿಗೆ ನೀಡುತ್ತಿದ್ದ ದೋಸೆ ಮತ್ತು ಚಪಾತಿಯಂತಹ ಉಪಹಾರಗಳನ್ನು ಸ್ಥಗಿತಗೊಳಿಸಲಾಗಿದೆ. ಅನಿವಾರ್ಯವಾಗಿ ಮುದ್ದೆ ಮತ್ತು ಅನ್ನ ನೀಡಲಾಗುತ್ತಿದೆ. ವೃದ್ಧರು ಮತ್ತು ರೋಗಿಗಳಿಗೆ ತುರ್ತಾಗಿ ಗಂಜಿ ಅಥವಾ ಬಿಸಿ ಆಹಾರ ನೀಡಲು ಗ್ಯಾಸ್ ಇಲ್ಲದೆ ತೊಂದರೆಯಾಗುತ್ತಿದೆ ಎಂದು ಹೇಳಿದರು.

ನಗರ ಪ್ರದೇಶದಲ್ಲಿ ಸೌದೆ ಒಲೆಗಳನ್ನು ಬಳಸಲು ಅವಕಾಶವಿಲ್ಲದ ಕಾರಣ, ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಈ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ದೇವನಗರಿ ಗ್ಯಾಸ್ ಏಜೆನ್ಸಿಯವರು ಶೀಘ್ರವೇ ಸಿಲಿಂಡರ್ ಒದಗಿಸುವ ಭರವಸೆ ನೀಡಿದ್ದಾರೆ. ವೃದ್ಧರ ಹಿತದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ವಾಣಿಜ್ಯ ಸಿಲಿಂಡರ್ ಪೂರೈಕೆಗೆ ಕ್ರಮ ಕೈಗೊಳ್ಳಬೇಕೆಂದು ಮರಿಯಾಚಾರ್ಯ ಅವರು ವಿನಂತಿಸಿದ್ದಾರೆ.

ಕೆಂಚಿಕೊಪ್ಪ ಸರ್ಕಾರಿ ಪ್ರೌಢಶಾಲೆ ಹಳೆ ವಿದ್ಯಾರ್ಥಿಗಳ ಮಾದರಿ ಕಾರ್ಯ

ಓದಿದ ಶಾಲೆಗೆ ಕಂಪ್ಯೂಟರ್, ಪೀಠೋಪಕರಣ ವಿತರಣೆ

ನ್ಯಾಮತಿ: ಓದಿದ ಶಾಲೆಗೆ ಕೊಡುಗೆ ನೀಡುವ ಮೂಲಕ ತನ್ನೂರಿನ ವಿದ್ಯಾರ್ಥಿಗಳು ನಮ್ಮಂತೆ ಉನ್ನತ ಮಟ್ಟಕ್ಕೆ ಬೆಳೆಯಲಿ ಎನ್ನುವ ಆಶಯದೊಂದಿಗೆ 7 ಜನ ವಿದ್ಯಾರ್ಥಿಗಳ ತಂಡ ಸುಮಾರು 10 ಲಕ್ಷ 58 ಸಾವಿರ ರೂ.ಗಳ ಮೌಲ್ಯ ಕಂಪ್ಯೂಟರ್ ಹಾಗೂ ಪೀಠೋಪಕರಣಗಳನ್ನು ನೀಡುವ ಮೂಲಕ ಮಾದರಿಯಾಗಿದ್ದಾರೆ.

ತಾಲೂಕಿನ ಕೆಂಚಿಕೊಪ್ಪ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ನಾಗರಾಜ್, ರವಿ, ಗೌತಮ್, ರವಿಕುಮಾರ, ಲಿಂಗಮೂರ್ತಿ, ಯೋಗೀಶ್ ಮತ್ತು ಶಿವರಾಜ್ ಎಂಬ 7 ಜನ ವಿದ್ಯಾರ್ಥಿಗಳು ಬೆಂಗಳೂರಿನ ಪ್ರತಿಷ್ಠಿತ ಕಿವಾನಿ ಇಂಟರ್ ನ್ಯಾಷನಲ್ ಕಂಪನಿಯಲ್ಲಿ ಉದ್ಯೋಗಿಗಳಾಗಿದ್ದಾರೆ.

ಮೈ ಸ್ಕೂಲ್ ಮೈ ಪ್ರೈಡ್ ಎಂಬ ಉದ್ದೇಶದಿಂದ ಬೆಂಗಳೂರಿನ ಕಿವಾನಿ ಸಂಸ್ಥೆಯ ಮೂಲಕ ಸೈನ್ಸ್ ಲ್ಯಾಬ್, ಕಂಪ್ಯೂಟರ್, ಪ್ರಿಂಟರ್ ಮತ್ತು ಜೆರಾಕ್ಸ್, ನೆಲಹಾಸಿಗೆ ಡಿಜಿಟಲ್ ಕೊಠಡಿ ಹಾಗೂ ಶುದ್ಧ ನೀರಿನ ಘಟಕ ಹೀಗೆ ಹಲವು ರೀತಿ ಸಹಕಾರ ನೀಡುವ ಮೂಲಕ ತನ್ನೂರಿನ ಶಾಲೆಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭಿವೃದ್ಧಿಗೆ ಬೇಕಾದಂತಹ ಹಲವು ಕೊಡುಗೆ ನೀಡುವ ಮೂಲಕ ಹಲವು ಅನುಕೂಲ ಮಾಡಿದ್ದಾರೆ.



ಕೊಡುಗೆ ಸಹಕರಿಸಿದ ಕಿವಾನಿ ಕಂಪನಿಯ ಹೆಚ್.ಆರ್. ರಾಜಣ್ಣ, ಹಣಕಾಸು ಮುಖ್ಯಸ್ಥರಾದ ಶಿವಕುಮಾರ್ ಹಾಗೂ ನಿವೃತ್ತ ಶಿಕ್ಷಕರಿಗೆ ಗುರು ವಂದನೆ ನೀಡಿ ಸನ್ಮಾಸುವ ಮೂಲಕ ಗೌರವಿಸಿದರು. ಈ ಸಂದರ್ಭದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು ಸರ್ವ ಸದಸ್ಯರು ಹಾಗೂ ಶಾಲಾ ಶಿಕ್ಷಕ ವೃಂದ ಮತ್ತು ಗ್ರಾಮಸ್ಥರು ಇದ್ದರು.

ಮಹಿಳಾ ದಿನಾಚರಣೆಯಲ್ಲಿ ಶಾಸಕ ಡಿ.ಜಿ. ಶಾಂತನಗೌಡ ಅಭಿಪ್ರಾಯ

ಸಂವಿಧಾನದಿಂದ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಗೆ ಸ್ಥಾನ

ಹೊನ್ನಾಳಿ: ಡಾ.ಬಿ.ಆರ್. ಅಂಬೇಡ್ಕರ್ ಅವರ ರಚಿಸಿದ ಸಂವಿಧಾನದಿಂದಾಗಿ ಮಹಿಳೆಯರಿಗೆ ಶಿಕ್ಷಣ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಅವಕಾಶ ಸಿಕ್ಕಿತು ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಶನಿವಾರ ಪಟ್ಟಣದ ಪುರಸಭೆ ಕಚೇರಿಯಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಸ್ವತಂತ್ರ ಪೂರ್ವದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು ಯಾರೂ ಮುಂದೆ ಬರುತ್ತಿರಲಿಲ್ಲ, ಸ್ವತಂತ್ರ ನಂತರ ಅದರ ಲ್ಲೂ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಿದ್ದ ಹಿನ್ನಲೆಯಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು ಎಂದರು.



ಮನೆಯಲ್ಲಿ ಸೌಟು ಹಿಡಿದು ಅಡಿಗೆ ಮನೆಗೆ ಸೀಮಿತವಾಗಿದ್ದ ಮಹಿಳೆಯರು ಇಂದು ರಾಜಕೀಯ, ನ್ಯಾಯಾಂಗ, ಶಿಕ್ಷಣ, ಆರ್ಥಿಕ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿ ಪುರುಷರಿಗೆ ಸರಿಸಮನಾಗಿ ಸಾಧನೆ ಮಾಡುತ್ತಿರುವುದು ಹೆಮ್ಮೆಯ ವಿಷಯ ಹಾಗೂ ಮಹಿಳೆ ಮಕ್ಕಳ ಲಾಲನೆ ಪಾಲನೆ ಮಾಡುವುದರಿಂದ ಹಿಡಿದು ದೇಶವನ್ನಾಳುವ ಮಟ್ಟಿಗೆ ನಮ್ಮ ಮಹಿಳೆಯರು ಮುಂದೆ ಬಂದಿದ್ದಾರೆ. ಇದು ನಿಜಕ್ಕೂ ಸಾಧನೆಯೇ ಸರಿ ಎಂದರು.

ಮಹಿಳೆ ಸ್ವಸಹಾಯ ಗುಂಪುಗಳಲ್ಲಿ ಕಿರು ಸಾಲ ಯೋಜನೆಯಡಿಯಲ್ಲಿ ಸಾಲ ತಂದು ಮಕ್ಕಳಿಗೆ ಶಿಕ್ಷಣ ಕೊಡಿಸಿ ಹಾಗೂ ಮನೆತನವನ್ನು ನಡೆಸುವುದು, ಮಕ್ಕಳಿಗೆ ಮದುವೆ ಮಾಡಿಸುವುದು. ಅಲ್ಲದೆ ಸಾಲ ಪಡೆದ ಹಣವನ್ನು ಸಕಾಲದಲ್ಲಿ ಮರುಪಾವತಿ ಮಾಡುತ್ತಿರುವುದು ಸಹ ಮಹಿಳೆಯರೆ. ಹಾಗಾಗಿ ಸೌಟು ಹಿಡಿಯುವ ಕೈ ದೇಶವನ್ನು ಆಳಬಲ್ಲಳು ಎಂಬುದನ್ನು ನಮ್ಮ ಮಹಿಳೆಯರು ಸಾಧಿಸಿ ತೋರಿಸಿದ್ದಾರೆ ಎಂದರು.

ಹೊನ್ನಾಳಿ ಹಾಗೂ ನ್ಯಾಮತಿ ತಾಲೂಕಿನಲ್ಲಿ 110 ಹಾಲು ಉತ್ಪಾದಕರ ಸಹಕಾರ ಸಂಘ ಇದೆ. ಅಲ್ಲಿಗೆ ಹಾಲು ಹಾಕಿ ಅದರಿಂದ ಬರುವ ಹಣದಿಂದ ಇಡೀ ಮನೆತನವನ್ನೂ ನಡೆಸಿ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನೂ ಕೊಡಿಸಿ ಸಮಾಜದ ಮುಖ್ಯವಾಹಿನಿಗೆ ತಮ್ಮ ಮಕ್ಕಳನ್ನು ತರುವ ಮಹಿಳೆಯರು ನಿಜಕ್ಕೂ ನಮ್ಮ ಪುರುಷ ಸಮಾಜಕ್ಕೆ ಆದರ್ಶನೀಯರು ಎಂದರು.

ಪುರಸಭೆ ಮುಖ್ಯಾಧಿಕಾರಿ ಲೀಲಾವತಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಉಮಾ, ಸಿಡಿಪಿಒ ಜ್ಯೋತಿ ಮಾತನಾಡಿದರು. ಜಯಶೀಲ, ಪುರಸಭೆ ಇಂಜಿನಿಯರ್ ದೇವರಾಜ್, ಶಿವಕುಮಾರ್, ಆಕಾಶ್, ಗೀತಾ, ರೂಪಾ, ರಂಜಿತಾ, ಭಾಗ್ಯ, ಸಾಕಮ್ಮ ಇದ್ದರು.

ಪ್ರಶ್ನೋತ್ತರ ರತ್ನಮಾಲಿಕೆ



• ವಿದ್ವಾನ್ ನರಸಿಂಹ ಭಟ್

ಚಿಂತಾಮಣಿಯಂತೆ ದುರ್ಲಭವಾದುದು ಯಾವುದು?

• **ಚತುರ್ಭದ್ರ**

ಚಿಂತಾಮಣಿ ಎಂದರೆ ಚಿಂತಿಸಿದ್ದನ್ನು, ಯೋಚಿಸಿದ್ದನ್ನು, ಇಚ್ಛಿಸಿದ್ದನ್ನು ಕೊಡುವ ಒಂದು ರತ್ನವಿಶೇಷ. ಅದೊಂದು ಮಣಿರೂಪದಲ್ಲಿ ಇರುವಂತಹ ವಸ್ತು. ಅತ್ಯಂತ ಅಪರೂಪದ ವಸ್ತು. ಅದನ್ನು ಪಡೆದವನು ಆ ಮಣಿಯ ಸಹಾಯದಿಂದ ಅವನು ಏನನ್ನು ಬೇಕಾದರೂ ಪಡೆಯಬಹುದು. ಈ ಪ್ರಶ್ನೆಯಲ್ಲಿ ಮಣಿಯ ವಿಷಯವನ್ನು ಪ್ರಸ್ತಾಪಿಸಿಲ್ಲ. ಆದರೆ ಚಿಂತಾಮಣಿಯಂತೆ ದುರ್ಲಭವಾದದ್ದು ಯಾವುದು ಎಂಬ ಪ್ರಶ್ನೆ ಇಲ್ಲಿದೆ. ಅದಕ್ಕೆ 'ಚತುರ್ಭದ್ರ' ಎಂಬ ಉತ್ತರವನ್ನು ನೀಡಲಾಗಿದೆ. ಹಾಗಾದರೆ ಚತುರ್ಭದ್ರವು ಹೇಗೆ ಚಿಂತಾಮಣಿಯಾಗಿದೆ ಎಂಬುದನ್ನು ಚಿಂತಿಸಬೇಕಾಗಿದೆ.

ಚತುರ್ಭದ್ರ ಎಂದರೆ ನಾಲ್ಕು ಕಡೆ ಗಟ್ಟಿಯಾಗಿರುವ ಸಂಗತಿ ಎಂದರ್ಥ. ಅಂದರೆ ಒಂದು ವಿಷಯ ಅಥವಾ ಒಂದು ಪದಾರ್ಥ ಆಕಾಶವನ್ನು ನೆಲೆ ನಿಲ್ಲಬೇಕಾದರೆ ಅದಕ್ಕೆ ಸುತ್ತಲೂ ರಕ್ಷಣೆ ಅತ್ಯಂತ ಅವಶ್ಯಕ. ಪ್ರಧಾನವಾಗಿ ನಾಲ್ಕು ದಿಕ್ಕುಗಳನ್ನು ಇಟ್ಟುಕೊಂಡು, ಆ ನಾಲ್ಕು ದಿಕ್ಕುಗಳಲ್ಲೂ ಯಾವುದೇ ರೀತಿಯ ಬಾಧೆ ಇಲ್ಲದಿದ್ದರೆ ಅದಕ್ಕೆ 'ಚತುರ್ಭದ್ರ' ಎಂಬುದಾಗಿ ಹೇಳಬಹುದು. ಹಾಗಾದರೆ ಇಲ್ಲಿ ಆ ಚತುರ್ಭದ್ರ ಯಾವುದು ಎಂದರೆ 'ಪುರುಷಾರ್ಥ'. ಪುರುಷಾರ್ಥಗಳನ್ನೇ 'ಚತುರ್ಭದ್ರ' ಎಂಬ ಶಬ್ದದಿಂದ ಇಲ್ಲಿ ಬಳಸಲಾಗಿದೆ. "ಪುರುಷಾರ್ಥವಿದೆ. ಅದನ್ನನುಗುಣವಾಗಿ ನಡೆ ನೋಡಿ ನಡೆಸಿದರೆ ಚತುರ್ಭದ್ರಮಯವಾದ ಜೀವನವಾಗುತ್ತದೆ" ಎಂಬುದಾಗಿ ಶ್ರೀರಂಗ ಮಹಾಗುರುಗಳು ಈ ಪುರುಷಾರ್ಥ ಮತ್ತು ಚತುರ್ಭದ್ರ ಎಂಬ ವಿಷಯವನ್ನು ಹೀಗೆ ಸಮೀಕರಿಸಿದ್ದನ್ನು ನಾವು ಇಲ್ಲಿ ಗಮನಿಸಬೇಕು. ಆ ಪುರುಷಾರ್ಥಗಳು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬುದಾಗಿ. ಒಬ್ಬ ವ್ಯಕ್ತಿ ಪರಿಪೂರ್ಣವಾಗಿ ಯಾವಾಗ ಆಗುತ್ತಾನೆ ಎಂದರೆ ಯಾವಾಗ ಈ ನಾಲ್ಕು ಪುರುಷಾರ್ಥಗಳನ್ನು ಅವನು ಅನುಭವಿಸಬಲ್ಲನೋ ಆಗ. ಅವನು ಯಾವುದೇ ರೀತಿಯ ಅಪೇಕ್ಷಿತವಾದ ಅಥವಾ ಚಿಂತಿತವಾದ ವಿಷಯವನ್ನು ಕ್ಷಣಾರ್ಧದಲ್ಲಿ ಪಡೆಯಬಲ್ಲ ಎಂದು ತಾತ್ಪರ್ಯ. ಅಂದರೆ ಅವನಿಗೆ ಈ ಪ್ರಪಂಚದ ಪ್ರತಿಯೊಂದು ಪದಾರ್ಥದ ಆವಶ್ಯಕತೆ ಆಗುತ್ತದೆ ಮತ್ತು ಆ ಪದಾರ್ಥಗಳನ್ನು ಅನುಭವಿಸಬೇಕು. ಪದಾರ್ಥಗಳನ್ನು ಹೇಗೆ ಬಳಸಿಕೊಳ್ಳಬೇಕು? ಹೇಗೆ ಬಳಸಿಕೊಂಡರೆ ಆ ಪದಾರ್ಥವು ಮತ್ತು ಆ ಪದಾರ್ಥದಿಂದ ವ್ಯಕ್ತಿಗೂ ಒಂದು ಸಾರ್ಥಕತೆ ಎಂಬುದು ಉಂಟಾಗುತ್ತದೆ? ಎಂಬುದನ್ನು ಆತ ಅರಿಯಬಲ್ಲವನಾಗಿರುತ್ತಾನೆ. ಹಾಗಾಗಿ ಅವನಿಗೆ ಈ ನಾಲ್ಕು ಪುರುಷಾರ್ಥಗಳೇ ಚಿಂತಾಮಣಿಯಂತೆ ಕೆಲಸ ಮಾಡುತ್ತವೆ ಎಂಬುದು ಇದರ ತಾತ್ಪರ್ಯ. ಹಾಗಾದರೆ ಈ ನಾಲ್ಕು ಪುರುಷಾರ್ಥಗಳನ್ನು ಪಡೆಯಬೇಕಾದರೆ ಅವನಿಗೆ ಬೇಕಾದ ಮೂಲಭೂತ ಅವಶ್ಯಕತೆ ಏನು ಎಂಬುದನ್ನು ವಿವೇಕ ಚೂಡಾಮಣಿ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ-"'ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಂ। ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ॥'" ಎಂಬುದಾಗಿ. ಅಂದರೆ ಒಬ್ಬ ಮಾನವನಾಗಿ ಹುಟ್ಟಿ, ಅವನಿಗೆ ಮೋಕ್ಷ ಪಡೆಯಬೇಕೆಂಬ ಉತ್ಕಟ ಇಚ್ಛೆಯು ಉಂಟಾಗಿ, ಅದನ್ನು ಪೂರೈಸಲು ಒಬ್ಬ ಮಹಾಪುರುಷನ ಸಂಸರ್ಗ ಉಂಟಾದರೆ ಅವನಿಗೆ ಇವು ಉಳಿದ ಎಲ್ಲವೂ ಸುಲಭ. ಏಕೆಂದರೆ ಈ ಮೂರು ಸಿಗುವುದು ಅತ್ಯಂತ ದುರ್ಲಭ. ಈ ಮೂರನ್ನು ಪಡೆದವನು ಪುರುಷಾರ್ಥ ಸಂಪತ್ತಿಯನ್ನು ಸುಲಭವಾಗಿ ತನ್ನದಾಗಿಸಿಕೊಳ್ಳುತ್ತಾನೆ. ಅಂದರೆ ಆತ ಚತುರ್ಭದ್ರಮಯವಾದ ಬಾಳಾಟವನ್ನು ಮಾಡಿದಂತೆ ಆಗುತ್ತದೆ ಎಂಬುದು ಇದರ ತಾತ್ಪರ್ಯವಾಗಿದೆ. ಇದೇ ಅವನಿಗೆ ಚಿಂತಾಮಣಿಯಂತೆ ಆಗುತ್ತದೆ.

ವ್ಯಾಸ ವೀಕ್ಷಿತ





• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ವಿಪ್ರವೇಷದಲ್ಲಿ ಭೇಟಿ


ಕೃಷ್ಣಾರ್ಜುನ-ಭೀಮಸೇನರು ಜರಾಸಂಧ ಸಂಹಾರಕ್ಕಾಗಿ ಆಗಮಿಸುತ್ತಿರುವಲ್ಲಿ ಕೆಲವರು ವೇದಪಾರಂಗತ ಬ್ರಾಹ್ಮಣರು ಕೆಲವು ಅಪಶಕುನಗಳನ್ನು ಕಂಡರು. ಅವನ್ನವರು ಜರಾಸಂಧನ ಗಮನಕ್ಕೆ ತಂದರು. ಅವಕ್ಕೆ ಪ್ರತಿಯಾಗಿ ಆತನ ಪುರೋಹಿತರು ಆತನನ್ನು ಆನೆಯ ಮೇಲೆ ಕೂರಿಸಿ ನಾಲ್ಕೂ ಎಡೆಗಳಲ್ಲಿ ಅಗ್ನಿಜ್ವಾಲನ ಮಾಡಿದರು. ಸಂಭಾವ್ಯವಾದ ಅನಿಷ್ಟಗಳ ಪರಿಹಾರಕ್ಕಾಗಿ ಜರಾಸಂಧ ದೀಕ್ಷಿತನಾಗಿ ವ್ರತಿಯಾದನು, ಉಪವಾಸ ಮಾಡಿದನು.

ಇತ್ತ ಸ್ನಾತಕವ್ರತಸ್ಥರಾಗಿ ಬ್ರಾಹ್ಮಣವೇಷದಲ್ಲಿದ್ದ ಈ ಮೂವರು ಆಯುಧಗಳನ್ನು ತೆಗೆದಿಟ್ಟರು. ಅವರಿಗೋ ಎಷ್ಟಾದರೂ ತಮ್ಮ ಬಾಹುಗಳೇ ಆಯುಧಗಳು! ಜರಾಸಂಧನೊಡನೆ ಯುದ್ಧಾಪೇಕ್ಷಿಗಳಾಗಿ ಅವರು ನಗರಪ್ರವೇಶವನ್ನು ಮಾಡಿದರು. ಆ ನರೋತ್ತಮರಾದ ಕೃಷ್ಣ-ಭೀಮ-ಧನಂಜಯರು ಅಲ್ಲಿಯ ರಾಜಮಾರ್ಗಗಳಲ್ಲಿ ಕಂಡದ್ದೇನು? ಭಕ್ಷ್ಯಾಪಣ-ಮಾಲ್ಯಾಪಣಗಳನ್ನು. ಎಂದರೆ, ಬೇಕಾದ್ದನ್ನು ತಿನ್ನಲು ಅಂಗಡಿಗಳು ಹಾಗೂ ಹೂಮಾಲೆಗಳ ಅಂಗಡಿಗಳು! ಅವುಗಳ ಸಿರಿಯನ್ನೂ, ಸರ್ವಕಾಮಗಳನ್ನೂ ಪೂರೈಸುವ ಅಲ್ಲಿಯ ಸಮೃದ್ಧಿಯನ್ನೂ ಅವರು ಕಂಡುಕೊಂಡರು. ಮಹಾಬಲಶಾಲಿಗಳಾದ ಅವರು ಹೂಕಟ್ಟುವವನೊಬ್ಬನಿಂದ ಮಾಲೆಗಳನ್ನು ಬಲಾತ್ಕಾರವಾಗಿ ಸ್ವೀಕರಿಸಿ ಮಾಲಾಧಾರಿಗಳಾದರು. ಅವರ ವಸ್ತ್ರಗಳೂ ನಾನಾವರ್ಣಗಳಿಂದ ಕೂಡಿದ್ದವು. ಹೊಳೆಯುವ ಕುಂಡಲಗಳನ್ನವರು ಧರಿಸಿದ್ದರು. ಜರಾಸಂಧನ ಅರಮನೆಯನ್ನು ಮುಟ್ಟಿದರು. ಅವರು ನಡೆದು ಬರುತ್ತಿದ್ದ ರೀತಿಯು ಹೇಗಿತ್ತೆಂದರೆ, ಹಸುಗಳು ಎಲ್ಲೆಲ್ಲಿವೆಯೆಂದು ಗೋಶಾಲೆಯನ್ನು ನೋಡಿಕೊಂಡು ನಡೆಯುತ್ತಿರುವ ಹಿಮಾಲಯದ ಸಿಂಹಗಳಂತೆ. ಯುದ್ಧಗಳಲ್ಲಿ ಶೋಭಿಸುವ ಅವರ ತೋಳ್ಗಳು ಮಹಾಗೃಹದ ಕಂಭಗಳಂತೆ ಇದ್ದುವು. ಒಟ್ಟಿನಲ್ಲಿ, ವಿಶಾಲವಕ್ಷಸ್ಥಳವುಳ್ಳವರೂ ಆನೆಗಳಂತಿರುವವರೂ ಆದ ಅವರನ್ನು ಕಂಡು ಮಾಗಧರಿಗೆ, ಎಂದರೆ ಮಗಧ ದೇಶದ ಪ್ರಜೆಗಳಿಗೆ, ವಿಸ್ಮಯವೇ ಉಂಟಾಯಿತು.ಜನಗಳು ಕಿಕ್ಕಿರಿದಿದ್ದ ಅಲ್ಲಿಯ ಮೂರು ಕಕ್ಷ್ಯಗಳನ್ನು ದಾಟಿದರು ಆ ಮೂವರು ಮಹಾಪುರುಷರು. ನಿರ್ಭಯರಾಗಿದ್ದ ಅವರು ಅಭಿಮಾನಿಗಳಾಗಿಯೇ ಜರಾಸಂಧನನ್ನು ಸಮೀಪಿಸಿದರು. ಜರಾಸಂಧನೂ ಅವರನ್ನು ಆದರದೊಂದಿಗೇ ಸತ್ಕರಿಸಿದನು. ಪಾದ್ಯ-ಮಧುಪರ್ಕಗಳಿಗೆ, ಗೋದಾನಕ್ಕೆ, ಅರ್ಹರಾದವರು ಅವರು. ಪ್ರತ್ಯುತ್ಥಾನ ಮಾಡಿ, ಎಂದರೆ ತಾನೇ ಎದ್ದು ಬಂದವನಾಗಿ, ಅವರಿಗೆ ವಿಧ್ಯನುಸಾರವಾದ ಆತಿಥ್ಯವನ್ನು ಸಲ್ಲಿಸಿದನು ಜರಾಸಂಧ. ತಮಗೆ ಸ್ವಾಗತ ಎಂದನು. ಆದರೆ ಭೀಮಾರ್ಜುನರು ಮೌನದಿಂದಿದ್ದರು. ಅವರಲ್ಲಿ ಕೃಷ್ಣನೇ ಎಷ್ಟಾದರೂ ಮಹಾಬುದ್ಧಿಶಾಲಿಯಲ್ಲವೇ? ಆತನೇ ಮಾತನಾಡಿದನು. ''ರಾಜಶ್ರೇಷ್ಠನೇ, ಇವರಿಬ್ಬರೂ ನಿಯಮದಲ್ಲಿರುವವರು, ಎಂದರೆ ಮೌನವ್ರತದಲ್ಲಿರತಕ್ಕವರು. ಮಧ್ಯರಾತ್ರಿಯು ಕಳೆದ ನಂತರವೇ ನಿನ್ನೊಡನೆ ಇವರು ಮಾತನಾಡತಕ್ಕವರು'' ಎಂದನು. ತದನುಸಾರ ಯಜ್ಞಗೃಹದಲ್ಲುಳಿದುಕೊಳ್ಳಲು ಅವರಿಗೊಂದು ವ್ಯವಸ್ಥೆ ಮಾಡಿ ತನ್ನ ಅಂತಃಪುರಕ್ಕೆ ತೆರಳಿದನು. ಅರ್ಧರಾತ್ರವು ಕಳೆಯಲು, ಆ ದ್ವಿಜರಿದ್ದೆಡೆಗೆ ತೆರಳಿದನು. ಆ ರಾಜನ ಈ ವ್ರತವು ಜಗದ್ ವಿಶ್ರುತವಾಗಿದ್ದಿತು. ಏನೆಂದರೆ, ಸ್ನಾತಕಬ್ರಾಹ್ಮಣರು ಬಂದರೆಂದರೆ ಅದು ಅರ್ಧರಾತ್ರವೇ ಆಗಿದ್ದರೂ ಸಹ ಅವರನ್ನು ತಾನೇ ಎದುರ್ಗೊಂಡು ಸ್ವಾಗತಿಸುತ್ತಿದ್ದನು. ಬಂದಿದ್ದವರ ವೇಷವೇ ಅಪೂರ್ವವಾಗಿದ್ದರಿಂದ, ಜರಾಸಂಧನು ವಿಸ್ಮಯದಿಂದಲೇ ಅವರ ಬಳಿ ಸಾರಿದನು. ಆತನನ್ನು ಕಾಣುತ್ತಲೇ, ಸ್ವಸ್ತ್ಯಸ್ತು, ನಿನಗೆ ಕಲ್ಯಾಣವಾಗಲಿ ಎಂದು ಅವರೆಂದರು. ಪರಸ್ಪರ ಮುಖ ನೋಡಿಕೊಂಡರು. ಬ್ರಾಹ್ಮಣವೇಷದಲ್ಲಿದ್ದ ಆ ಪಾಂಡವ-ಯಾದವರಿಗೆ ಕುಳಿತುಕೊಳ್ಳಿ ಎಂದು ಹೇಳಿದನು.

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com



''ಸುಮ್ಮನೆ ಇರಾಣಂದ್ರೆ ಇರಾಕ್ ಬಿಡಾಕಿಲ್ಲ'' ಎಂದಿದ್ದರು ವೈಎನ್ಕೆ. ಈಗ ಇರಾಕ್ ಯಾವುದಕ್ಕೂ ಬರಾಕ್ ಇಲ್ಲ, ಆದರೆ ಬರಾಕ್ (ಒಬಾಮಾ) ಇದ್ದ ಜಾಗಕ್ಕೆ ಬಂದವನು ಇಡೀ ಪ್ರಪಂಚವೇ ಸುಮ್ಮನೆ ಇರಾಕ್ ಬಿಡಾಕಿಲ್ಲ! ಒಂದು ಕಾಲದಲ್ಲಿ ಇದ್ದ 'ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದರಂತೆ'' ಎಂಬ ಗಾದೆಯನ್ನು ಈಗ ''ಬಾವಿಗೆಬೆಂಕಿಬಿದ್ದಾಗಗಡ್ಡಕೆರ್ಕೊಂಡ್ರಂತೆ''ಎಂದುಬದಲಾಯಿಸಿದ್ದಾರಂತೆ. ಕೊಲ್ಲಿ ರಾಷ್ಟ್ರಗಳ (ಶಾಂತಿಯುತ ದೇಶಗಳನ್ನು 'ಕೊಲ್ಲದಿರಿ ರಾಷ್ಟ್ರಗಳು' ಎನ್ನಬಹುದೆ?) ತೈಲಕೂಪಗಳಿಗೆ ಬೆಂಕಿ ಬಿದ್ದ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಗ್ಯಾಸ್ ಟ್ರಬಲ್ ಶುರುವಾಗಿದೆ. ಎಲ್‌ಪಿಜಿ ಸಿಲಿಂಡರ್ ದೊರಕುವುದು ನಿಧಾನವಾಗುವುದೆಂಬ ಸುದ್ದಿಯನ್ನು ಕೊಳಕ್ಮೀಡಿಯಾ.ಕಾಮ್ ರಾಸಭ ಕಂಠಕ್ಕೆ ಲೌಡ್‌ಸ್ಪೀಕರ್ ಅಳವಡಿಸಿಕೊಂಡು ಅರಚುತ್ತಿದೆ. 'ದಿನಾ ಬಾಯ್ಬಡ್ಕೊಳ್ಳೋವ್ನು ಕಾಮನಹಬ್ಬ ಬಂದಾಗ ಸುಮ್ನಿರ್ತಾನೆಯೇ?' ಎಂಬಂತೆಯೇ ಜಾಲತಾಣಗಳು ಸಿಕ್ಕಸಿಕ್ಕವರ ಜನ್ಮ ಜಾಲಾಡುವ ತಾಣಗಳಾಗಿ ಬದಲಾಗಿವೆ.

''ಹೊಟೇಲಲ್ಲಿ ತಿಂದೂ ತಿಂದೂ ಗ್ಯಾಸ್ ಟ್ರಬಲ್ ಆಗ್ತಿತ್ತು. ಹೊಟೇಲಿಗೇ ಗ್ಯಾಸ್ ಟ್ರಬಲ್ ಶುರುವಾಗಿರೋದ್ರಿಂದ ಸಲಾಡ್ ತಿಂದು ಸಾಲಿಡ್ ಹೆಲ್ತ್ ಪಡೆಯಬಹುದು'' ಎಂದಿತು ಬಿಪಾಸಿಟಿವ್.ಎವರ್‌ನ ಟ್ವೀಟ್.

'ಸಿಲಿಂಡರ್‌ಪ್ರಾಬ್ಲಂಅಂತೆ.ನನಗೂಸಿಲಿಂಡ್ರಿಕಲ್‌ವಿಷನ್ನಿನದೇಪ್ರಾಬ್ಲಮ್ಮು. ಕ್ಯಾನ್‌ಎನಿಬಡಿಸಜೆಸ್ಟ್‌ಎಗುಡ್‌ನೇತ್ರವೈದ್ಯ?''ಎಂದಿತುಬ್ಲೈಂಡ್.ಡೇಟ್.ಆರ್ಗ್.

''ಎಲ್‌ಪಿಜಿ ಶುರುವಾಗಿದ್ದೇ 1991ರಲ್ಲಿ. ಮೂವತ್ತೈದು ವರ್ಷಗಳು ತೊಂದರೆಯಿಲ್ಲದೆ ನಡೆಯಿತಲ್ಲ, ಅದೇ ಸಂತೋಷ'' ಎಂದು ಟ್ವೀಟಿಸಿತು ಮನ್ಮೋಹನ್.ಸಿಸ್ಯ.ನೆಟ್

''ಎಲ್‌ಪಿಜಿ ಸಿಲಿಂಡರ್‌ಗಳು ಅದಕ್ಕೂ ಮುಂಚೆ ಇದ್ದವು ಸಿಸ್ಯಾ'' ಎಂದು ಕೆಣಕಿತು ಗುರು.ಟ್ವೀಟ್

''ಓಹ್! ಸಿಲಿಂಡರ್ ಬಾಬ್ತೋ? ನಾನು ಲಿಬರಲೈಸೇಷನ್, ಪ್ರೈವೆಟೈಸೇಷನ್,ಗ್ಲೋಬಲೈಸೇಷನ್ ಎಲ್‌ಪಿಜಿಎಂದುಕೊಂಡೆ.''ಮೊದ್ದು ಸ್ಮೈಲಿಯನ್ನು ಲಗತ್ತಿಸಿದ ಸಿಸ್ಯ.

''ಆಕ್ಚುಯಲಿ,ಗ್ಯಾಸ್‌ಟ್ರಬಲ್‌ಹೊಸದೇನಲ್ಲ.ಐದುದಶಕಗಳಹಿಂದೆಯೇ ಆಗಾಗ್ಗೆ ದೊಂಬಿ ನಡೆಯುತ್ತಿತ್ತು'' ಎಂದಿತು ಓಲ್ಡೀ.ಏನ್ಷಿಯೆಂಟ್‌ನ ಟ್ವೀಟ್.

''ದೊಂಬಿ? ಎಂತಹ ದೊಂಬಿ?'' ಕೇಳಿತು ಕ್ಯೂರಿಯಸ್.ಕ್ಯಾಟ್

''ಕಲ್ಲುತೂರಾಟ, ಡೌನ್ ಡೌನ್ ಪ್ರಿನ್ಸಿಪಾಲ್, ಬಸ್ ಸುಡುವಿಕೆ... ಜನರಲಿ ದೊಂಬಿ.''

''ಸಿಲಿಂಡರ್ ಸಿಗುವುದು ನಿಧಾನವೆಂದು ಬಸ್ ಸುಟ್ಟರೆ?''

''ಓಹ್! ಯೂ ಮೀನ್ ಗ್ಯಾಸ್ ಸಿಲಿಂಡರ್! ನಾನೆಲ್ಲೋ ನೀವು ಗವರ್ನ್‌ಮೆಂಟ್ ಆರ್ಟ್ಸ್ & ಸೈನ್ಸ್ ಕಾಲೇಜಿನ ಬಗ್ಗೆ ಹೇಳ್ತಿದ್ದೀರಿ ಅನ್ಕೊಂಡಿದ್ದೆ. ಒಂದು ಕಾಲದಲ್ಲಿ ರೌಡಿಗಳೇ ಹೆಚ್ಚಾಗಿದ್ದ ಆ ಕಾಲೇಜನ್ನ ಗ್ಯಾಸ್ ಕಾಲೇಜ್ ಅಂತಾನೇ ಕರೀತಿದ್ದದ್ದು'' ವಿವರಿಸಿತು ಓಲ್ಡೀ. ಏತನ್ಮಧ್ಯೆ ''ಗ್ಯಾಸ್ ಟ್ರಬಲ್? ಈನೋ ಸೇವಿಸಿ'' ಎಂಬ ಜಾಹೀರಾತು ಟ್ರಾಫಿಕ್ ಜ್ಯಾಮ್ ಮಧ್ಯದಲ್ಲಿ ತೂರುವ ಆಟೋದಂತೆ ಆಗಾಗ್ಗೆ ಮೂಡಿ ಹೋಯಿತು.

''ಸಿಲಿಂಡರ್‌ಗಳಿಗೆ ಬರವಿಲ್ಲ, ನಮ್ಮ ಗೋಡೌನ್ ಭರ್ತಿ ಸ್ಟಾಕ್ ಇದೆ'' ಎಂದಿತು ಸರ್ಕಾರದ ಟ್ವೀಟ್. ''ಸರ್ಕಾರ ನಿಜ ಹೇಳುತ್ತಿದೆ'' ಎಂದಿತು ವಿಪಕ್ಷದ ಟ್ವೀಟ್. ಕೂಡಲೆ ಸರ್ಕಾರವು ಒಂದು ಏಕವ್ಯಕ್ತಿಯ ಆಯೋಗವನ್ನು ರಚಿಸಿ 'ವಿಪಕ್ಷವು ಆಡಳಿತಪಕ್ಷವು ಹೇಳಿದುದನ್ನು ಒಪ್ಪಿದೆಯೆಂದರೆ ನಮ್ಮದೋ, ಅದರದೋ ದೋಷವಿದೆ. ಕೂಲಂಕಷವಾಗಿ ತನಿಖೆ ನಡೆಸಿ ವರದಿಯನ್ನು ಕೂಡಲೆ ಒಪ್ಪಿಸಿ' ಎಂದು ಒಳಗೊಳಗೇ ಟ್ವೀಟಿಸಿತೆಂದು ಏನೇನೂ ಅರಿಯದ, ಆದರೆ 'ಬಲ್ಲ ಮೂಲಗಳು' ಎಂಬ ಬ್ಲಾಗ್ ತಿಳಿಸಿದೆ. ''ಆದರೆ ಕೆಲವೇ ನಿಮಿಷಗಳಲ್ಲಿ ವಿಪಕ್ಷವೇ ಇನ್ನೊಂದು ಪೋಸ್ಟ್ ಹಾಕಿದ್ದರಿಂದ ತನಿಖೆಯನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ'' ಎಂದೂ ಅದೇ ಬ್ಲಾಗ್ ತಿಳಿಸಿದೆ.

''ಸರ್ಕಾರವು ನಿಜ ಹೇಳಿದೆ. ಗೋಡೌನಿನಲ್ಲಿ ಸಿಲಿಂಡರ್‌ಗಳು ಇವೆ. ಆದರೆ ಅವೆಲ್ಲವೂ ಖಾಲಿ ಇವೆ'' ಎಂಬುದೇ ವಿಪಕ್ಷದ ಮುಂದುವರಿದ ಟ್ವೀಟ್ ಅಂತೆ. ಈ ಟ್ವಿಟರಾಟ ಇಷ್ಟಕ್ಕೇ ನಿಂತಿಲ್ಲ. ಇದೋ ಮುಂದಿನ ಟ್ವೀಟುಗಳು:

''ಸಿಲಿಂಡರ್ ಖಾಲಿ ಇಲ್ಲ'' ಸರ್ಕಾರದ ಟ್ವೀಟ್

''ಅಂದರೆ ನಿಮ್ಮ ತಲೆ ಖಾಲಿ ಇದೆ ಎಂದೋ?'' ವಿಪಕ್ಷದ ಟ್ವೀಟ್.

''ನಮ್ಮಲ್ಲಿ ಗ್ಯಾಸ್ ಟ್ರಬಲ್ಲೇ ಇಲ್ಲ''

''ಮೂರು ಹೊತ್ತೂ ತಿಂದವರಿಗೆ ಗ್ಯಾಸ್ ಟ್ರಬಲ್ ಇರಲ್ಲ, ಹೊಟ್ಟೆಯನ್ನ ಖಾಲಿ ಬಿಟ್ಟುಕೊಂಡವರಿಗಷ್ಟೇ ಆ ತೊಂದರೆಯ ಪರಿಚಯ ಇರುತ್ತದೆ.''

''ನಾವು ಹೇಳಿದ್ದು ಸಿಲಿಂಡರ್ ತೊಂದರೆ ಇಲ್ಲವೆಂದು!''

''ತೊಂದರೆ ಇರುವುದು ಸಿಲ್ಲಿ ಲೀಡರ್‌ದು!''

ಇವೆಲ್ಲ ಪರಪಂಚದ ಗ್ಯಾಸ್ ಟ್ರಬಲ್ ಆದರೆ ನನ್ನದೇ ಆದ ಗ್ಯಾಸ್ ಟ್ರಬಲ್ ಉದ್ಭವಿಸುವುದರಲ್ಲಿತ್ತು. ಟ್ವಿಟರಾಟಿಯ ಗಲಭೆಯಲ್ಲಿ ತಲೆಯನ್ನು ಹುದುಗಿಸಿದ್ದವನನ್ನು ಮಡದಿಯ ಫೋನ್ ಕರೆ ಸೆಳೆಯಿತು.

''ವಾಟ್ ಈಸ್ ದ ಸ್ಟೋರಿ?''

''ಗ್ಯಾಸ್ ಟ್ರಬಲ್!''

''ಯಾವ ಬಾಬ್ತು?''

''ಸಿಲಿಂಡರ್‌ದು. ಗೇಟಲ್ಲಿ ವಾಚ್‌ಮನ್ ಹತ್ರ ಇಟ್ಹೋಗಿದ್ದಾನೆ. 'ತುಂಬಾ ಡೆಲಿವರಿಗಳು ಇವೆ. ಪ್ಲೀಸ್ ಕೋಆಪರೇಟ್' ಅಂತ್ಹೇಳಿ 'ಈ ನಂಬರಿಗೆ ಟಿಪ್ಸ್ ಕಳಿಸಿ' ಅಂತ ನಂಬರ್ ಕಳಿಸಿದ್ದಾನೆ ಡೆಲಿವರಿ ಬಾಯ್. ನಿಮಗೆ ನಂಬರ್ ಫಾರ್ವರ್ಡ್ ಮಾಡಿದ್ದೇನೆ'' ಎನ್ನುತ್ತಾ ಫೋನಿಟ್ಟಳು ಮಡದಿ.

ನಮ್ಮ ಅಪಾರ್ಟ್‌ಮೆಂಟಿನ ವಾಚ್‌ಮನ್ ನಿಜಕ್ಕೂ ಕಾಯುತ್ತಿರುವುದು ಯಮನನ್ನು ಮಾತ್ರ ಎಂಬುದು ನನ್ನ ದೃಢವಾದ ನಂಬಿಕೆ. ಬಾವಲಿಯ ಬೆಳಗಿನ ದೃಷ್ಟಿ, ಜೇಡದ ಶ್ರವಣಶಕ್ತಿ, ಆಮೆಯ ನಡಿಗೆಯ ಈತನನ್ನು ಗಾಂಧೀಜಿಯೇ 'ಕೈಸೇ ಹೋ ಅಂಕಲ್?' ಎಂದು ವಿಚಾರಿಸಿಕೊಂಡಿದ್ದರಂತೆ. ಅವನನ್ನು ಹೊರಲು ಜನರು ಬೇಕಾಗಿರುವ ಪರಿಸ್ಥಿತಿಯಲ್ಲಿರುವವನನ್ನು ಸಿಲಿಂಡರ್ ಹೊರು ಎನ್ನಲಾದೀತೇ! ನಾನೇ ಹೋದೆ. ಬೆಂಗಳೂರಿನ ರಸ್ತೆಗಳ ತದ್ರೂಪವಾಗಿರುವ ನಮ್ಮ ಅಪಾರ್ಟ್‌ಮೆಂಟಿನ ಬೇಸ್‌ಮೆಂಟಿನಲ್ಲಿ ಹಳ್ಳಗಳನ್ನು ಹಾರಿಸಿ, ಗುಡ್ಡೆಗಳಿಗೆ ಢೀ ಕೊಟ್ಟು ಪುಡಿಯಾಗಿಸಿ, ಸಿಲಿಂಡರನ್ನು ಲಿಫ್ಟಿಗೆ ವರ್ಗಾಯಿಸಿ ಫ್ಲಾಟಿಗೆ ತಂದೆ. ''ಗ್ಯಾಸ್ ಮುಗಿದಿತ್ತು. ಸಿಲಿಂಡರ್ ಚೇಂಜ್ ಮಾಡಿ ಪುಟ್ಟಿ ಬರುವಷ್ಟರಲ್ಲಿ ಅನ್ನಕ್ಕಿಡಿ'' ಎಂದಿತು ವಾಟ್ಸಪ್.

ಸಿಲಿಂಡರ್‌ಗಳಿಗೆ ಮುತ್ತೈದೆಯ ಲಕ್ಷಣಗಳಿರುತ್ತವೆ. ಮೈಭರ್ತಿ ಕುಂಕುಮದ ಬಣ್ಣವಿರುವ ಇವಕ್ಕೆ ಕುತ್ತಿಗೆಯಲ್ಲಿ ಅರಿಶಿನದ ದಾರದ ಬದಲಿಗೆ ಬಿಳಿಯಬಣ್ಣದದಾರವೊಂದಿರುತ್ತದೆ. ವಿವಾಹಿತಳ ಅರಿಶಿನದ ದಾರವಾದರೂ ಸುಲಭವಾಗಿ ತುಂಡಾದೀತು, ಆದರೆ ಸಿಲಿಂಡರ್‌ನ ದಾರವು 'ಎಳೆದರಾಗಲಿ, ಅಲುಗಿಸಿದರಾಗಲಿ, ದಾರವನ್ನು ಹಿಡಿದೇ ಸಿಲಿಂಡರನ್ನು ಎತ್ತಿ ಹಿಡಿದರಾಗಲಿ, ನಾತಿಚರಾಮಿ'ಎಂಬಂತೆ ಭದ್ರವಾಗಿ ನೇತಾಡುತ್ತಿರುತ್ತದೆ. ಆ 'ತಾಳಿದಾರ'ವನ್ನು ಸಿಲಿಂಡರಿನ ಕೊರಳಿನಿಂದ ಬೇರ್ಪಡಿಸುವ ವಿಚ್ಛೇದನ ವಕೀಲನ ಕೆಲಸವನ್ನು ಮಾಡದಿದ್ದರೆ ಗ್ಯಾಸ್ ಹೊರಬರದೆ ಇಡೀ ಕಿಚನ್ 'ಗ್ಯಾಸ್ ಟ್ರಬಲ್'ನಿಂದ ನರಳುತ್ತದೆ.

ಹಳೆಯಸಿಲಿಂಡರಿನಿಂದಸರಬರಾಜುಮೂತಿಯನ್ನುಹೊರಸೆಳೆದುಹೊಸ ಸಿಲಿಂಡರಿಗೆಹೊಂದಿಸುವಮುನ್ನ ಸಿಲಿಂಡರಿನ 'ತಾಳಿದಾರ'ವನ್ನು ತೆಗೆಯಲು ಉದ್ಯುಕ್ತನಾದೆ. ಭೂಮಿಗೆ ಸಮಾನಾಂತರವಾಗಿ ದಾರವನ್ನು ಸೆಳೆದು ಹಿಡಿದು ಎಡಕ್ಕೆಬಲವಾಗಿಜಗ್ಗಿದೆ. ಊಹೂಂ. ದುಂಬಿಕೊರೆದರೂ ತೊಡೆಯಲುಗಿಸದ ಕರ್ಣನಂತೆ ದಾರವು ಯಥಾಸ್ಥಿತಿಯಲ್ಲಿತ್ತು.

ಎಡಕ್ಕೆ ಜಗ್ಗಿದೆ. ಅದು ಕಾರ್ಲ್ ಮಾರ್ಕ್ಸ್‌ನ ಅನುಯಾಯಿ ಅಲ್ಲವೆಂದು ದೃಢವಾಯಿತು. ದಾರವನ್ನು ಮುಷ್ಟಿಯಲ್ಲಿ ಹಿಡಿದು ಅನಾಮತ್ತಾಗಿ ಸಿಲಿಂಡರನ್ನು ಎತ್ತಿದೆ. ದಾರವು ಸ್ಥಿತಿಸ್ಥಾಪಕತ್ವವನ್ನು ಕಾಪಾಡಿಕೊಂಡಿತು. ಚಿಂತಾಕ್ರಾಂತನಾದೆ. ಕ್ಲಾಂತನಾದೆ. ಟ್ವಿಟರ್‌ನಲ್ಲಿಕಾಣಿಸಿಕೊಂಡಗ್ಯಾಸ್‌ಟ್ರಬಲ್ ನನ್ನನ್ನೇನೂಕಾಡಿರಲಿಲ್ಲ. ಮೊನ್ನೆ ಬುಕ್‌ಮಾಡಿದ್ದೆ, ಇವತ್ತು ಅನ್ನಕ್ಕೆಇಡಬೇಕಾದ ಸಮಯಕ್ಕೆ ಸರಿಯಾಗಿ ಸಿಲಿಂಡರ್ ಬಂದಿತ್ತು. ಆದರೆ ದಾರ?

'ಸಂಸ್ಕೃತದಲ್ಲಿಹೆಂಡತಿಯನ್ನುದಾರಾಎಂದುಕರೆಯುತ್ತಾರೆ''ಎಂಬಮಾತು ನೆನಪಾಯಿತು. ಈ ದಾರದ ಸಮಸ್ಯೆ ಬಗೆಹರಿಯದಿದ್ದರೆ ಆ ದಾರಾ ಸಮಸ್ಯೆ ಆಗುವ ಸಂಭವವಿದೆ ಎಂದು ಮನ ಭವಿಷ್ಯ ನುಡಿಯಿತು. ಹೇಗಾದರೂ ದಾರವನ್ನು ಮಣಿಸಿ ದಾರಾಳನ್ನು ಮೆಚ್ಚಿಸಬೇಕೆಂದು ನಿರ್ಧರಿಸಿ ಮಡದಿ ಫಾರ್ವರ್ಡಿಸಿದ್ದನಂಬರಿಗೆಫೋನ್‌ಮಾಡಿ, ವಿಷಯವನ್ನು ತಿಳಿಸಿ, ಗೋಗರೆದೆ. ಗೋರ್ಕಲ್ಲಿನ ಮೇಲಿನ ಮಳೆಯ ನೆನಪಾಯಿತು. ಪರಿಣಾಮವೂ ಡಿಟೋ.

ಬಾಗಿಲ ಬಳಿ ನೆರಳಾಡಿತು. ತಲೆಯೆತ್ತಿದೆ. 'ಕೈಸೇ ಹೋ ಅಂಕಲ್' ಅನ್ನಿಸಿಕೊಂಡವ ನಿಂತಿದ್ದ.

'ಅಮ್ಮ ಫೋನ್ ಮಾಡಿದ್ದರು'' ಎಂದ. ಅವರ ಅಮ್ಮ ಇದ್ದ ಸಮಯದಲ್ಲಿ ಗ್ರಹಂ ಬೆಲ್ ಹುಟ್ಟಿದ್ದನೋ ಇಲ್ಲವೋ ಎಂಬ ಆಲೋಚನೆಯೊಂದು ಸುಳಿದು ಕಷ್ಟದಲ್ಲಿಯೂ ನಗೆಯ ಸುಳಿಗಾಳಿ ಸುಳಿಯಿತು.

''ಸಿಲಿಂಡರ್‌ನ ದಾರ ತೆಗೆಯಕ್ಕೆ ಅಪ್ಪೋರಿಗೆ ಬರಲ್ಲ, ತೆಕ್ಕೊಡು ಅಂದ್ರು ಅಮ್ಮ.'' ನನಗೇಮಣಿಯದಆದಾನವದಾರವುಗೋರಿಗೆಎರಡುಹೆಜ್ಜೆದೂರ ಇವನಿಗೆಸಗ್ಗುವುದೇನು? ವಾಚ್‌ಮನ್ ನೇರವಾಗಿ ಸಿಲಿಂಡರ್ ಬಳಿ ಹೋದ. ಒಂದೇ ಒಂದು ಕ್ಷಣದಲ್ಲಿ 'ತಾಳಿದಾರ'ವನ್ನು ಸಿಲಿಂಡರಿನ ಕುತ್ತಿಗೆಯಿಂದ ಬೇರ್ಪಡಿಸಿ, ಸರಬರಾಜುಮೂತಿಯನ್ನು ತಗುಲಿಸಿ ಹೊರನಡೆದ.

ಮನೆಯ ಗ್ಯಾಸ್ ಟ್ರಬಲ್ ಸಾಲ್ವ್ ಆಯಿತು. ಪ್ರಪಂಚದ್ದು?

ಸದ್ಯದಲ್ಲೇ ಪ್ರಪಂಚದ ಎಲ್ಲ ತೊಂದರೆಗಳಿಗೂ ಪರಿಹಾರವನ್ನು ಹೊಂದಿರುವ 'ಯುದ್ಧಪ್ರೇಮಿ ಶಾಂತಿದೂತ' ಟ್ರಂಪ್ ಎಲ್ಲರ ಮನೆಗೂ ಸಿಲಿಂಡರ್ ಕಳುಹಿಸುವನಂತೆ. ನೀವು ಮಾಡಬೇಕಾದುದಿಷ್ಟೆ.

ಕೂಡಲೆ ನಿಮ್ಮ ಕನ್‌ಸ್ಯೂಮರ್ ನಂಬರನ್ನು ವೈಟ್‌ಹೌಸಿಗೆ ವಾಟ್ಸಪ್ ಮಾಡಿ!

ಆರ್ಷಸಾಹಿತ್ಯಕ್ಕೆ ಹೊಸ ಸ್ಪರ್ಶ ನೀಡಿದ ಬನ್ನಂಜೆ

• ಗ.ನಾ. ಭಟ್ಟ

ಸಂಸ್ಕೃತವಾಙ್ಮಯದಲ್ಲಿ ಭರತಭೂಮಿಯ ಕೀರ್ತಿ ಎರಡು ಮಹಾಕಾವ್ಯಗಳಿಂದ ಅಮರವಾಗಿ ಅತ್ಯುನ್ನತವಾಗಿ ಬೆಳಗುತ್ತಿದೆ. ವೇದಗಳ ನಂತರ ರಾಮಾಯಣ ಮತ್ತು ಮಹಾಭಾರತಗಳು ಪರಮಪೂಜ್ಯ, ಜೀವನಾದರ್ಶ ಗ್ರಂಥಗಳಾಗಿ ಕೋಟಿ ಕೋಟಿ ಭಾರತೀಯರ ಹೃದಯದಲ್ಲಿ ನೆಲೆಗೊಂಡಿವೆ. ಈ ಎರಡರಲ್ಲಿ ರಾಮಾಯಣವು ಹಿಮಾಲಯ ಪರ್ವತದಂತೆ ಅತ್ಯಂತ ರಮಣೀಯವೂ, ಗಗನಚುಂಬಿಯೂ ಆಗಿದ್ದರೆ ಮಹಾಭಾರತವು ಸಮುದ್ರದಂತೆ ವಿಸ್ತಾರವಾಗಿ ಪ್ರಕ್ಷುಬ್ಧವಾಗಿ ಜೀವನದ ತೊಡಕಿನ ಪ್ರಸಂಗಗಳನ್ನು ತೋರಿಸುತ್ತಾ ಮಾರ್ಗಜ್ಯೋತಿಯಾಗಿ ಕಂಗೊಳಿಸುತ್ತಿದೆ. ಮನುಷ್ಯಜೀವನದ ಅರ್ಥವೇನು? ಧರ್ಮವೇನು? ಸಾರಭೂತವಾದ ಗುಣಗಳೇನು ಎಂಬಿತ್ಯಾದಿ ಪ್ರಶ್ನೆಗಳಿಗೆ ರಾಮಾಯಣ, ಮಹಾಭಾರತಗಳಿಂದ ನಾವು ಉತ್ತರಗಳನ್ನು ಕಂಡುಕೊಳ್ಳಬಹುದು.

ಆದರೂ ಅವು ಒಮ್ಮೊಮ್ಮೆ ನಮಗೆ ಎಟುಕುವುದಿಲ್ಲ. ಅದರ ಒಳಮರ್ಮವನ್ನು, ಸಂದೇಶ-ಆದರ್ಶಗಳನ್ನು, ಧರ್ಮಾಧರ್ಮಗಳನ್ನು, ಒಳಿತು-ಕೆಡುಕುಗಳನ್ನು ತೋರಿಸಿಕೊಡುವುದಕ್ಕೆ ಖಂಡಿತಕ್ಕೂ ಒಬ್ಬ ಗುರು ಬೇಕಾಗುತ್ತಾನೆ. ಅಂತಹ ಗುರುಗಳಲ್ಲಿ ಒಬ್ಬರು ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯರು, ಇನ್ನೊಬ್ಬರು ವಾಲ್ಮೀಕಿ-ವ್ಯಾಸಹೃದಯಜ್ಞ ಎಂದೇ ಖ್ಯಾತರಾದ ಡಾ. ಕೆ.ಎಸ್.ನಾರಾಯಣಾಚಾರ್ಯರು. ಇವರಿಬ್ಬರೂ ಇಂದು ನಮ್ಮೊಂದಿಗಿಲ್ಲ. ಆದರೆ ಅವರು ರಚಿಸಿದ ಕೃತಿಗಳು, ಮಾಡಿದ ಪ್ರವಚನಗಳು ನಮ್ಮೊಂದಿಗೆ ಇವೆ. ರಾಮಾಯಣ-ಭಾರತದ ಒಳಬಗೆ- ಗುಟ್ಟು-ಸ್ವಾರಸ್ಯಗಳನ್ನು ತಿಳಿಯುವುದಕ್ಕೆ ಇಬ್ಬರೂ ಒಂದೊಂದು ಮಾರ್ಗವನ್ನು ಅನುಸರಿಸಿದರು. ಕೆ.ಎಸ್.ನಾರಾಯಣಾಚಾರ್ಯರು ಐರೋಪ್ಯ ಸಾಹಿತ್ಯ ಕೃಷಿಯ ವಿಮರ್ಶಾ ಮಾನದಂಡವನ್ನೂ, ಭಾರತೀಯ ವ್ಯಾಖ್ಯಾನ ಪರಂಪರೆಯನ್ನೂ, ಇಲ್ಲಿಯ ಕಾವ್ಯಮೀಮಾಂಸೆಯ ಅಳತೆಗೋಲನ್ನೂ ಇಟ್ಟುಕೊಂಡು ಈ ಮಹಾಕಾವ್ಯಗಳ ಅಂತರಂಗವನ್ನು ಮೊಗೆದು ಮೊಗೆದು ಕೊಟ್ಟರು. ಬನ್ನಂಜೆಯವರು ಇಲ್ಲಿಯ ಮಹಾಕಾವ್ಯಗಳ ಉಪಕ್ರಮ-ಉಪಸಂಹಾರಗಳಿಂದಲೇ, ಅದರ ಪೂರ್ವೋತ್ತರ ಸಮನ್ವಯದಿಂದಲೇ ಅವುಗಳ ಅಂತರಂಗವನ್ನು ಬಿಡಿಸಿ ಬಿಡಿಸಿ ಕಾವ್ಯರಸಿಕರಿಗೆ ಉಣಬಡಿಸಿದರು.


ಪೂರ್ವೋತ್ತರಾವಿರೋಧೇನ ಕೋತ್ರಾರ್ಥೋಭಿಮತೋ ಭವೇತ್ ।
ಇತ್ಯಾದ್ಯಮೂಹನಂ ತರ್ಕಃ ಶುಷ್ಕತರ್ಕಂ ತು ವರ್ಜಯೇತ್ ॥

ಎಂಬ ಮಾನದಂಡವನ್ನಿಟ್ಟುಕೊಂಡು ಮಹಾಕಾವ್ಯಗಳ ಅಂತರಂಗಕ್ಕೆ ಹೊಸ್ಪರ್ಶವನ್ನು ನೀಡಿದರು. ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿದರು.

ಬನ್ನಂಜೆ ಗೋವಿಂದಾಚಾರ್ಯರು ಈ ನಾಡಿನ ಭಾಗ್ಯ. ಎಲ್ಲಿ ಬೇಕೆಂದರೆ ಅಲ್ಲಿ, ಯಾವಾಗ ಬೇಕೆಂದರೆ ಆವಾಗ ಕಾಣಸಿಗುವ ವ್ಯಕ್ತಿತ್ವವಲ್ಲ. ಅವರದ್ದು ಶತಮಾನಕ್ಕೊಮ್ಮೆ ಭೂಮಿಯಲ್ಲಿ ಹುಟ್ಟಿಬರುವ ಅಪರೂಪದ ಚೈತನ್ಯ. ಅಸಾಧಾರಣವಾದ ವೈದುಷ್ಯ, ಚಿಂತನೆ, ವಿಮರ್ಶೆ-ಇವನ್ನು ಒಂದೇ ಕಡೆ ನೋಡಬೇಕೆಂದರೆ ಅದು ಬನ್ನಂಜೆಯವರಲ್ಲಿ ಮಾತ್ರ. ಪ್ರಾಚೀನ ಸಾಹಿತ್ಯಗಳಿಗೆ ಭಾಷ್ಯಕಾರರಾಗಿ, ವ್ಯಾಖ್ಯಾನಕಾರರಾಗಿ, ಮಹಾವಾಗ್ಮಿಯಾಗಿ, ಕವಿಯಾಗಿ, ಕಥನಕಾರರಾಗಿ, ಗ್ರಂಥಸಂಪಾದಕರಾಗಿ, ಅನುವಾದಕರಾಗಿ, ಪತ್ರಕರ್ತರಾಗಿ, ದಾರ್ಶನಿಕರಾಗಿ, ವೇದಾಂತಿಯಾಗಿ, ಸಂಶೋಧಕರಾಗಿ, ನೂರೈವತ್ತಕ್ಕೂ ಹೆಚ್ಚು ಕೃತಿರಚಯಿತರಾಗಿ ಅವರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಪ್ರಪಂಚಕ್ಕೆ ನೀಡಿದ ಕೊಡುಗೆ ಅನನ್ಯವಾದುದು.

ಅವರ ವ್ಯಕ್ತಿತ್ವದಲ್ಲಿ ಸುಂದರ ಭಾವುಕತೆಯೂ ಪ್ರೌಢ ವೈಚಾರಿಕತೆಯೂ ಮೇಳೈಸಿದ್ದವು. ಸಂಪ್ರದಾಯದೊಟ್ಟಿಗೆ ಆಧುನಿಕತೆಯೂ ಅಷ್ಟೇ ಪ್ರಮಾಣದಲ್ಲಿ ಬೆರೆತಿದ್ದವು. ಸರಳತೆ-ಸಂಕೀರ್ಣತೆಯೊಂದಿಗೆ ಸರಸತೆ-ವಿನೋದ, ಸ್ನೇಹ-ಸಾಹಸ-ಇವೆಲ್ಲವೂ ಮುಪ್ಪುರಿಗೊಂಡಿದ್ದವು. ವಿಕ್ಷಿಪ್ತತೆ ಅವರ ವಿಶೇಷ ಗುಣವಾಗಿತ್ತು. ''ನನ್ನದು ವಿಕ್ಷಿಪ್ತವಾದ ಅಧ್ಯಯನ, ವಿಕ್ಷಿಪ್ತವಾದ ಓದುವಿಕೆ, ವಿಕ್ಷಿಪ್ತವಾದ ಬದುಕು. ಆದರೂ ಅದೊಂದು ತನ್ನಷ್ಟಕ್ಕೆ ಒದಗಿ ಬಂದ ವೇದಿಕೆ'' ಎಂದು ಅವರೇ ಹೇಳಿಕೊಂಡಿದ್ದಾರೆ. (ಆತ್ಮನಿವೇದನೆ-28)

ಅವರು ಬಾಲ್ಯದಿಂದಲೂ ಜಿಜ್ಞಾಸು ಪ್ರವೃತ್ತಿಯನ್ನು ಹೊಂದಿದ್ದರು. ಪ್ರಶ್ನೆ ಕೇಳುವುದು ಅವರ ಜಾಯಮಾನವಾಗಿತ್ತು. ಸಾಂಪ್ರದಾಯಿಕ ಪಂಡಿತರಿಂದ ಅವರಿಗೆ ಸರಿಯಾದ ಉತ್ತರ ಸಿಗುತ್ತಿರಲಿಲ್ಲ. ಅದರಿಂದ ಅವರು ತುಂಬಾ ಅತೃಪ್ತರಾದರು. ಇದಕ್ಕೆ ಪರಿಹಾರ ಏನು ಎಂದು ಅವರು ತಮ್ಮ ತಂದೆಯವರ ಬಳಿ ಕೇಳಿದಾಗ ''ಪ್ರಶ್ನೆ ನಿನಗೆ ಬಂತಲ್ಲ, ಆ ಪ್ರಶ್ನೆ ಎಲ್ಲಿಂದ ಬಂತು ಅಲ್ಲೇ ಉತ್ತರ ಹುಡುಕು'' ಅಂತ ಹೇಳಿದರು. ''ತಪಸಾ ಬ್ರಹ್ಮ ವಿಜಿಜ್ಞಾಸಸ್ವ'' ಎಂಬ ಉಪನಿಷದ್ವಾಣಿ ಅವರನ್ನು ಪ್ರೇರಿಸಿ, ಮುನ್ನಡೆಸಿತು. ''ತಂದೆಯವರ ಮಾತು ನಿಜವಾಗಿ ನನ್ನನ್ನು ಚಿಂತನೆಗೆ ಹಚ್ಚಿತು. ನನ್ನ ಜೀವನಕ್ಕೆ ಹೊಸ ರೂಪರೇಷೆ ನೀಡಿತು'' ಎಂದಿದ್ದಾರೆ ಬನ್ನಂಜೆ. ಅವರ ದೊಡ್ಡಪ್ಪ ಪಡುಮುನ್ನೂರು ಶ್ರೀನಿವಾಸಾಚಾರ್ಯರು, ಪೇಜಾವರ ಶ್ರೀಗಳು ಮತ್ತು ಭಂಡಾರಕೇರೆ ಶ್ರೀ ವಿದ್ಯಾಮಾನ್ಯ ತೀರ್ಥರು ಇವರುಗಳಿಂದ ಒಂದಿಷ್ಟು ಪಾಠ ಹೇಳಿಸಿಕೊಂಡಿದ್ದನ್ನು ಬಿಟ್ಟರೆ ಬನ್ನಂಜೆಯವರದ್ದು ಸ್ವಾಧ್ಯಾಯವೇ ಹೆಚ್ಚು. ಇದರ ಜೊತೆಗೆ ''ಗುರೋರಭಾವೇ ಯೋಗ್ಯಸ್ಯ ಸ್ವಯಮೇವಾಭ್ಯಸೇತ್ ಶ್ರುತೀಃ'' ಎಂಬ ಮಧ್ವಾಚಾರ್ಯರ ಒಂದು ಮಾತು ಅವರ ಸ್ವಾಧ್ಯಾಯವನ್ನು ಪೋಷಿಸಿತು. ಹೀಗೆ ಬಾಲ್ಯದಿಂದಲೇ ಸ್ವಾಧ್ಯಾಯ ಮತ್ತು ಪ್ರವಚನದ ಮೂಲಕ ಅವರು ಬೆಳೆದ ಪರಿ ವಿಸ್ಮಯಾವಹವಾದುದು.



ಇಂದು ಸಂಜೆ 5-30ಕ್ಕೆ ಮೈಸೂರಿನ ರಮಾಗೋವಿಂದ್ ಕಲಾವೇದಿಕೆಯಲ್ಲಿ (ಗಾನಭಾರತೀ ವೀಣೆ ಶೇಷಣ್ಣ ಭವನದ ಆವರಣ) 'ಬನ್ನಂಜೆ 90 ವಿಶ್ವನಮನ' ಕಾರ್ಯಕ್ರಮ ಜರುಗಲಿದೆ.

ಬನ್ನಂಜೆಯವರು ತಮ್ಮ ಓದಿನ ಬಲದಿಂದ, ಜಿಜ್ಞಾಸು ಮತ್ತು ಪ್ರಶ್ನೋತ್ಥಾಪಕಪ್ರವೃತ್ತಿಯಿಂದ ತಥಾಕಥಿತ ಸಾಹಿತ್ಯ ಮತ್ತು ಚರ್ವಿತಚರ್ವಣ ಹಳಸಲು ಮಾತುಗಳಿಂದ ಬಹುಬೇಗನೆ ಹೊರಬಂದುಬಿಟ್ಟರು. ಅದರ ಫಲವಾಗಿ ಅವರು ನೀಡಿದ ಒಂದೊಂದು ನವೋನವೀನ ಹೇಳಿಕೆಯೂ ಸಂಪ್ರದಾಯಶರಣರಿಗೆ, ಮಡಿವಂತರಿಗೆ ವ್ಯತಿರಿಕ್ತವಾಗಿ, ವಿರುದ್ಧವಾಗಿ ಕಾಣಿಸಿಕೊಂಡವು. ವಸ್ತುತಃ ಅವು ವಿರುದ್ಧವಾಗಿಯೂ, ವ್ಯತಿರಿಕ್ತವಾಗಿಯೂ ಇರಲಿಲ್ಲ. ಚಿಂತನ-ಮಂಥನದಿಂದ ಬಂದ ನವನೀತವಾಗಿತ್ತು. ಅದು ಇತರರಿಗೆ ಅರ್ಥವಾಗಲಿಲ್ಲ, ಅಂತಹವರ ಬಗ್ಗೆ ಅವರೇ ಹೇಳಿದ ಒಂದು ಮಾತು-''ಕುರುಡರಿಗೆ ಕಂಬ ಕಾಣದೇ ಇದ್ದರೆ ಅದು ಕಂಬದ ತಪ್ಪಲ್ಲ'' ಎಂದು. ಇದರಿಂದಾಗಿಯೇ ಬನ್ನಂಜೆ ತಥಾಕಥಿತ ಆಸ್ತಿಕರಿಗೆ ಮೈಲಿಗೆಯಾದರು; ತಥಾಕಥಿತ ನಾಸ್ತಿಕರಿಗೆ ಮಡಿವಂತರಾದರು. ಇದಕ್ಕೊಂದು ಸುಂದರ ಉದಾಹರಣೆಯೆಂದರೆ- ''ಸಂಸ್ಕೃತ ನಾಟಕಗಳನ್ನು ತೆಗೆದರೆ ಐವತ್ತರಿಂದ ಅರವತ್ತು ನಾಟಕಗಳು ರಾಮಾಯಣದ್ದೇ. ಎಲ್ಲ ಕವಿಗಳ ವಿಷಯ ಹೆಚ್ಚಾಗಿ ರಾಮಾಯಣದ್ದು. ಕಾಳಿದಾಸ ಮಹಾಭಾರತದ ಶಾಕುಂತಲ ತೆಗೆದುಕೊಂಡ. ನನಗೆ ವಾಲ್ಮೀಕಿಯ ಪ್ರಭಾವ ಅಷ್ಟೊಂದಿಲ್ಲ. ನನ್ನ ದೃಷ್ಟಿಯಲ್ಲಿ ವೇದವ್ಯಾಸರು ಒಂದು ಪರ್ವತವಾದರೆ ವಾಲ್ಮೀಕಿ ತಪ್ಪಲು ಇದ್ದ ಹಾಗೆ. ವ್ಯಾಸರ ಪ್ರಜ್ಞೆಯ ಮುಂದೆ ಏನೂ ಅಲ್ಲ. ಆದರೆ ವಾಲ್ಮೀಕಿಯ ಪ್ರಭಾವವೂ ನನ್ನ ಮೇಲಿದೆ. ಕಾಳಿದಾಸ ನನಗೆ ಯಾವ ಹಂತದಲ್ಲೂ ಪ್ರಭಾವ ಬೀರಲೇ ಇಲ್ಲ, ನನಗೆ ಮಹಾಕಾವ್ಯಗಳಲ್ಲಿ ತುಂಬಾ ಕಾಡಿದ್ದು ಭಾರವಿಯ ಕಿರಾತಾರ್ಜುನೀಯ. ಸಂಸ್ಕೃತವನ್ನು ಅವನು ದುಡಿಸಿಕೊಂಡ ಚೆಂದ ಇದೆಯಲ್ಲ ಅದ್ಭುತ ಅದು. ಅದರ ನಂತರ ಮಾಘ. ಕೆಲವರು ಮಹಾಕಾವ್ಯ ಅಂದರೆ ನೈಷಧ ಅಂತಾರೆ. ಯಾವುದೂ ಕೂಡಾ ಪ್ರಭಾವ ಮಾಡಲಿಲ್ಲ. ನನಗೆ ತುಂಬ ಖುಷಿ ಕೊಟ್ಟವನು ಭಾರವಿ. ನಾಟಕಗಳಲ್ಲಿ ತುಂಬಾ ಖುಷಿ ಕೊಟ್ಟವ ಭವಭೂತಿ ಮತ್ತು ಭಾಸ; ಕಾಳಿದಾಸ ಅಲ್ಲ'' ಎಂದು ಬನ್ನಂಜೆ ಹೇಳುತ್ತಾರೆ.

ಇಲ್ಲಿ ಒಂದು ಸೂಕ್ಷ್ಮವಿದೆ. ಇಲ್ಲಿ ಬನ್ನಂಜೆ ವ್ಯಾಸ, ವಾಲ್ಮೀಕಿ, ಕಾಳಿದಾಸ, ಭಾಸ, ಭವಭೂತಿ ಮೊದಲಾದವರ ಬಗ್ಗೆ ತುಂಬಾ ಭಿನ್ನವಾಗಿ ಮಾತನಾಡಿದ್ದಾರೆ. ಇದು ಮಾಮೂಲಿ ಜಾಡಿಗಿಂತ ತುಂಬಾ ಭಿನ್ನವಾದ, ಹೊಸದಾದ ಮಾತು ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನೇ ಸ್ವಲ್ಪ ವಿವರಿಸಿ ಹೇಳುವುದಾದರೆ-

ಉಪಮಾ ಕಾಳಿದಾಸಸ್ಯ ಭಾರವೇರರ್ಥಗೌರವಮ್ ।
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋಗುಣಾಃ ॥
ಕಾವ್ಯೇಷು ನಾಟಕಂ ರಮ್ಯಮ್ ತತ್ರ ರಮ್ಯಾ ಶಕುಂತಲಾ ।
ತತ್ರಾಪಿ ಚತುರ್ಥೋಂಕೋ ತತ್ರ ಶ್ಲೋಕಚತುಷ್ಟಯಮ್ ॥

''ಉಪಮೆಗೆ ಕಾಳಿದಾಸ, ಅರ್ಥಗೌರವಕ್ಕೆ ಭಾರವಿ, ಪದಲಾಲಿತ್ಯಕ್ಕೆ ದಂಡಿ-ಈ ಮೂರೂ ಗುಣಗಳು ಮಾಘನಲ್ಲಿ ಇವೆ''. ''ಕಾವ್ಯಗಳಲ್ಲಿ ರಮಣೀಯವಾದುದು ನಾಟಕ; ಅದರಲ್ಲೂ ಶಕುಂತಲಾ; ಅದರಲ್ಲೂ ನಾಲ್ಕನೇ ಅಂಕ; ಅದರಲ್ಲೂ ನಾಲ್ಕನೆ ಶ್ಲೋಕ'' ಎಂದು ಯಾವನೋ ಒಬ್ಬ ತನ್ನ ಅನಿಸಿಕೆಯನ್ನು ಹರಿಬಿಟ್ಟ. ಇದನ್ನು ಹಿಂದುಮುಂದು ಯೋಚಿಸದೆ ಎಲ್ಲರೂ ಸ್ವೀಕರಿಸಿ ಪ್ರಚಾರ ಮಾಡತೊಡಗಿದರು. ಇಂತಹ ಕೊಂಡಾಟದ, ಅನಿಸಿಕೆಯ ಮಾತುಗಳು ಸಂಸ್ಕೃತ ಸಾಹಿತ್ಯಪ್ರಪಂಚದಲ್ಲಿ ದಂಡಿಯಾಗಿ ಸಿಗುತ್ತವೆ. ಇಂತಹ ಮಾತುಗಳಿಗೆ ಬನ್ನಂಜೆ ಅಪವಾದ. ಅವರು ಸ್ವತಂತ್ರವಾಗಿ ಚಿಂತಿಸಿ, ತನಗೆ ಅನಿಸಿದ್ದನ್ನು ನೇರವಾಗಿ ದಿಟ್ಟವಾಗಿ ಸಹೃದಯರೆಲ್ಲರೂ ಮೆಚ್ಚುವಂತೆ ಸಾಧಾರಿತವಾಗಿ ಹೇಳುವವರು. ಇದು ಅನೇಕರಿಗೆ ಪಥ್ಯವಾಗುವುದಿಲ್ಲ, ಅಂತಹವರನ್ನು ಕಂಡೇ ಬನ್ನಂಜೆ 'ತಥಾಕಥಿತ ಸಾಹಿತಿಗಳು' ಎಂದು ಖಾರವಾಗಿ ಹೇಳಿದ್ದು.

ಬನ್ನಂಜೆಯವರ ಓದು ಆಳವಾದುದು, ವಿಶಾಲವಾದುದು ಮತ್ತು ಸೃಷ್ಟಿಶೀಲವಾದುದು. ಪ್ರವಚನವೂ ಹಾಗೆಯೇ. ಯಾವುದೇ ಆದರೂ ಕೂಡಾ ಭಿನ್ನವಾಗಿ, ಹೊಸದಾಗಿ, ವಿಚಿಕಿತ್ಸಕ ದೃಷ್ಟಿಯಿಂದ ನೋಡುವುದು ಅವರಕ್ರಮ. ಈ ಕಾರಣದಿಂದಲೇ ಅವರು ನಮ್ಮ ನಾಡಿನ ಪ್ರವಚನಕಾರರಲ್ಲಿ, ಲೇಖಕರಲ್ಲಿ, ಆರ್ಷಸಾಹಿತಿಗಳಲ್ಲಿ ಅಗ್ರಮಾನ್ಯರೆನಿಸಿಕೊಂಡರು.

ಅರಬ್ ರಾಷ್ಟ್ರಗಳ ವಿಶ್ವಾಸ ಕಳಕೊಂಡ ಅಮೆರಿಕ

• ದಿನೇಶ ನಾಯಕ್

ಇರಾನ್ ಸಮರ ಇನ್ನೂ ಮುಂದುವರಿದಿದ್ದು, ಎಲ್ಲರ ನಿರೀಕ್ಷೆಗೆವಿರುದ್ಧವಾಗಿ ಇರಾನ್ ತನ್ನ ಶತ್ರುಗಳಿಗೆ ಪ್ರಬಲ ಪ್ರತಿಯೇಟು ನೀಡುತ್ತಿದೆ. ಅದು ಇಸ್ರೇಲ್‌ನ ವಿರುದ್ಧ ದಾಳಿ ಮಾಡಿರುವುದಷ್ಟೇ ಅಲ್ಲದೇ ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕನ್ ಮಿಲಿಟರಿ ನೆಲೆಗಳ ಮೇಲೂ ದಾಳಿ ನಡೆಸಿದೆ. ಅದರ ಜತೆಗೇ ತೈಲ ಸಂಗ್ರಹಾಗಾರಗಳ ಮೇಲೆ, ತೈಲ ನಿಕ್ಷೇಪಗಳ ಮೇಲೆ ಕೂಡಾ ದಾಳಿ ನಡೆಸಿದೆ. ಅದು ಹೊರ್ಮುಜ್ ಜಲಸಂಧಿಯನ್ನು ಮುಚ್ಚಿರುವ ಕಾರಣದಿಂದಾಗಿ ಇಡೀ ಜಾಗತಿಕ ತೈಲ ಪೂರೈಕೆಯ ಮೇಲೆ ಪರಿಣಾಮ ಉಂಟಾಗಿದೆ. ಅಮೆರಿಕದ ಕೆಲವು ಯುದ್ಧವಿಮಾನಗಳನ್ನೂ ಹೊಡೆದುರುಳಿಸಿದೆ.

ಈ ಸಮರದಲ್ಲಿ ವಿನಾಕಾರಣ ಕೊಲ್ಲಿಯ ಕೆಲವು ದೇಶಗಳು ಸಿಲುಕಿಕೊಂಡಿವೆ. ಅಮೆರಿಕಕ್ಕೆ ಮಿಲಿಟರಿ ನೆಲೆ ಸ್ಥಾಪಿಸಲು ಅವಕಾಶ ನೀಡಿದ ಕಾರಣಕ್ಕಾಗಿ ಅವುಗಳೂ ದಾಳಿಗೆರವಾಗಿವೆ. ಅವುಗಳಿಗೆ 'ರಕ್ಷಣಾ ಕೊಡೆ' ಒದಗಿಸುವುದಾಗಿ ಹೇಳಿದ್ದ ಅಮೆರಿಕವು ಈ ಕಾರ್ಯದಲ್ಲಿ ಈಗ ವಿಫಲಗೊಂಡಿರುವುದು ಅದರ ಮಿತ್ರ ರಾಷ್ಟ್ರಗಳಿಗೆ ಅಸಮಾಧಾನ ಉಂಟು ಮಾಡಿದೆ. ತನ್ನ ಸ್ನೇಹಿತ ರಾಷ್ಟ್ರಗಳ ಮೇಲೆ ದಾಳಿಯಾಗದಂತೆ ತಾನು ತಡೆಯುವುದಾಗಿ ಅಮೆರಿಕ ಈ ಹಿಂದೆ ಹೇಳಿದ್ದರೂ ಈ ವಾಗ್ದಾನವನ್ನು ಪಾಲಿಸಲು ಅದು ವಿಫಲವಾಗಿದೆ. ಹಾಗಾಗಿ ಈಗ ಕೊಲ್ಲಿಯ ಕೆಲವು ರಾಷ್ಟ್ರಗಳು ತಮ್ಮದೇ ಆದ ಪರ್ಯಾಯ ಭದ್ರತಾ ವ್ಯವಸ್ಥೆಯನ್ನು ಮಾಡಿಕೊಳ್ಳುವತ್ತ ಚಿಂತನೆ ನಡೆಸಿವೆ.

1960ರ ದಶಕದ ತನಕ ಗಲ್ಫ್ ರಾಷ್ಟ್ರಗಳಿಗೆ ಬ್ರಿಟನ್ ಸರಕಾರವು ಮಿಲಿಟರಿ ರಕ್ಷಣೆ ನೀಡುತ್ತಿತ್ತು. ಅಲ್ಲಿಂದ ಬಳಿಕ ಅಮೆರಿಕ ಈ ಹೊಣೆಯನ್ನು ಹೊತ್ತುಕೊಂಡಿತು. ಅಮೆರಿಕದ ನೆರವಿನ ಮೂಲಕ ಇರಾನ್ ಮತ್ತು ಸೌದಿ ಅರೇಬಿಯಾಗಳು ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಭದ್ರತಾ ವ್ಯವಸ್ಥೆಯ ಹೊಣೆಗಾರಿಕೆ ವಹಿಸಿಕೊಳ್ಳುವಂತಾಯಿತು. 1979ರಲ್ಲಿ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದುದರಿಂದ ಈ ವ್ಯವಸ್ಥೆ ವಿಫಲಗೊಂಡಿತು. ಈ ಸಂದರ್ಭದಲ್ಲಿ ಅಮೆರಿಕವು ಗಲ್ಫ್‌ನ ಭದ್ರತಾ ಉಸ್ತುವಾರಿಯನ್ನು ತಾನೇ ನೋಡಿಕೊಳ್ಳುವುದಾಗಿ ಹೇಳಿತು. ಗಲ್ಫ್ ಪ್ರದೇಶದಲ್ಲಿ ನಡೆಯುವ ಯಾವುದೇ ದಾಳಿಯನ್ನು ಅಮೆರಿಕದ ಹಿತಾಸಕ್ತಿಗಳ ಮೇಲೆ ನಡೆಯುವ ದಾಳಿ ಎಂಬುದಾಗಿ ಪರಿಗಣಿಸಿ ಅದನ್ನು ಹಿಮ್ಮೆಟ್ಟಿಸಲಾಗುವುದು ಎಂದು ಅಮೆರಿಕ ಘೋಷಿಸಿತು. ಆದರಂತೆ ಗಲ್ಫ್‌ನ ಎರಡು ರಾಷ್ಟ್ರಗಳಾದ ಇರಾನ್ ಮತ್ತು ಇರಾಕ್‌ಗಳು ತಮ್ಮ ಭದ್ರತೆಗೆ ಅಪಾಯಕಾರಿ ಎಂದು ಭಾವಿಸಿದ್ದ ಹಲವಾರು ಗಲ್ಫ್ ರಾಷ್ಟ್ರಗಳು ಇವೆರಡು ದೇಶಗಳ ವಿರುದ್ಧವಾಗಿ 'ಗಲ್ಫ್ ಸಹಕಾರಿ ಮಂಡಳಿ' (ಜಿಸಿಸಿ) ರಚಿಸಿಕೊಂಡವು. ಅದಕ್ಕೆ ಅಮೆರಿಕವೂ ಸಹಕಾರ ನೀಡಿತು.

1991ರಲ್ಲಿ ಇರಾಕ್ ಸಮರದ ಬಳಿಕ ಅಮೆರಿಕವು ಅಲ್ಲಿ ಕೆಲವು ಶಾಶ್ವತ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತು. ಅಮೆರಿಕದ ನೌಕಾಪಡೆಯೊಂದು 1995ರಲ್ಲಿ ಬಹ್ರೇನ್‌ನಲ್ಲಿ ತಳವೂರಿತು. 1996ರಲ್ಲಿ ಕತಾರ್‌ನಲ್ಲಿ ಇನ್ನೊಂದು ನೆಲೆ ಸ್ಥಾಪಿಸಿತು. ಅಲ್ಲಿಂದ ಬಳಿಕ ಕೊಲ್ಲಿ ಪ್ರದೇಶದಲ್ಲಿ ಅಮೆರಿಕದ ನೆಲೆಗಳು ಇನ್ನಷ್ಟು ವಿಸ್ತಾರಗೊಂಡವು. 2017ರಲ್ಲಿ 'ಅರಬ್ ನ್ಯಾಟೋ' ವ್ಯವಸ್ಥೆ ರೂಪುಗೊಂಡಿತು. ಇದರಲ್ಲಿ ಈಜಿಪ್ಟ್ ಮತ್ತು ಜೋರ್ಡಾನ್‌ಗಳೂ ಸೇರಿಕೊಂಡವು. 2022ರಲ್ಲಿ ಈಜಿಪ್ಟ್, ಇರಾಕ್, ಜೋರ್ಡಾನ್ ಸೇರಿದಂತೆ ಗಲ್ಫ್ ರಾಷ್ಟ್ರಗಳೆಲ್ಲಾ ತಮ್ಮ ಪ್ರದೇಶಕ್ಕೆ ಎದುರಾಗುವ ಬೆದರಿಕೆಯನ್ನು ಒಟ್ಟಾಗಿ ಎದುರಿಸುವ ನಿರ್ಧಾರ ತಾಳಿದವು. ಕಳೆದ ವರ್ಷ ಇಸ್ರೇಲ್ ಹಮಾಸ್ ಮೇಲೆ ದಾಳಿ ನಡೆಸಿದಾಗಲೂ ಅಮೆರಿಕವು ಕತಾರ್‌ಗೆ ತಾನು ಭದ್ರತೆ ನೀಡುವುದಾಗಿ ವಾಗ್ದಾನ ನೀಡಿತ್ತು.

ಇದೀಗ ಇರಾನ್ ಯುದ್ಧ ಸ್ಫೋಟಿಸುವುದರೊಂದಿಗೆ ಅಮೆರಿಕ ನೀಡಿದ ಆಶ್ವಾಸನೆಗಳೆಲ್ಲಾ ಪೊಳ್ಳಾಗಿದೆ. ಗಲ್ಫ್ ರಾಷ್ಟ್ರಗಳು ಇರಾನಿನ ಕ್ಷಿಪಣಿ ದಾಳಿಗೆ ತುತ್ತಾಗುತ್ತಿವೆ. ಅವುಗಳ ಮೇಲೆ ದಾಳಿ ನಡೆಯದಂತೆ ರಕ್ಷಣೆ ನೀಡುವಲ್ಲಿ ಅಮೆರಿಕ ವಿಫಲವಾಗಿದೆ.

ಅಮೆರಿಕವು ತಮಗಿಂತ ಇಸ್ರೇಲ್‌ಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದೆ. ಇಸ್ರೇಲ್‌ಗೆ ವಾಯುರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದರೆ, ಇತರ ಗಲ್ಫ್ ದೇಶಗಳಿಗೆ ಅಂತಹ ವ್ಯವಸ್ಥೆ ಪೂರೈಸದ್ದರಿಂದ ಅವು ಇರಾನಿನ ರಾಕೆಟ್ ದಾಳಿಗೆ ತುತ್ತಾಗುತ್ತಿವೆ ಎಂದು ಕೊಲ್ಲಿ ರಾಷ್ಟ್ರಗಳು ಆಪಾದಿಸುತ್ತಿವೆ.

''ಅಮೆರಿಕವು ಕೊಲ್ಲಿ ರಾಷ್ಟ್ರಗಳಿಗೆ ನೆರವು ನೀಡುವುದಕ್ಕಿಂತ ಹೆಚ್ಚಾಗಿ ಕೊಲ್ಲಿ ರಾಷ್ಟ್ರಗಳೇ ಅಮೆರಿಕಕ್ಕೆ ರಕ್ಷಣೆ ನೀಡುವಂತಾಗಿದೆ'' ಎಂದು ಕುವೈತ್‌ನ ರಕ್ಷಣಾ ವಿಶ್ಲೇಷಕನೊಬ್ಬ ಹೇಳಿದ್ದು, ಅದಕ್ಕೆ ಕೊಲ್ಲಿಯ ಇತರ ದೇಶಗಳೂ ಸಹಮತ ವ್ಯಕ್ತಪಡಿಸಿವೆ.

ಯುದ್ಧ ಸಾರುವ ಮೊದಲು ತಮಗೆ ಆ ಕುರಿತಂತೆ ಮಾಹಿತಿಯನ್ನೂ ನೀಡದಿರುವ ಬಗ್ಗೆ ಕೂಡಾ ಈ ಕೊಲ್ಲಿ ರಾಷ್ಟ್ರಗಳು ಅಸಮಾಧಾನಗೊಂಡಿವೆ.

ಗಾಝಾ ಕದನ ನಡೆದಾಗ ಒಂದೆರಡು ವಿಷಯಗಳು ಸ್ಪಷ್ಟವಾಗಿದ್ದವು. ಇಸ್ರೇಲ್ ಮತ್ತು ಅಮೆರಿಕಗಳು ಇರಾನ್ ಮೇಲೆ ದಾಳಿ ನಡೆಸಲು ತಮ್ಮ ವಾಯುಪ್ರದೇಶ ಬಳಸಲು ಗಲ್ಫ್ ರಾಷ್ಟ್ರಗಳು ಅನುಮತಿ ನೀಡಿದ್ದವು. ಹಾಗಿದ್ದರೂ ಇರಾನ್ ಅವುಗಳ ಮೇಲೆ ದಾಳಿಗೆ ಮುಂದಾಗಿರಲಿಲ್ಲ, ಇತ್ತೀಚೆಗೆ ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ದಾಳಿ ನಡೆಸಿದಾಗ ಇದೇ ಗಲ್ಫ್ ರಾಷ್ಟ್ರಗಳು ಇರಾನಿನ ತಮ್ಮ ಬೆಂಬಲ ವ್ಯಕ್ತಪಡಿಸಿದ್ದವು. ಆದರೆ ವಿಪರ್ಯಾಸವೆಂದರೆ ಇರಾನ್ ಈ ಬಾರಿ ಈ ಗಲ್ಫ್ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ.

ಇವೆಲ್ಲದರ ಹಿನ್ನಡೆಯಲ್ಲಿ ಗಲ್ಫ್‌ನ ಕೆಲವು ದೇಶಗಳು ತಮ್ಮ ಭದ್ರತೆಯ ಕುರಿತಂತೆ ಚಿಂತಿತವಾಗಿದ್ದು, ಪರ್ಯಾಯ ವ್ಯವಸ್ಥೆ ರೂಪಿಸಲು ಯೋಚಿಸುತ್ತಿವೆ. ಬಲಿಷ್ಠಶಕ್ತಿಯಾಗಿರುವ ಅಮೆರಿಕವು ಕೊಲ್ಲಿಯಲ್ಲಿ 13 ಮಿಲಿಟರಿ ನೆಲೆಗಳನ್ನು ಹೊಂದಿದ್ದರೂ ಕೇವಲ ಒಂದು ದೇಶದ ದಾಳಿಯನ್ನು ತಡೆಯಲು ವಿಫಲವಾಗಿರುವುದು ಈ ದೇಶಗಳಿಗೆ ಭ್ರಮನಿರಶನ ಉಂಟು ಮಾಡಿದೆ.

ಇರಾನಿನ ವಿರುದ್ಧ ದಾಳಿಗೆ ತಮ್ಮ ನೆಲೆಗಳನ್ನು ಮತ್ತು ವಾಯುಪ್ರದೇಶ ಬಳಸುವುದನ್ನು ನಿರ್ಬಂಧಿಸುವ ಕುರಿತಂತೆ ಈ ರಾಷ್ಟ್ರಗಳು ಚಿಂತಿಸುತ್ತಿವೆ. ಅಂತಹ ನಿರ್ಧಾರ ತಳೆದಲ್ಲಿ ಅದು ಈ ಸಮರದ ಮೇಲೆ ಮಹತ್ವದ ಪರಿಣಾಮ ಬೀರಲಿದೆ.

ಇರಾನ್ ಸಮರವು ಬೇಗ ಮುಗಿಯುವುದನ್ನು ಕೊಲ್ಲಿ ದೇಶಗಳು ಬಯಸುತ್ತಿವೆ. ಅದಕ್ಕೆ ಟ್ರಂಪ್ ಧೋರಣೆಯೇ ಅಡ್ಡಿಯಾಗಿದೆ. ಇದೂ ಅವುಗಳಿಗೆ ಅಮೆರಿಕದ ಕುರಿತಂತೆ ಅಸಮಾಧಾನ ಹೆಚ್ಚಿಸಿದೆ.

ಭಾರತೀಯರೆಂಬ ಸಂದೇಶ ಪ್ರದರ್ಶಿಸಿದರೆ ತೆರೆಯುತ್ತೆ ಜಲಸಂಧಿ | ನಾವು ಭಾರತಕ್ಕೆ ಸಂಬಂಧಪಟ್ಟ ಹಡಗುಗಳೆಂಬ ಸಂದೇಶ

ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯರಿಗಷ್ಟೇ ಅವಕಾಶ!



ಮಧ್ಯಪ್ರಾಚ್ಯ ಯುದ್ಧ ಆರಂಭವಾದಾಗಿನಿಂದ ಇದೇ ಮೊದಲ ಬಾರಿಗೆ ಇರಾನ್, ಹಾರ್ಮುಜ್ ಜಲಸಂಧಿಯಿಂದ ಹಾದುಹೋಗಲು ಭಾರತೀಯ ಮತ್ತು ಭಾರತಕ್ಕೆ ಸಂಬಂಧಪಟ್ಟ ಇತರ ಹಡಗುಗಳಿಗೆ ಮಾತ್ರ ಅವಕಾಶ ಮಾಡಿಕೊಟ್ಟಿದೆ. ಭಾರತದ ರಾಷ್ಟ್ರಧ್ವಜ ಹಾಕಿರುವ ಹಡಗುಗಳು, ಇಂಡಿಯನ್ ಆನ್‌ಬೋರ್ಡ್ (ಹಡಗಿನಲ್ಲಿ ಭಾರತೀಯರಿದ್ದಾರೆ) ಎಂಬ ಸಂದೇಶ ಪ್ರದರ್ಶಿಸುವ ಮೂಲಕ ತಾವು ಭಾರತೀಯರು, ತಮ್ಮದು ಭಾರತೀಯ ಹಡಗುಗಳು ಎಂದು ಗುರುತಿಸಿಕೊಂಡರೆ ಮಾತ್ರ ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗಲು ಇರಾನ್ ಅವಕಾಶ ಮಾಡಿಕೊಡುತ್ತಿದೆ.

ವಿಶ್ವದ ಯಾವುದೇ ರಾಷ್ಟ್ರದ ಹಡಗುಗಳಿಗೂ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಇರಾನ್ ಅನುಮತಿಸಿಲ್ಲ. ಆದರೆ ಭಾರತೀಯರಿಗೆ ಅನುಮತಿಸಿದೆ ಎಂಬುದು ಜಾಗತಿಕವಾಗಿ ಭಾರತ ಎಷ್ಟು ಪ್ರಭಾವ ಬೀರಿದೆ, ಭಾರತದ ನಾಯಕತ್ವದ ಶಕ್ತಿ ಮತ್ತು ಇಂತಹ ಸಂಘರ್ಷದ ಸಮಯದಲ್ಲೂ ಭಾರತ ಮತ್ತು ಭಾರತೀಯರನ್ನು ಇರಾನ್ ಗೌರವದಿಂದ ನಡೆಸಿಕೊಳ್ಳುತ್ತಿರುವುದರ ಹಿಂದೆ ಭಾರತದ ರಾಜತಾಂತ್ರಿಕ ಶಕ್ತಿಯನ್ನು ತೋರಿಸುತ್ತದೆ.

ಭಾರತೀಯರಿದ್ದಾರೆ, ದಾರಿ ಬಿಡಿ! ಹಾರ್ಮುಜ್ ಜಲಸಂಧಿಯಲ್ಲಿ ಹಾದುಹೋಗುವ ಹಡಗುಗಳು ಭಾರತೀಯ ಹಡಗುಗಳೆಂದು ಗುರುತಿಸಿಕೊಳ್ಳಲು ಇಂಡಿಯನ್ಸ್ ಆನ್‌ಬೋರ್ಡ್ (ಹಡಗಿನಲ್ಲಿ ಭಾರತೀಯರಿದ್ದಾರೆ), ಆಲ್ ಇಂಡಿಯನ್ ಆನ್‌ಬೋರ್ಡ್ (ಹಡಗಿನಲ್ಲಿ ಎಲ್ಲರೂ ಭಾರತೀಯರೇ ಇದ್ದಾರೆ) ಮತ್ತು ಆಲ್ ಇಂಡಿಯಾ ಕ್ರೂ (ಭಾರತೀಯ ಸಿಬ್ಬಂದಿ) ಎಂಬ ಡಿಸ್‌ಪ್ಲೇ ಸಂದೇಶಗಳನ್ನು ಪ್ರದರ್ಶಿಸುವ ಮೂಲಕ ಜಲಸಂಧಿ ಹಾದುಹೋಗಲು ಅನುಮತಿ ಪಡೆಯುತ್ತಿವೆ.

ತ್ರಿವರ್ಣ ಧ್ವಜವಿದ್ದರೆ ಮಾತ್ರ ಅನುಮತಿ: ಮಾಧ್ಯಮ ವರದಿಗಳ ಪ್ರಕಾರ, ಇರಾನ್ ಈಗ ಭಾರತದ ರಾಷ್ಟ್ರಧ್ವಜ ನೆಟ್ಟಿರುವ ಹಡಗುಗಳಿಗೆ ಮಾತ್ರ ಹಾರ್ಮುಜ್ ಅನ್ನು ಸುರಕ್ಷಿತವಾಗಿ ದಾಟಲು ಅನುಮತಿ ನೀಡುತ್ತಿದೆ. ಶುಕ್ರವಾರ ಬೆಳಗ್ಗಿನೊಳಗೆ ಕನಿಷ್ಠ ಐದು ಭಾರತೀಯ ಹಡಗುಗಳು ಈ ಜಲಸಂಧಿಯನ್ನು ದಾಟಿವೆ. ಇನ್ನೂ ಕೆಲವು ಹಡಗುಗಳು ಶಿಪ್ ಟ್ರ್ಯಾಕಿಂಗ್ ನಕ್ಷೆಗಳಲ್ಲಿ ಕಾಣಿಸಿಕೊಂಡಿವೆ. ಇತರ ಧ್ವಜ ಇರುವ ಭಾರತಕ್ಕೆ ಸಂಬಂಧಿಸಿದ ಹಡಗುಗಳಿಗೂ ಅವಕಾಶ ನೀಡಲಾಗಿದೆ.

ಹಾರ್ಮುಜ್ ತೆರೆಯದಿದ್ದರೆ ತೈಲ ಘಟಕಗಳ ನಾಶ ಶತಃಸಿದ್ಧ

ಖಾರ್ಗ್ ದ್ವೀಪದಲ್ಲಿರುವ ಇರಾನ್ ಸೇನಾ ನೆಲೆಗಳ ಮೇಲೆ ಬಾಂಬ್ ದಾಳಿ ನಡೆಸಿದ್ದು, ಸೇನಾ ಮೂಲಸೌಕರ್ಯಗಳನ್ನು ಸಂಪೂರ್ಣ ನಾಶ ಮಾಡಿದ್ದೇವೆ. ಹಾರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ ಖಾರ್ಗ್‌ನ ತೈಲ ಘಟಕಗಳನ್ನೂ ಸಂಪೂರ್ಣ ನಾಶ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಎಚ್ಚರಿಕೆ ನೀಡಿದ್ದಾರೆ.

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಯುದ್ಧ ಮೂರನೇ ವಾರ ಪ್ರವೇಶಿಸಿದ್ದು, ಈಗಾಗಲೇ ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಆಗುತ್ತಿರುವುದನ್ನು ಕಾಣಬಹುದು.ಯುದ್ಧ ಆರಂಭವಾದಲ್ಲಿಂದ ತೈಲ ಬೆಲೆಯಲ್ಲಿ ಶೇ.40 ಏರಿಕೆಯಾಗಿದೆ. ಇದರ ಬೆನ್ನಲ್ಲೇ ಖಾರ್ಗ್ ದ್ವೀಪದ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಬೆದರಿಕೆಯೊಡ್ಡಿದೆ. ಇಲ್ಲಿಂದಲೇ ಇರಾನ್ ತನ್ನ ಶೇ.90ರಷ್ಟು ತೈಲ ರಫ್ತು ಮಾಡುತ್ತದೆ. ಅಧ್ಯಕ್ಷ ಟ್ರಂಪ್ ಎಚ್ಚರಿಕೆಗೆ ಇರಾನ್ ಪ್ರತಿಕ್ರಿಯಿಸಿದ್ದು, ಒಂದು ವೇಳೆ ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳ ಮೇಲೆ ಅಮೆರಿಕ ದಾಳಿ ನಡೆಸಿದರೆ, ಅಮೆರಿಕ ಸಂಪರ್ಕದಲ್ಲಿ ವ್ಯವಹರಿಸುವ ತೈಲ ಘಟಕಗಳನ್ನು ಸುಟ್ಟು ಬೂದಿ ಮಾಡುತ್ತೇವೆ ಎಂದು ಹೇಳಿದೆ.

ಖಾರ್ಗ್‌ನಲ್ಲಿ 15 ಸ್ಫೋಟ?

ಅಮೆರಿಕದ ದಾಳಿ ವೇಳೆ ಖಾರ್ಗ್ ದ್ವೀಪದಿಂದ 15ಕ್ಕೂ ಹೆಚ್ಚು ಸ್ಫೋಟಗಳ ಶಬ್ದ ಕೇಳಿದೆಯೆಂದು ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ, ವಾಯು ರಕ್ಷಣಾ ವ್ಯವಸ್ಥೆಗಳು, ನೌಕಾ ನೆಲೆ ಮತ್ತು ವಿಮಾನ ನಿಲ್ದಾಣಗಳು ನಾಶಗೊಂಡಿವೆ. ಆದರೆ ತೈಲ ಮೂಲ ಸೌಕರ್ಯಗಳಿಗೆ ಯಾವುದೇ ಹಾನಿ ಆಗಿಲ್ಲ ಎಂದು ವರದಿಯಾಗಿದೆ.



ಜೈಶಂಕರ್ ಚತುರ ವಿದೇಶಾಂಗ ನೀತಿ

ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಈ ವರದಿಗಳನ್ನು ದೃಢಪಡಿಸಲೂ ಇಲ್ಲ, ನಿರಾಕರಿಸಲೂ ಇಲ್ಲ. ಜೈಸ್ವಾಲ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಇತ್ತೀಚೆಗೆ ಇರಾನ್ ಸಚಿವರೊಂದಿಗೆ ಮೂರು ಬಾರಿ ಮಾತನಾಡಿದ್ದಾರೆ. ಮಾತುಕತೆ ವೇಳೆ ಸಾಗಣೆ ಮತ್ತು ಭಾರತದ ಇಂಧನ ಭದ್ರತೆಯ ಕುರಿತು ಚರ್ಚಿಸಲಾಗಿದೆ. ಸದ್ಯ ಇದಕ್ಕಿಂತ ಹೆಚ್ಚೇನೂ ಹೇಳುವುದು ಬಹಳ ಮುಂಚಿತವಾಗುತ್ತದೆ ಎಂದು ವಕ್ತಾರ ಜೈಸ್ವಾಲ್ ಹೇಳಿದ್ದರು. ಇದಾದ ಬಳಿಕ ಭಾರತದ ಹಡಗುಗಳಿಗಾಗಿ ಮಾತ್ರ ಜಲಸಂಧಿ ದಾಟಲು ಇರಾನ್ ಅವಕಾಶ ನೀಡಿದೆ.

ಮಿಲಿಟರಿ ಸನ್ನದ್ಧತೆ ಮತ್ತು ಸೈನ್ಯ ನಿಯೋಜನೆ

ಈ ಬೆನ್ನಲ್ಲೇ ಅಮೆರಿಕ 2,500 ಮರೀನ್ ಸೈನಿಕರು ಮತ್ತು ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯನ್ನು ಮಧ್ಯಪ್ರಾಚ್ಯಕ್ಕೆ ರವಾನಿಸಿದೆ. ಯುದ್ಧ ಆರಂಭವಾದ ದಿನದಿಂದ ಇರಾನ್‌ನ 15,000ಕ್ಕೂ ಹೆಚ್ಚು ಗುರಿಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ಪಡೆಗಳು ದಾಳಿ ನಡೆಸಿವೆ, ಎಂದು ವರದಿಯಾಗಿದೆ. ಕಳೆದ 24 ಗಂಟೆಗಳಲ್ಲಿ ಕ್ಷಿಪಣಿ ಉಡಾವಣಾ ಕೇಂದ್ರಗಳು ಸೇರಿದಂತೆ 200ಕ್ಕೂ ಹೆಚ್ಚು ನೆಲೆಗಳನ್ನು ಧ್ವಂಸಗೊಳಿಸಲಾಗಿದೆ. ಪ್ರತೀಕಾರವಾಗಿ ಇರಾನ್ ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡಿದ್ದು, ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ಸುಮಾರು 100 ಡಾಲರ್‌ಗೆ ಏರಿಕೆಯಾಗಿದೆ.

ಹಾರ್ಮುಜ್ ಜಲಸಂಧಿಯಲ್ಲಿನ ಪರಿಸ್ಥಿತಿ

ಇರಾನ್ ರಾಜತಾಂತ್ರಿಕರು ಜಲಸಂಧಿ ತಾಂತ್ರಿಕವಾಗಿ ತೆರೆದಿದೆ ಎಂದು ಹೇಳಿಕೊಂಡಿದ್ದರೂ, ನೌಕಾ ಸಂಚಾರ ಶೇ.90ರಷ್ಟು ಕುಸಿದಿದೆ. ವಿಮಾ ಕಂಪನಿಗಳು ರಕ್ಷಣೆ ಹಿಂಪಡೆದಿರುವುದರಿಂದ ಮತ್ತು ಡ್ರೋನ್ ದಾಳಿಯ ಭೀತಿಯಿಂದಾಗಿ ವಾಣಿಜ್ಯ ಹಡಗುಗಳು ಸಂಚಾರ ಸ್ಥಗಿತಗೊಳಿಸಿವೆ. ಈ ಜಲಸಂಧಿಯ ಮೂಲಕ ಸಾಗುವ ವಿಶ್ವದ ಶೇ.20 ರಷ್ಟು ತೈಲ ಮತ್ತು ವಾರ್ಷಿಕ 80 ಮಿಲಿಯನ್ ಟನ್ ಎಲ್‌ಪಿಜಿ ಪೂರೈಕೆಗೆ ಅಡ್ಡಿಯಾಗಿದ್ದು, 1970ರ ದಶಕದ ಮಾದರಿಯ ಇಂಧನ ಬಿಕ್ಕಟ್ಟು ಎದುರಾಗುವ ಆತಂಕ ಮೂಡಿದೆ.



ಮಧ್ಯಪ್ರಾಚ್ಯ ಇತಿಹಾಸದಲ್ಲೇ ಅತಿ ದೊಡ್ಡ ದಾಳಿ

ಖಾರ್ಗ್ ತೈಲ ರಫ್ತು ಕೇಂದ್ರದ ಸೇನಾ ಮೂಲಸೌಕರ್ಯಗಳನ್ನು ಸಂಪೂರ್ಣ ನಾಶ ಮಾಡಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಮಾಡಿದ ಪೋಸ್ಟ್‌ನಲ್ಲಿ ಅವರು, ಇದನ್ನು ಮಧ್ಯಪ್ರಾಚ್ಯದ ಇತಿಹಾಸದಲ್ಲೇ ಅತಿ ಶಕ್ತಿಶಾಲಿ ಬಾಂಬ್ ದಾಳಿಗಳಲ್ಲೊಂದು ಎಂದು ಹೇಳಿಕೊಂಡಿದ್ದಾರೆ. ಆದರೆ ಈ ದಾಳಿಗೆ ಸಂಬಂಧಿಸಿ ಯಾವುದೇ ಸಾಕ್ಷ್ಯವನ್ನು ಅವರು ನೀಡಿಲ್ಲ.

ಹಾರ್ಮುಜ್ ತೆರೆಯಲು ಟ್ರಂಪ್ ತಾಕೀತು

ಖಾರ್ಗ್‌ನಲ್ಲಿರುವ ತೈಲ ಮೂಲಸೌಕರ್ಯಗಳನ್ನೂ ಸಂಪೂರ್ಣ ನಾಶ ಮಾಡುವುದಕ್ಕೂ ಮುನ್ನ ಇರಾನ್ ಎಚ್ಚೆತ್ತುಕೊಂಡು ಹಾರ್ಮುಜ್ ಜಲಸಂಧಿಯನ್ನು ತೆರೆಯಬೇಕು. ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗುವ ಹಡಗುಗಳಿಗೆ ಮುಕ್ತ ಮತ್ತು ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಇರಾನ್ ಇದನ್ನು ಮಾಡಿದರೆ ನಾನೂ ನನ್ನ ನಿರ್ಧಾರ ಮರುಪರಿಶೀಲಿಸುವೆ ಎಂದು ಅಧ್ಯಕ್ಷ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇರಾನ್ ನಾಯಕರ ಮಾಹಿತಿ ನೀಡಿದವರಿಗೆ ಭಾರೀ ನಗದು ಬಹುಮಾನ ಘೋಷಿಸಿದ ಅಮೆರಿಕ

ಮೊಜ್ತಬಾ ಮಾಹಿತಿ ನೀಡಿ, ₹92 ಕೋಟಿ ಪಡೆದುಕೊಳ್ಳಿ!

ವಾಷಿಂಗ್ಟನ್: ಇರಾನ್‌ನ ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಸಹಿತ ನಾಯಕರ ಬಗ್ಗೆ ಇಂಚಿಂಚೂ ಮಾಹಿತಿ ನೀಡುವವರಿಗೆ 10 ದಶಲಕ್ಷ ಡಾಲರ್ (ಅಂದಾಜು 92,47,48,000 ರೂ.) ಭಾರೀ ಬಹುಮಾನವನ್ನು ಅಮೆರಿಕ ಸರ್ಕಾರದ ಭದ್ರತಾ ಇಲಾಖೆ ಘೋಷಿಸಿದೆ.

ಇಸ್ರೇಲ್ ದಾಳಿಗೆ ಗಾಯಗೊಂಡಿದ್ದಾರೆ ಎನ್ನಲಾದ ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಸೇರಿದಂತೆ ಯಾವುದೇ ಇರಾನ್ ನಾಯಕರ ಮಾಹಿತಿ ಸಂಗ್ರಹಿಸಲು ಅಮೆರಿಕ ಪ್ರಯತ್ನಿಸುತ್ತಿದ್ದು, ಇವರ ಬಗ್ಗೆ ಯಾವುದೇ ಮಾಹಿತಿ ನೀಡುವವರಿಗೆ ಭಾರೀ ನಗದು ಬಹುಮಾನ ನೀಡುವುದಾಗಿ ಟ್ರಂಪ್ ಸರ್ಕಾರ ಘೋಷಿಸಿದೆ. ಇರಾನ್ ಉಗ್ರ ನಾಯಕರು ಎಂಬ ಶೀರ್ಷಿಕೆಯಲ್ಲಿ ಇರಾನ್ ಸರ್ವೋಚ್ಚ ನಾಯಕ ಮತ್ತು ಇತರ ನಾಯಕರ ಫೋಟೋ ಸಹಿತ ಹೆಸರುಗಳ ಪಟ್ಟಿಯನ್ನು ಅಮೆರಿಕದ ನ್ಯಾಯಕ್ಕಾಗಿ ರಾಜತಾಂತ್ರಿಕ ಭದ್ರತಾ ಸೇವೆಗಳ ಬಹುಮಾನ ಇಲಾಖೆ ತನ್ನ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಹಂಚಿಕೊಂಡಿದೆ.

ಪಟ್ಟಿಯಲ್ಲಿನ ಪ್ರಮುಖರು: ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಸರ್ವೋಚ್ಚ ನಾಯಕನ ಕಚೇರಿ (ಎಸ್‌ಎಲ್‌ಒ) ಉಪ ಮುಖ್ಯಸ್ಥ ಅಲಿ ಅಸ್ಗರ್ ಹೆಜಾಜಿ, ಎಸ್‌ಎಲ್‌ಒ ಸೇನಾ ಸಲಹೆಗಾರ ಮೇಜರ್ ಜನರಲ್ ವೈಆರ್ ಸಫಾವಿ ಮತ್ತು ಗುಪ್ತಚರ ಸಚಿವ ಇಸ್ಮಾಯಿಲ್ ಖಾತಿಬ್ ಅವರ ಹೆಸರುಗಳು ಪಟ್ಟಿಯಲ್ಲಿವೆ.



ಸಾವು-ನೋವು ಮತ್ತು ರಾಜತಾಂತ್ರಿಕ ಆತಂಕ: ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಇದುವರೆಗೆ 773 ಜನರು ಮೃತಪಟ್ಟಿದ್ದು, 8.5 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಇರಾನ್‌ನಲ್ಲಿ ಸಾವಿನ ಸಂಖ್ಯೆ 1,300 ದಾಟಿದೆ ಎಂದು ವರದಿಯಾಗಿದೆ. ಇರಾಕ್‌ನಲ್ಲಿ ಅಮೆರಿಕದ ಇಂಧನ ಮರುಪೂರಣ ವಿಮಾನ ಪತನಗೊಂಡು ಆರು ಮಂದಿ ಸಿಬ್ಬಂದಿ ಮೃತಪಟ್ಟಿದ್ದಾರೆ. ಜರ್ಮನಿ ಸೇರಿದಂತೆ ಹಲವು ದೇಶಗಳು ಯುದ್ಧ ನಿಲ್ಲಿಸಲು ತಕ್ಷಣದ ಯೋಜನೆಯ ಅಗತ್ಯವಿದೆ, ಎಂದು ಪ್ರತಿಪಾದಿಸಿವೆ.

ಹಾರ್ಮುಜ್ ಜಲಸಂಧಿಯಲ್ಲಿ ಭಾರತಕ್ಕೆ ಸಂಬಂಧಪಟ್ಟ ಹಡಗುಗಳು



ಕಿರುಸುದ್ದಿ

ಮಾತುಕತೆ ಮೂಲಕ ಸಂಘರ್ಷ ಪರಿಹಾರ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಮಾತುಕತೆ ಮೂಲಕ ಪರಿಹರಿಸಲು ಭಾರತವು ಬ್ರಿಕ್ಸ್ ಸದಸ್ಯ ರಾಷ್ಟ್ರಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.ದಿಲ್ಲಿಯಲ್ಲಿ ಅಂತರ ಸಚಿವಾಲಯದ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಜೈಸ್ವಾಲ್, ಕೆಲವು ಬ್ರಿಕ್ಸ್ ಸದಸ್ಯರು ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದಾರೆ. ಸದಸ್ಯ ರಾಷ್ಟ್ರಗಳ ನಡುವಿನ ಭಿನ್ನಾಭಿಪ್ರಾಯಗಳು ಈ ಗುಂಪಿಗೆ ಒಮ್ಮತವನ್ನು ರೂಪಿಸಲು ಕಷ್ಟವಾಗಿಸಿವೆ ಎಂದು ಅವರು ಗಮನಿಸಿದರು.

ಪಾಕ್ ಸರ್ಕಾರಿ ನೌಕರರ ವೇತನ ಶೇ.30 ಕಡಿತ!

ಇಸ್ಲಾಮಾಬಾದ್: ಮಧ್ಯಪ್ರಾಚ್ಯ ಯುದ್ಧದಿಂದ ತೈಲ ಕೊರತೆ ಹಿನ್ನೆಲೆ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ನೌಕರರ ವೇತನವನ್ನು ಶೇ.5ರಿಂದ ಶೇ.30ರವರೆಗೆ ಕಡಿತಗೊಳಿಸಲು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅನುಮೋದನೆ ನೀಡಿದ್ದಾರೆ. ಅಮೆರಿಕ-ಇಸ್ರೇಲ್-ಇರಾನ್ ನಡುವಿನ ಸಂಘರ್ಷದಿಂದ ತೈಲ ಬೆಲೆ ಏರಿಕೆಯಾಗಿದ್ದಲ್ಲದೆ, ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಹಡಗುಗಳನ್ನು ದಾಟಲು ಅನುಮತಿಸದ ಕಾರಣ ಜಾಗತಿಕ ತೈಲ ಪೂರೈಕೆ ಮೊಟಕುಗೊಂಡಿದೆ. ಈ ಹಿನ್ನೆಲೆ ಚರ್ಚಿಸಲು ಶನಿವಾರ ಉನ್ನತಮಟ್ಟದ ಸಭೆ ಕರೆದಿದ್ದ ಪಾಕ್ ಪ್ರಧಾನಿ, ಸರ್ಕಾರದ ಅನಗತ್ಯ ಖರ್ಚು ಕಡಿಮೆಗೊಳಿಸಲು ಸರ್ಕಾರಿ ನೌಕರರ ವೇತನ ಕಡಿತಗೊಳಿಸುವುದಾಗಿ ಪ್ರಕಟಿಸಿದ್ದಾರೆ.


ಆ್ಯಂಸ್ಟರ್‌ಡ್ಯಾಮ್ ಯಹೂದಿ ಶಾಲೆ ಮೇಲೆ ಬಾಂಬ್ ದಾಳಿ!

ಆ್ಯಂಸ್ಟರ್‌ಡ್ಯಾಮ್: ನೆದರ್‌ಲೆಂಡ್ ರಾಜಧಾನಿಯಲ್ಲಿ ಶನಿವಾರ ಮುಂಜಾನೆ ಭಯೋತ್ಪಾದಕ ಬಾಂಬ್ ದಾಳಿ ನಡೆದಿದ್ದು, ಯಹೂದಿ ಶಾಲೆಯೊಂದಕ್ಕೆ ಭಾರೀ ಹಾನಿಯಾಗಿದೆ. ಯಹೂದಿ ಸಮುದಾಯವನ್ನು ಗುರಿಯಾಗಿಸಿ ನಡೆಸಲಾದ ಉಗ್ರ ದಾಳಿಯೆಂದು ಆ್ಯಂಸ್ಟರ್‌ಡ್ಯಾಮ್ ಮೇಯರ್ ಫೆಮ್ಕೆ ಹಲ್ಸೆಮಾ ತಿಳಿಸಿದ್ದಾರೆ. ಸ್ಫೋಟದ ಬಳಿಕ ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ತಕ್ಷಣವೇ ದುರಂತ ಸ್ಥಳಕ್ಕಾಗಮಿಸಿ ಹೆಚ್ಚಿನ ಹಾನಿ ಆಗುವುದನ್ನು ತಡೆದರು. ಇದು ಕಳೆದ ಎರಡು ದಿನಗಳಲ್ಲಿ ಎರಡನೇ ದಾಳಿಯಾಗಿದೆ. ಶುಕ್ರವಾರ ಬಂದರು ನಗರ ರೋಟರ್‌ಡ್ಯಾಮ್‌ನಲ್ಲಿ ಸ್ಫೋಟ ಸಂಭವಿಸಿತ್ತು. ರೋಟರ್‌ಡ್ಯಾಮ್‌ನಲ್ಲಿ ನಾಲ್ವರು ಅಪ್ರಾಪ್ತ ಬಾಲಕರನ್ನು ಬಂಧಿಸಲಾಗಿತ್ತು. ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಯಹೂದಿಗಳನ್ನು ಗುರಿಯಾಗಿಸಿ ದಾಳಿ ನಡೆದಿದೆಯೆಂದು ವರದಿಯಾಗಿದೆ.

ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಶಾ

ಮೊಗಾ(ಬಿಹಾರ): ಯಾರಾದರೂ ರಾಜ್ಯವನ್ನು ಮಾದಕದ್ರವ್ಯಗಳಿಂದ ಮುಕ್ತಗೊಳಿಸಲು ಸಾಧ್ಯ ಎಂದರೆ ಅದು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

2027ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಶನಿವಾರ ಪಂಜಾಬ್ ಜನತೆಗೆ ಮನವಿ ಮಾಡಿದ್ದಾರೆ. ಇಂದು, ಸಾಲ, ಮಾದಕ ದ್ರವ್ಯಗಳು, ಧಾರ್ಮಿಕ ಮತಾಂತರಗಳು, ಭ್ರಷ್ಟಾಚಾರ ಮತ್ತು ದರೋಡೆಕೋರರ ದಾಳಿಯಿಂದ ಪಂಜಾಬ್ ನಾಶವಾಗಿದೆ ಎಂದು ಶಾ ಹೇಳಿದರು.



ಪಂಜಾಬ್ ಕಾಂಗ್ರೆಸ್, ಅಕಾಲಿಗಳು ಮತ್ತು ಆಪ್‌ಗೆ ಅನೇಕ ಅವಕಾಶಗಳನ್ನು ನೀಡಿದೆ. ಈಗ ಬಿಜೆಪಿಗೆ ಅವಕಾಶ ನೀಡಬೇಕು ಎಂದು ಹೇಳಿದರು. ನಾವು ಪಂಜಾಬ್‌ನಲ್ಲಿ ಬದಲಾವಣೆಯನ್ನು ತರುತ್ತೇವೆ ಎಂದು ಹೇಳಿದರು. ಭಗವಂತ್ ಮಾನ್ ಸರ್ಕಾರವು ಭ್ರಷ್ಟಾಚಾರದಲ್ಲಿ ಮುಳುಗಿದೆ. ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರಿಗೆ ಎಟಿಎಂ ಆಗಿ ಮಾರ್ಪಟ್ಟಿದೆ ಎಂದು ಶಾ ಹೇಳಿದರು. 2027ರಲ್ಲಿ ಚುನಾವಣೆಗಳು ನಡೆಯಲಿದ್ದು, ಮೊಗಾವಿನಿಂದ ಬಿಜೆಪಿ ಒಂದು ರೀತಿಯಲ್ಲಿ ತನ್ನ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಿದೆ ಎಂದು ಶಾ ಹೇಳಿದರು.

ನಾನು ಪಂಜಾಬಿನ ಜನರಿಗೆ ಮನವಿ ಮಾಡಲು ಬಂದಿದ್ದೇನೆ ಎಂದು ತಮ್ಮ ಪಕ್ಷಕ್ಕೆ ಬೆಂಬಲ ಕೋರಿದರು. ನಾನು ತಾಯಂದಿರು, ಸಹೋದರಿಯರು ಮತ್ತು ವೃದ್ಧರು ಸೇರಿದಂತೆ ಪಂಜಾಬಿನ ಜನರಿಂದ ಆಶೀರ್ವಾದ ಪಡೆಯಲು ಬಂದಿದ್ದೇನೆ ಎಂದು ಹೇಳಿದರು.

ಎನ್‌ಎಸ್‌ಎ ಬಂಧನದಿಂದ ವಾಂಗ್‌ಚುಕ್ ಬಿಡುಗಡೆ

ಜೋಧ್‌ಪುರ: ರಾಷ್ಟ್ರೀಯ ಭದ್ರತಾ ಕಾಯ್ದೆಯಲ್ಲಿ (ಎನ್‌ಎಸ್‌ಎ) ಲಭ್ಯವಿರುವ ಅಧಿಕಾರ ಬಳಸಿಕೊಂಡು ಬಂಧಿಸಲಾಗಿದ್ದ ಹವಾಮಾನ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲು ಕೇಂದ್ರ ಆದೇಶಿಸಿದೆ. ಈ ಬೆನ್ನಲ್ಲೇ ಜೋಧ್‌ಪುರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರ್ಕಾರ ಅಧಿಕೃತ ಆದೇಶ ಹೊರಡಿಸಿದ ಬೆನ್ನಲ್ಲೇ, ಮಧ್ಯಾಹ್ನ ಸುಮಾರು 1:30 ಗಂಟೆಗೆ ಬಿಡುಗಡೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಯಿತು. 2025ರ ಸೆಪ್ಟೆಂಬರ್ 26 ರಿಂದ ಬಂಧನದಲ್ಲಿದ್ದ ವಾಂಗ್‌ಚುಕ್, ಎನ್‌ಎಸ್‌ಎ ಅನ್ವಯದಲ್ಲಿ ನಿಗದಿಪಡಿಸಲಾದ ಗರಿಷ್ಠ ಅವಧಿಯ ಸುಮಾರು ಅರ್ಧದಷ್ಟು ಕಾಲ ಜೈಲು ಶಿಕ್ಷೆ ಅನುಭವಿಸಿದ್ದಾರೆ. ಸ್ಥಳೀಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ, ಪತ್ನಿ ಗೀತಾಂಜಲಿ ಆಂಗ್ಮೋ ಬಿಡುಗಡೆಯ ಔಪಚಾರಿಕ ಪ್ರಕ್ರಿಯೆಗಳನ್ನು ಪೂರೈಸಿದರು.

ಬಂಧನದ ಹಿನ್ನೆಲೆ: ಲಡಾಖ್‌ನಲ್ಲಿ ತೀವ್ರ ಪ್ರತಿಭಟನೆಗಳು ನಡೆದ ನಂತರ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಲೇಹ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಆದೇಶದ ಮೇರೆಗೆ ವಾಂಗ್‌ಚುಕ್ ಅವರನ್ನು ಬಂಧಿಸಲಾಗಿತ್ತು.

ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡಬೇಕು ಮತ್ತು ಸಂವಿಧಾನದ ಆರನೇ ಅನುಸೂಚಿಗೆ ಸೇರಿಸಬೇಕು ಎಂಬ ಬೇಡಿಕೆಗಳಿಗಾಗಿ ನಡೆದ ಈ ಪ್ರತಿಭಟನೆಗಳಲ್ಲಿ 22 ಪೊಲೀಸರು ಸೇರಿದಂತೆ 45ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ವಾಂಗ್‌ಚುಕ್ ಬಂಧನವನ್ನು ಹಿಂಪಡೆಯುವ ಕೇಂದ್ರದ ನಿರ್ಧಾರವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಸ್ವಾಗತಿಸಿದ್ದಾರೆ.

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಸಮರ್ಪಕ ಲಭ್ಯ

ಹೊಸದಿಲ್ಲಿ: ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನಾಗರಿಕರಿಗೆ ಭರವಸೆ ನೀಡಿದೆ. ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಯಿಂದಾಗಿ ಇಂಧನ ಪೂರೈಕೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳ ನಡುವೆ ಈ ಬಗ್ಗೆ ಆತಂಕ ಬೇಡ ಎಂದಿದೆ.



ಎಕ್ಸ್ ನಲ್ಲಿ ಪೋಸ್ಟ್ ಮಾಡಿದ ಸಚಿವಾಲಯವು, ದೇಶದಾದ್ಯಂತ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸಾಕಷ್ಟು ಲಭ್ಯವಿದೆ. ಕೊರತೆ ಇದೆ ಎಂದು ಇಂಧನವನ್ನು ಸಡಿಲವಾದ ಕಂಟೈನರ್‌ಗಳಲ್ಲಿ ಸಂಗ್ರಹಿಸಬೇಡಿ.ಇದರಿಂದ ಅಪಾಯ ಹೆಚ್ಚಿದೆ ಎಂದು ಗ್ರಾಹಕರಿಗೆ ಸೂಚಿಸಿದೆ. ತಮಿಳುನಾಡಿನಲ್ಲಿ ಚಿಲ್ಲರೆ ಮಾರಾಟದ ಅಂಗಡಿಯೊಂದರಲ್ಲಿ ಪೆಟ್ರೋಲ್ ಅನ್ನು ಸಡಿಲವಾದ ಧಾರಕದಲ್ಲಿ ವಿತರಿಸಲಾಗುತ್ತಿದ್ದು, ಇದು ಸುರಕ್ಷತಾ ಮಾನದಂಡಗಳನ್ನು ಉಲ್ಲಂಘಿಸುವ ಪ್ರಕರಣವನ್ನು ಅಧಿಕಾರಿಗಳು ಪತ್ತೆ ಮಾಡಿದ ಬೆನ್ನಲ್ಲೇ ಈ ಸಲಹೆ ಬಂದಿದೆ.

ಉಲ್ಲಂಘನೆಗಳಿಗೆ ಕಟ್ಟುನಿಟ್ಟಾದ ಕ್ರಮದ ಬಗ್ಗೆ ಸರ್ಕಾರವು ಎಚ್ಚರಿಕೆ ನೀಡಿದೆ. ಈ ವಿಷಯದಲ್ಲಿ ಈಗಾಗಲೇ ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ಹೇಳಿದೆ. ಸಂಬಂಧಿತ ಪೆಟ್ರೋಲ್ ಪಂಪ್ ಅನ್ನು ಸ್ಥಗಿತಗೊಳಿಸಲಾಗಿದೆ. ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಪೆಟ್ರೋಲ್ ಮತ್ತು ಡಿಸೇಲ್ ಅನ್ನು ವಿತರಿಸುವಾಗ ಸುರಕ್ಷತಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ದೇಶದಾದ್ಯಂತದ ಎಲ್ಲಾ ಇಂಧನ ಚಿಲ್ಲರೆ ವ್ಯಾಪಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಐಎಸ್‌ಐ ಬೆಂಬಲಿತ ಉಗ್ರ, ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ

ಅಮೃತಸರ: ಪಾಕಿಸ್ತಾನಿ ಗುಪ್ತಚರ ಸಂಸ್ಥೆ ಐಎಸ್‌ಐ ಬೆಂಬಲಿತ ಭಯೋತ್ಪಾದಕ ಶಸ್ತ್ರಾಸ್ತ್ರ ಜಾಲವೊಂದನ್ನು ಪಂಜಾಬ್ ಪೊಲೀಸರು ಬೇಧಿಸಿದ್ದು, ಭಾರೀ ಶಸ್ತ್ರಾಸ್ತ್ರ ಸಹಿತ ಇಬ್ಬರು ಉಗ್ರರನ್ನು ಬಂಧಿಸಿದ್ದಾರೆ.



ರಾಜ್ಯ ಪೊಲೀಸ್ ಮಹಾನಿರ್ದೇಶಕರ ಮಾರ್ಗದರ್ಶನದಲ್ಲಿ ಅಮೃತಸರ ಗ್ರಾಮೀಣ ಪೊಲೀಸರು ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಅವರಿಂದ ರೈಫಲ್‌ಗಳು, ಪಿಸ್ತೂಲ್‌ಗಳು, ಕಾಟ್ರಿಜ್‌ಗಳನ್ನು ವಶಪಡಿಸಲಾಗಿದೆ. ಪಂಜಾಬ್ ರಾಜ್ಯದೆಲ್ಲೆಡೆ ಭಾರತ ವಿರೋಧಿ ಮತ್ತು ಪೊಲೀಸ್ ವಿರೋಧಿ ಆಖ್ಯಾನವನ್ನು ಹರಡುವುದು ಇವರ ಉದ್ದೇಶವಾಗಿತ್ತೆಂದೂ, ಸಾಮಾಜಿಕ ಜಾಲತಾಣದ ಮೂಲಕ ಪಾಕಿಸ್ತಾನಿ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕದಲ್ಲಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಗಡಿ ಸಂಘರ್ಷ ತೀವ್ರ | ಕುನಾರ್ ಪ್ರಾಂತ್ಯ ಪ್ರದೇಶಕ್ಕೆ ಭಾರೀ ಹಾನಿ

ಕುನಾರ್ ಪ್ರಾಂತ್ಯದ ಮೇಲೆ ಪಾಕ್ ಕ್ಷಿಪಣಿ ದಾಳಿ

ಕಾಬೂಲ್: ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನಿ ಪಡೆಗಳಿಂದ ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದ ಮೇಲೆ 270ಕ್ಕೂ ಹೆಚ್ಚು ರಾಕೆಟ್ ಮತ್ತು ಫಿರಂಗಿ ಗುಂಡುಗಳನ್ನು ಹಾರಿಸಲಾಗಿದ್ದು, ಗಡಿ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ.

ಹಲವು ಜಿಲ್ಲೆಗಳ ಮೇಲೆ ನಡೆದ ಈ ಭೀಕರ ದಾಳಿಯನ್ನು ಕುನಾರ್‌ನ ಮಾಹಿತಿ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಜಿಯಾವುರ್ ರಹಮಾನ್ ಸ್ಪಿನ್ ಘರ್ ಖಚಿತಪಡಿಸಿದ್ದಾರೆ. ಪ್ರಾಂತ್ಯದಾದ್ಯಂತ ಭಾರೀ ಹಾನಿಯಾಗಿದೆ ಎಂದು ವರದಿಯಾಗಿದ್ದರೂ, ಯಾವುದೇ ಪ್ರಾಣಹಾನಿ ವರದಿಯಾಗಿಲ್ಲ. ಫೆಬ್ರವರಿ 21 ರಂದು ತಾಲಿಬಾನ್ ಶಿಬಿರಗಳ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯ ನಂತರ ಆರಂಭವಾದ ಈ ಸಂಘರ್ಷ ಸತತವಾಗಿ ಮುಂದುವರಿದಿದೆ.

ವೈಮಾನಿಕ ದಾಳಿ ಮತ್ತು ಪ್ರತೀಕಾರ: ಪಾಕಿಸ್ತಾನ ವಾಯುಪಡೆ (ಪಿಎಎಫ್) ಕಂದಹಾರ್ ಪಕ್ತಿಯಾ ಮತ್ತು ಕಾಬೂಲ್‌ನಲ್ಲಿರುವ ಪ್ರಮುಖ ಗುರಿಗಳ ಮೇಲೆ ಸಮನ್ವಯದ ದಾಳಿಗಳನ್ನು ನಡೆಸಿದೆ. ಕಂದಹಾರ್ ನಗರದಲ್ಲಿರುವ ತಾಲಿಬಾನ್‌ನ 'ಅಲ್-ಬದರ್ ಕಾರ್ಪ್ಸ್' ಪ್ರಧಾನ ಕಚೇರಿಯನ್ನು ಗುರಿಯಾಗಿಸಿಕೊಂಡು ಹಿರಿಯ ಕಮಾಂಡರ್‌ಗಳನ್ನು ಹತ್ಯೆಗೆ ಪ್ರಯತ್ನಿಸಲಾಗಿದೆ, ಎಂದು ಗುಪ್ತಚರ ಮೂಲಗಳು ತಿಳಿಸಿವೆ.

ಈ ಕಾರ್ಯಾಚರಣೆಗಳನ್ನು ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ವಿರುದ್ಧ ನಡೆಸಲಾಗುತ್ತಿದೆ ಎಂದು ಪಾಕಿಸ್ತಾನ ಹೇಳಿಕೊಂಡರೆ, ಅಫ್ಘಾನ್ ಅಧಿಕಾರಿಗಳು, ಪಾಕಿಸ್ತಾನ ನಾಗರಿಕರನ್ನು ಹತ್ಯೆ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಈ ಆಕ್ರಮಣಗಳಿಗೆ ತಕ್ಕ ಉತ್ತರ ನೀಡಲಾಗುವುದು ಎಂದು ತಾಲಿಬಾನ್ ನಾಯಕತ್ವ ಎಚ್ಚರಿಕೆ ನೀಡಿದ್ದು, ಗಡಿ ಭಾಗದಲ್ಲಿ ಡ್ರೋನ್ ದಾಳಿ, ಘರ್ಷಣೆಗಳು ಮುಂದುವರಿದಿವೆ.



ದಕ್ಷಿಣ ಏಷ್ಯಾದಲ್ಲಿ ಅಸ್ಥಿರತೆ

ಪಾಕಿಸ್ತಾನ-ಅಫ್ಘಾನಿಸ್ತಾನ ಸಂಘರ್ಷದಿಂದ ದಕ್ಷಿಣ ಏಷ್ಯಾದಲ್ಲಿ ಅಸ್ಥಿರತೆ ಹೆಚ್ಚಿದ್ದು, ಭಯೋತ್ಪಾದನೆ ಹರಡುವಿಕೆ ಮತ್ತು ನಿರಾಶ್ರಿತರು ಬಿಕ್ಕಟ್ಟು ಎದುರಿಸಬಹುದು. ಭಾರತ ಈ ಭಾಗದಲ್ಲಿ ಶಾಂತಿ ಸ್ಥಾಪಕನಾಗಿ ಮತ್ತು ಅಫ್ಘಾನಿಸ್ತಾನಕ್ಕೆ ಮಾನವೀಯ ನೆರವು ನೀಡುತ್ತಿದೆ. ಈಗ, ಪಾಕಿಸ್ತಾನದ ಪಶ್ಚಿಮ ಗಡಿಯಲ್ಲಿನ ಈ ಉದ್ವಿಗ್ನತೆ ಭಾರತದ ಭದ್ರತಾ ಕಾರ್ಯತಂತ್ರದ ಮೇಲೆ ಪ್ರಭಾವ ಬೀರಲಿದ್ದು, ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವಲ್ಲಿ ಭಾರತದ ಪಾತ್ರ ನಿರ್ಣಾಯಕವಾಗಲಿದೆ.

ಕಾಂಗ್ರೆಸ್‌ನಿಂದ ಭೀತಿ ಸೃಷ್ಟಿ: ಪ್ರಧಾನಿ ಮೋದಿ ಟೀಕೆ

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ

ಸಿಲ್ಚಾರ್: ಜಾಗತಿಕ ಸಂಘರ್ಷಗಳಿಂದ ಭಾರತೀಯ ಜನತೆಯ ಮೇಲಾಗುವ ಪರಿಣಾಮಗಳನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು ಆದ್ಯತೆ ನೀಡುತ್ತಿದೆ. ಆದರೆ ವಿರೋಧ ಪಕ್ಷ ಕಾಂಗ್ರೆಸ್ ದೇಶಾದ್ಯಂತ ಭೀತಿ ಹುಟ್ಟಿಸುವ ಮೂಲಕ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಶನಿವಾರ ಅಸ್ಸಾಂನ ಸಿಲ್ಚಾರ್‌ನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ಉದ್ದೇಶಪೂರ್ವಕವಾಗಿ ವದಂತಿ ಹಬ್ಬಿಸುತ್ತಿದೆ. ಸುಳ್ಳು ವಿಡಿಯೋಗಳ (ರೀಲ್ಸ್) ಮೂಲಕ ಜನರ ದಿಕ್ಕುತಪ್ಪಿಸುತ್ತಿದೆ ಎಂದು ಪ್ರತಿಪಾದಿಸಿದರು. ಜಾಗತಿಕ ಯುದ್ಧದ ಸಂದರ್ಭದಲ್ಲಿ ಜವಾಬ್ದಾರಿಯುತ ರಾಜಕೀಯ ಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ವಿರೋಧ ಪಕ್ಷ ವಿಫಲವಾಗಿದೆ ಎಂದು ಅವರು ಟೀಕಿಸಿದರು.

ನಿರ್ಲಕ್ಷ್ಯ ಮತ್ತು ಪರಿಣಾಮಗಳು: ಈಶಾನ್ಯ ಭಾರತದ ಐತಿಹಾಸಿಕ ನಿರ್ಲಕ್ಷ್ಯದ ಬಗ್ಗೆ ಮಾತನಾಡಿದ ಪ್ರಧಾನಿ, ದಶಕಗಳ ಕಾಲ ಈ ಪ್ರದೇಶವನ್ನು ದಿಲ್ಲಿ ಮತ್ತು ಕೇಂದ್ರದ ಆಡಳಿತಗಾರರ ಹೃದಯದಿಂದ ದೂರ ಇಡಲಾಗಿತ್ತು. ಸ್ವಾತಂತ್ರ್ಯದ ಸಮಯದಲ್ಲಿ ಬರಾಕ್ ಕಣಿವೆಯ ಸಮುದ್ರ ಮಾರ್ಗದ ಸಂಪರ್ಕವನ್ನು ಕಡಿತಗೊಳಿಸುವಂತೆ ಗಡಿ ಗುರುತಿಸಲು ಕಾಂಗ್ರೆಸ್ ಅವಕಾಶ ಮಾಡಿಕೊಟ್ಟಿತ್ತು. ಇದು ಈ ಭಾಗದ ಕೈಗಾರಿಕಾ ಸಾಮರ್ಥ್ಯವನ್ನು ಕುಂದಿಸಿತು ಎಂದು ಪ್ರಧಾನಿ ಆರೋಪಿಸಿದರು. ಪ್ರಸ್ತುತ ಬಿಜೆಪಿ ಸರ್ಕಾರ ರೈತರಿಗೆ 20,000 ಕೋಟಿ ರೂ.ಗೂ ಹೆಚ್ಚು ಹಣವನ್ನು ನೇರವಾಗಿ ತಲುಪಿಸಿದೆ ಎಂದು ಅವರು ತಿಳಿಸಿದರು.



ಮೂಲಸೌಕರ್ಯ ಯೋಜನೆಗಳ ಅನಾವರಣ: ಅಸ್ಸಾಂನಲ್ಲಿ ಶುಕ್ರವಾರದಿಂದ ಒಟ್ಟು 47,800 ಕೋಟಿ ರೂ. ವೆಚ್ಚದ ಯೋಜನೆಗಳಿಗೆ ಚಾಲನೆ ನೀಡಲಾಗಿದ್ದು, ಶನಿವಾರ ಸಿಲ್ಚಾರ್‌ನಲ್ಲಿ 23,550 ಕೋಟಿ ರೂ.ಗಳ ಯೋಜನೆಗಳನ್ನು ಅನಾವರಣಗೊಳಿಸಲಾಯಿತು. ಸಿಲ್ಚಾರ್ ಮತ್ತು ಮೇಘಾಲಯದ ಶಿಲ್ಲಾಂಗ್ ನಡುವೆ 22,864 ಕೋಟಿ ರೂ. ವೆಚ್ಚದ 'ಎಕ್ಸ್ ಪ್ರೆಸ್‌ವೇ' ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.


4,824 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆ

• ಬೆಂಗಳೂರು: ರಾಜ್ಯದ 13 ಜಿಲ್ಲೆಗಳಲ್ಲಿ 37 ಹೊಸ ಕೈಗಾರಿಕೆಗಳು ಮತ್ತು ಹೆಚ್ಚುವರಿ ಹೂಡಿಕೆಯ 2 ಯೋಜನೆಗಳಿಗೆ ಒಟ್ಟು 4,824.31 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ 158ನೇ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.



ಐಟಿ ಮೂಲಸೌಲಭ್ಯ, ಸಕ್ಕರೆ ಕಾರ್ಖಾನೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಕಂಪ್ರೆಸ್ಡ್ ಗ್ಯಾಸ್, ವೈಮಾಂತರಿಕ್ಷ, ಚಿನ್ನಾಭರಣ ತಯಾರಿಕೆ,ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಹಾಗೂ ಪಂಚತಾರಾ ಹೋಟೆಲ್ ನಿರ್ಮಾಣ ಯೋಜನೆಗಳಿಗೆ ನೀಡಿರುವ ಅನುಮೋದನೆಗಳಿಂದ ರಾಜ್ಯದಲ್ಲಿ ಹೊಸದಾಗಿ 14,525 ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ. ಶುಕ್ರವಾರ ನಡೆದ ಸಭೆಯ ಬಗ್ಗೆ ಮಾಹಿತಿ ನೀಡಿರುವ ಸಚಿವ ಎಂ.ಬಿ.ಪಾಟೀಲ ಅವರು, 50 ಕೋಟಿಗೂ ಹೆಚ್ಚು ಹೂಡಿಕೆಯ 22 ಪ್ರಮುಖ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ ರಾಜ್ಯದಲ್ಲಿ 3908.68 ಕೋಟಿ ಹೂಡಿಕೆ ಆಗಲಿದೆ. 12,475 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ತಿಳಿಸಿದ್ದಾರೆ. ಇನ್ನೂ 15 ಕೋಟಿಗಳಿಂದ 50 ಕೋಟಿ ಒಳಗಿನ ಹೂಡಿಕೆಯ 15 ಹೊಸ ಯೋಜನೆಗಳಿಗೆ ನೀಡಿರುವ ಅನುಮೋದನೆ ಫಲವಾಗಿ 350.60 ಕೋಟಿ ಹೂಡಿಕೆ ಆಗಲಿದ್ದು, 1,750 ಜನರಿಗೆ ಉದ್ಯೋಗಾವಕಾಶಗಳು ಸಿಗಲಿವೆ. ಹೆಚ್ಚುವರಿ ಹೂಡಿಕೆಯ 2 ಯೋಜನೆಗಳಿಗೆ ನೀಡಿರುವ ಅನುಮೋದನೆಯಿಂದ 565.03 ಕೋಟಿ ಹೂಡಿಕೆಯಾಗಲಿದ್ದು, 300 ಜನರಿಗೆ ಉದ್ಯೋಗಾವಕಾಶ ಸಿಗಲಿವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ರಾಮ ಬಾಣ



ನುಸುಳುಕೋರರಿಗೆ ಟಿಎಂಸಿ ರಕ್ಷಕ

ಪುಟ ೧➡ ಇಲ್ಲಿ ಬಂಗಾಳಿ ಹಿಂದುಗಳನ್ನು ಉದ್ದೇಶಪೂರ್ವಕವಾಗಿ ಅಲ್ಪಸಂಖ್ಯಾತರನ್ನಾಗಿ ಮಾಡಲಾಗುತ್ತಿದೆ. ಕಿರುಕುಳಕ್ಕೊಳಗಾದ ಹಿಂದು ನಿರಾಶ್ರಿತರಿಗೆ ಪೌರತ್ವ ನೀಡುವುದನ್ನು ಟಿಎಂಸಿ ವಿರೋಧಿಸಿದೆ ಎಂದು ಮೋದಿ ಹೇಳಿದ್ದಾರೆ.

ಇದೇ ವೇಳೆ, ಪಶ್ಚಿಮ ಬಂಗಾಳಕ್ಕೆ 18,680 ಕೋಟಿ ರೂ. ಮೊತ್ತದ ಬೃಹತ್ ರಸ್ತೆ ಸಂಪರ್ಕ ಯೋಜನೆಗಳನ್ನು ಅನಾವರಣಗೊಳಿಸಿದರು. ಇದರಲ್ಲಿ 231ಕಿ.ಮೀ. ದೀರ್ಘ ವ್ಯಾಪ್ತಿಯ ಖರಗ್‌ಪುರ-ಮೋರೆಗ್ರಾಮ್ ಆರ್ಥಿಕ ಕಾರಿಡಾರ್ ಚತುಷ್ಪಥ ಯೋಜನೆಗೆ ಶಿಲಾನ್ಯಾಸವೂ ಸೇರಿದೆ. ಈ ಮಾರ್ಗದಿಂದಾಗಿ ಪ್ರಯಾಣ ದೂರ 120ಕಿ.ಮೀ.ಗಳಷ್ಟು ಇಳಿಕೆಯಾಗಲಿದ್ದು, ಪ್ರಯಾಣದ ಅವಧಿ ಕೂಡ 7ರಿಂದ 8 ಗಂಟೆಗಳಷ್ಟು ಕಡಿಮೆಯಾಗಲಿದೆ. ಈ ರಸ್ತೆ ಯೋಜನೆಯು ಖರಗ್‌ಪುರ -ಸಿಲಿಗುರಿ ನಡುವಣ ಆರ್ಥಿಕ ಕಾರಿಡಾರ್‌ನ ಭಾಗವಾಗಿದ್ದು, ಇದು ಪಶ್ಚಿಮ್ ಮೇದಿನಿಪುರ್, ಬಂಕುರ, ಹೂಗ್ಲೀ , ಪುರ್ಬಾ ಬರ್ಧಮಾನ್, ಬೀರ್‌ಭೂಮ್ ಮತ್ತು ಮುರ್ಷಿದಾಬಾದ್ ಜಿಲ್ಲೆಗಳ ಮೂಲಕ ಹಾದುಹೋಗಲಿದ್ದು, ಲಕ್ಷಾಂತರ ಜನರಿಗೆ ಪ್ರಯೋಜನವಾಗಲಿದೆ. ಹಾಗೆಯೇ , 5.6ಕಿ.ಮೀ. ಉದ್ದದ ದುಬ್ರಜ್‌ಪುರ್‌ನ ಚತುಷ್ಪಥ ಬೈಪಾಸ್ ಮತ್ತು ಕಂಗ್‌ಶಬಾಟಿ ಮತ್ತು ಶಿಲಾಬಾಟಿ ನದಿಗಳಿಗೆ ಎನ್‌ಎಚ್-14ರಲ್ಲಿ ಪ್ರಮುಖ ಹೆಚ್ಚುವರಿ ಚತುಷ್ಪಥ ಸೇತುವೆಗಳಿಗೂ ಪ್ರಧಾನಿಯವರು ಶಿಲಾನ್ಯಾಸಗೈದರು. ಜತೆಗೆ ಎನ್ ಎಚ್-19 ಮತ್ತು ಎನ್‌ಎಚ್-14ರ ಭಾಗಗಳನ್ನೂ ಉದ್ಘಾಟಿಸಿದರು.

ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ

ಪುಟ ೧➡ ಈ ಸಂದರ್ಭ ಬಿಜೆಪಿ ನಾಯಕರೊಬ್ಬರು ಹಾಗೂ ಪೊಲೀಸ್ ಅಧಿಕಾರಿಗೆ ಗಾಯಗಳಾಗಿವೆ. ಪ್ರಧಾನಿ ನರೇಂದ್ರ ಮೋದಿಯವರು ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುವ ಕೆಲ ಗಂಟೆಯ ಮೊದಲು ಈ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರು ಪ್ರಧಾನಿ ಮೋದಿಯವರನ್ನು ಸ್ವಾಗತಿಸಲು ತೆರಳುತ್ತಿದ್ದ ವೇಳೆ ಇದ್ದಕ್ಕಿದ್ದಂತೆ ಹಲವೆಡೆಗಳಲ್ಲಿ ಕಲ್ಲು ತೂರಾಟ ಆರಂಭಗೊಂಡಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕಸಾಪ ಜೊತೆ ಸಂಘರ್ಷ, ನಟ್ ಬೋಲ್ಟ್ ಟೈಟ್ ಮಾಡ್ತೇವೆ ಎಂದು ಸಿನಿಮಾದವರೊಂದಿಗೆ ಸಂಘರ್ಷ , ಬಿಗ್ ಬಾಸ್ ಜತೆಗೂ ಜಗಳ, ರಸ್ತೆ ಸರಿಯಿಲ್ಲ ಎಂದಿದ್ದಕ್ಕಾಗಿ ಉದ್ಯಮಿಗಳೊಂದಿಗೆ ಸಂಘರ್ಷ, ಬ್ಯಾಲೆಟ್ ಪೇಪರ್ ಬೇಕು ಎಂದು ಚುನಾವಣಾ ಆಯೋಗದೊಂದಿಗೆ ಸಂಘರ್ಷ ,ಇದು ಕರ್ನಾಟಕ ಸರಕಾರ

-ವಿ.ಸುನೀಲ್ ಕುಮಾರ್

- ಸಂಘರ್ಷವಿದ್ದಲ್ಲಿ ಸುದ್ದಿಯಾಗುತ್ತೆ, ಸುದ್ದಿ ಇದ್ದಲ್ಲಿ ಸ್ವಾರಸ್ಯವಿರುತ್ತೆ , ಮಾಧ್ಯಮಗಳಿಗೆ ಆಹಾರ ಲಭಿಸುತ್ತೆ, ರಾಜಕಾರಣಿಗಳಿಗೆ ಉಚಿತ ಪ್ರಚಾರ ಸಿಗುತ್ತೆ, ಸರ್ವೇ ಜನಾ: ಸುಖಿನೋ ಭವಂತು!

ದಿನ ಭವಿಷ್ಯ

ಮೇಷ
ಆತ್ಮೀಯರ ವರ್ತನೆಯಲ್ಲಿ ಬದಲಾವಣೆ ಕಂಡೀತು. ವಾಗ್ವಾದದಿಂದ ದೂರವಿರಿ. ಪ್ರವಾಸ ಅವಕಾಶ. ಬೆನ್ನು ನೋವು ಇದ್ದವರಿಗೆ ನಿರಾಳತೆ.

ವೃಷಭ
ಉದ್ಯೋಗದ ಹುಡುಕಾಟ ಅಂತ್ಯ. ಶುಭ ಸುದ್ದಿ ಸಿಗಲಿದೆ. ದಂಪತಿ ಮಧ್ಯೆ ಕಲಹವಾದೀತು. ಬಿಪಿ, ಮಧುಮೇಹ ಇದ್ದವರು ಎಚ್ಚರ ವಹಿಸಿ.

ಮಿಥುನ
ವೃತ್ತಿ ಮತ್ತು ಪ್ರೀತಿ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ. ಸರಿಯಾದ ಹೆಜ್ಜೆ ಇಟ್ಟರೆ ಸಫಲತೆ. ಆತ್ಮೀಯ ವ್ಯಕ್ತಿಗಳ ಮನ ನೋಯಿಸಬೇಡಿ.

ಕಟಕ
ಸರಿಯಾದ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗುತ್ತದೆ. ಕುಟುಂಬಸ್ಥರ ಮಧ್ಯೆ ಹೆಚ್ಚು ಸಮಯ ಕಳೆಯಿರಿ. ಅವರ ಮನಸ್ಸಿಗೆ ನೋವು ಉಂಟುಮಾಡಬೇಡಿ.

ಸಿಂಹ
ನಿಮ್ಮ ಧೋರಣೆಗೆ ಮನೆಯವರಿಂದ ವಿರೋಧ. ಬಾಕಿ ಉಳಿದ ಕಾರ್ಯ ಮುಗಿಸಲು ಆದ್ಯತೆ ಕೊಡಿ. ಕ್ರೀಡಾಳುಗಳಿಗೆ ಸಾಧನೆಯ ಯಶ.

ಕನ್ಯಾ
ಅತಿಯಾದ ನಿರೀಕ್ಷೆ ಫಲ ನೀಡದು. ಖಾಸಗಿ ಬದುಕಿನ ಕುರಿತು ಅನವಶ್ಯ ಚಿಂತಿಸುವಿರಿ. ನಿಜವಾಗಿ ಸಮಸ್ಯೆ ಕಾಡದು. ವಿವಾದವೊಂದು ಪರಿಹಾರ.

ತುಲಾ
ವ್ಯಕ್ತಿಯೊಬ್ಬರು ನಿಮ್ಮ ಬದುಕಿನಲ್ಲಿ ಪ್ರವೇಶಿಸುವರು. ಅವರ ಜತೆ ಸಖ್ಯ ವೃದ್ಧಿ. ಸಂಘಟಿತ ಕಾರ್ಯದಿಂದ ವ್ಯವಹಾರ ಬೆಳವಣಿಗೆ ಕಾಣುವುದು.

ವೃಶ್ಚಿಕ
ಎಲ್ಲ ಕಾರ್ಯ ಸುಸೂತ್ರವಾಗಿ ಸಾಗಲಿದೆ. ಅಡ್ಡಿಗಳ ನಿವಾರಣೆ. ವೃತ್ತಿ ಸಂಬಂಧಿತ ಉದ್ವಿಗ್ನತೆ ಶಮನ. ಆಪ್ತರ ಜತೆಗಿನ ವಿರಸ ಅಂತ್ಯ.

ಧನು
ಸಾಮಾಜಿಕ ಕಾರ್ಯದಲ್ಲಿ ಹೆಚ್ಚು ವ್ಯಸ್ತ. ಉಳಿದವರ ಜತೆ ಹೊಂದಾಣಿಕೆ ಇರಲಿ. ಸಣ್ಣ ಗಾಯದ ಸಾಧ್ಯತೆಯಿದೆ, ಎಚ್ಚರ ವಹಿಸಿ.

ಮಕರ
ಬದುಕನ್ನು ಗಂಭೀರವಾಗಿ ಪರಿಗಣಿಸಿ. ಬೇಕಾಬಿಟ್ಟಿ ಧೋರಣೆ ಪ್ರತಿಕೂಲವಾದೀತು. ಇತರರಿಗೆ ಮಾನಸಿಕ ನೋವು ನೀಡಬೇಡಿ.

ಕುಂಭ
ಖಾಸಗಿ ಸಮಸ್ಯೆ ಮನಸ್ಸಿಗೆ ಕಿರಿಕಿರಿ ತರಲಿದೆ. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ವಿರಸ ಉಂಟಾದೀತು. ಅನಿರೀಕ್ಷಿತ ಧನಲಾಭ ಸಂಭವ.

ಮೀನ
ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಷ್ಟ ಆಗದಂತೆ ನೋಡಿಕೊಳ್ಳಿ. ಮನೆಯವರ ಬೆಂಬಲ ವಿಶ್ವಾಸ ಹೆಚ್ಚಿಸಲಿದೆ. ಪ್ರವಾಸ ಸಂಭವ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 0,5,9.1

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಮತ

ಸಂತ ರವಿದಾಸಗೆ ವಿಶಿಷ್ಟ ಸ್ಥಾನ

• ಸಮಾಲ್ಖಾ (ಹರಿಯಾಣ): ನಮ್ಮ ಶ್ರೇಷ್ಠ ಸಂತ ಪರಂಪರೆಯು ಭಾರತಕ್ಕೆ ದೇವರು ನೀಡಿದ ವಿಶೇಷ ಕೊಡುಗೆಯಾಗಿದೆ. ನಮ್ಮ ಸುದೀರ್ಘ ಇತಿಹಾಸದ ಪ್ರವಾಹದಲ್ಲಿ ಮಹಾನ್ ಸಂತ ಪರಂಪರೆಯು ಯಾವ ಸಮಾಜದಲ್ಲಿ ದೇವರ ಉಪಾಸನೆ ಮತ್ತು ಭಕ್ತಿಭಾವದ ಜಾಗರಣವನ್ನು ಮಾಡಿತೋ, ಅಲ್ಲಿಯೇ ಸಾಮಾಜಿಕ ರೀತಿಗಳು ಮತ್ತು ಬೇಧಭಾವವನ್ನು ನಿರ್ಮೂಲನೆ ಮಾಡುವ ಮೂಲಕ ಸಾಮರಸ್ಯದ ಸಮಾಜವನ್ನು ಬಲಪಡಿಸುವ ಪ್ರಯತ್ನಗಳನ್ನು ಮಾಡಿತು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.




ಹರಿಯಾಣದ ಸಮಾಲ್ಖಾದಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರತಿನಿಧಿ ಸಭೆ - 2026ರಲ್ಲಿ ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಆರ್ ಎಸ್‌ಎಸ್ ಅವರಿಗೆ ಶ್ರದ್ಧೆಯ ಸುಮನಗಳನ್ನು ಅರ್ಪಿಸುತ್ತದೆ. ಮಹಾನ್ ಸಂತ ಪರಂಪರೆಯಲ್ಲಿ ಸಂತ ರವಿದಾಸ ಅವರಿಗೆ ವಿಶಿಷ್ಟ ಸ್ಥಾನವಿದೆ. ಅವರ ಕ್ರಿಯಾಶೀಲ ಜೀವನ ಮತ್ತು ಕಾರ್ಯ ನಮಗೆಲ್ಲರಿಗೂ ಪ್ರೇರಣೆಯಾಗಿದೆ. ಗೃಹಸ್ಥರಾಗಿದ್ದರೂ, ಸಾಂಸಾರಿಕ ವಿಷಯಗಳಲ್ಲಿ ಅಲಿಪ್ತರಾಗಿದ್ದು ಸಾಧು-ಸಂತರ ಮೇಲಿನ ಶ್ರದ್ಧೆ ಮತ್ತು ದೀನ-ಹೀನರ ಸೇವೆ ಅವರ ಸಹಜ ಸ್ವಭಾವವಾಗಿತ್ತು, ಆಧ್ಯಾತ್ಮಿಕ ದೃಷ್ಟಿಯಿಂದ ಪರಿಪೂರ್ಣವಾಗಿತ್ತು. ತಮ್ಮ ಜೀವನದ ಮೂಲಕ ಅವರು ಶ್ರಮದ ಘನತೆ ಮತ್ತು ಸಮಾಜದಲ್ಲಿ ಶುದ್ಧ, ಸಾತ್ವಿಕ ಮತ್ತು ಪಾರದರ್ಶಕ ಆಚರಣೆಯ ಮಹತ್ವವನ್ನು ಪುನಸ್ಥಾಪಿಸಿದರು ಎಂದರು.

ಭಕ್ತಿಪ್ರಜ್ಞೆಯ ಮಹಾನ್ ಸಂತ: ರವಿದಾಸ್ ಅವರು ಸಮಾಜದಲ್ಲಿ ಒಂದು ಹೊಸ ಚೇತನವನ್ನು ಪ್ರವಹಿಸಿದ ಭಕ್ತಿಪ್ರಜ್ಞೆಯ ಮಹಾನ್ ಸಂತರಾಗಿದ್ದರು. ಕಾಲಬಾಹ್ಯ ಪರಂಪರೆಯ ತ್ಯಾಗ ಹಾಗೂ ಕಾಲ ಸುಸಂಗತ ಸಾಮಾಜಿಕ ಪರಿವರ್ತನೆಯ ಅಂಗೀಕಾರ ಮಾಡುವಲ್ಲಿ ಸಮಾಜದ ಮನಸನ್ನು ರೂಪಿಸುವಲ್ಲಿ ಅವರು ಐತಿಹಾಸಿಕ ಪಾತ್ರವನ್ನು ವಹಿಸಿದ್ದಾರೆ. ಅವರ ಚಿಂತನೆಗಳ ಮಹತ್ವವನ್ನು ಅರ್ಥೈಸಿಗೊಂಡು ಅವರ 41 ವಾಣಿಗಳನ್ನು ಗುರು ಗ್ರಂಥ ಸಾಹಿಬ್‌ನಲ್ಲಿ ಶಾಬಾದ್ ರೂಪದಲ್ಲಿ ಸೇರಿಸಲಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ರವಿದಾಸರು, ಅವರ ಶಿವಭಕ್ತಿ, ಸೇವಾ ಮನೋಭಾವ ಹಾಗೂ ಸಮಾಜದ ಮೇಲಿನ ನಿಶ್ಚಲಪ್ರೇಮದ ಕಾರಣ ಕಾಶಿಯ ವಿದ್ವತ್ ಜನರ ಸಹಿತ ಸಮಾಜದ ಎಲ್ಲಾ ವರ್ಗಗಳ ಜನರು ಅವರ ಮಹಾನತೆಯನ್ನು ಸ್ವೀಕರಿಸಿದರು. ಕಾಶಿ ನರೇಶ, ಹಾಗೂ ಮೀರಾಬಾಯಿಯಂತಹ ರಾಜಮನೆತನದ ಸದಸ್ಯರು ಕೂಡ ಅವರನ್ನು ತಮ್ಮ ಗುರು ಎಂದು ಪರಿಗಣಿಸಿದರು. ಗುರು ಮತ್ತು ಶಿಷ್ಯರ ರೂಪದಲ್ಲಿ ರವಿದಾಸರು ಮತ್ತು ಮೀರಾಬಾಯಿಯವರ ಬಾಂಧವ್ಯವು ನಿರ್ಗುಣ ಮತ್ತು ಅನುಕರಣೀಯ ಕಲಿಕೆಯೂ ಆಗಿದೆ ಎಂದರು.

ಮತಾಂತರಕ್ಕೆ ಬಂದವರು ಅನುಯಾಯಿಗಳಾದರು



ಮುಸ್ಲಿಂ ಆಕ್ರಮಣಕಾರರ ಭಯೋತ್ಪಾದನೆಯ ಆ ಕಠಿಣ ಸಮಯದಲ್ಲಿ, ಭಕ್ತಿಯ ನಿರ್ಮಲ ಧಾರೆಯ ಪ್ರವಹಿಸುತ್ತಾ ರವಿದಾಸರು ಧರ್ಮದ ಶ್ರೇಷ್ಠತೆಯನ್ನು ಉದ್ಘೋಷಿಸಿದರು ಮತ್ತು ಜನರಿಂದ ಧರ್ಮಪಾಲನೆ ಮಾಡುವುದಕ್ಕೆ ಆಗ್ರಹಿಸಿದರು. ಇವರನ್ನು ಇಸ್ಲಾಂಗೆ ಮತಾಂತರಿಸಿ ಮುಸ್ಲಿಮರಾಗಿಸುವುದಕ್ಕೆ ಹಲವಾರು ಪ್ರಯತ್ನಗಳು ನಡೆದವು. ಆದರೆ ಅವರ ಭಕ್ತಿ ಮತ್ತು ಆಧ್ಯಾತ್ಮಿಕ ಸಾಧನೆಯಿಂದ ಪ್ರಭಾವಿತರಾಗಿ ಅವರನ್ನು ಮತಾಂತರಗೊಳಿಸಬೇಕಾದವರು ಅವರ ಅನುಯಾಯಿಗಳಾದರು. ವರ್ತಮಾನದ ಸಮಯದಲ್ಲಿ ವಿವಿಧ ವಿಭಜನಕಾರಿ ಶಕ್ತಿಗಳು ಜನಮಾನಸವನ್ನು ವರ್ಗ ಮತ್ತು ಜಾತಿಯ ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸುತ್ತಿರುವಾಗ, ರವಿದಾಸ್ ಅವರ ಜೀವನ ಸಂದೇಶದ ಸಾರವನ್ನು ಅರ್ಥಮಾಡಿಕೊಳ್ಳುವ ಮೂಲಕ, ನಾವೆಲ್ಲರೂ ದೇಶ ಮತ್ತು ಸಮಾಜದ ಏಕತೆಗಾಗಿ ಕಾರ್ಯಮಾಡುವ ಸಂಕಲ್ಪವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದರು.

ಮಾದಕವಸ್ತುಗಳ ನಿರ್ಮೂಲನೆಗೆ ಕ್ರಮ

• ಬೆಂಗಳೂರು: ರಾಜ್ಯದ ಕಾರಾಗೃಹಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕಾರಾಗೃಹ ಇಲಾಖೆ ಈಗ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.



ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರ ವಿಶೇಷ ಸೂಚನೆಯ ಮೇರೆಗೆ, ರಾಜ್ಯಾದ್ಯಂತ ಇರುವ ಎಲ್ಲಾ ಜೈಲುಗಳಲ್ಲಿ ಕೈದಿಗಳನ್ನು ಮಾದಕ ವಸ್ತು ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆ ಚುರುಕಿನಿಂದ ಸಾಗಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಸಿಬ್ಬಂದಿಯೇ ಒಳ ಉಡುಪಿನಲ್ಲಿ ಗಾಂಜಾ ಸರಬರಾಜು ಮಾಡಲು ಯತ್ನಿಸಿ ಸಿಕ್ಕಿಬಿದ್ದ ಘಟನೆ ಇಲಾಖೆಯನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಕಾರಾಗೃಹಗಳನ್ನು ಸಂಪೂರ್ಣವಾಗಿ ಮಾದಕ ದ್ರವ್ಯ ಮುಕ್ತಗೊಳಿಸುವ ಉದ್ದೇಶದಿಂದ ನಿಮ್ಹಾನ್ಸ್ ಆಸ್ಪತ್ರೆಯ ತಾಂತ್ರಿಕ ಸಹಯೋಗದೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದ್ದು, ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ ಜೈಲುಗಳಲ್ಲಿ ಸುಮಾರು ಶೇ. 10ರಷ್ಟು ಕೈದಿಗಳನ್ನು ಆಯ್ದುಕೊಂಡು ಪರೀಕ್ಷೆ ನಡೆಸಲಾಗುತ್ತಿದೆ.

ವಿಶೇಷ ಕಿಟ್ ಮೂಲಕ ಪರೀಕ್ಷೆ

ಕೈದಿಗಳು ಗಾಂಜಾ, ಹೆರಾಯಿನ್, ಕೊಕೈನ್ ಸೇರಿದಂತೆ ವಿವಿಧ ಮಾದಕ ವಸ್ತುಗಳನ್ನು ಸೇವಿಸಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಇಲಾಖೆಯು ವಿಶೇಷ ವೈದ್ಯಕೀಯ ಕಿಟ್‌ಗಳನ್ನು ಒದಗಿಸಿದೆ. ಜೈಲು ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಈ ತಪಾಸಣೆ ನಡೆಯುತ್ತಿದ್ದು, ಅನುಮಾನಾಸ್ಪದ ನಡವಳಿಕೆ ಹೊಂದಿರುವ ಅಥವಾ ಮೊದಲೇ ಚಟಕ್ಕೆ ಬಿದ್ದಿರುವ ಕೈದಿಗಳ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ.

ಶಿಕ್ಷೆಯಲ್ಲ, ಸುಧಾರಣೆಯೇ ಗುರಿ

ಈ ಅಭಿಯಾನದ ವಿಶೇಷವೆಂದರೆ, ಪರೀಕ್ಷೆಯಲ್ಲಿ ಮಾದಕ ವಸ್ತು ಸೇವನೆ ದೃಢಪಟ್ಟ ಕೈದಿಗಳ ಮೇಲೆ ಸದ್ಯಕ್ಕೆ ಯಾವುದೇ ಹೊಸ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದಿಲ್ಲ. ಬದಲಿಗೆ ಅವರನ್ನು ಸುಧಾರಿಸುವ ಹಾದಿಯನ್ನು ಇಲಾಖೆ ಆರಿಸಿಕೊಂಡಿದೆ. ಪಾಸಿಟಿವ್ ಬಂದ ಕೈದಿಗಳಿಗೆ ತಕ್ಷಣವೇ ವೃತ್ತಿಪರ ಕೌನ್ಸೆಲಿಂಗ್ ನೀಡಲಾಗುತ್ತದೆ. ತೀವ್ರವಾಗಿ ಚಟಕ್ಕೆ ಅಡಿಕ್ಟ್ ಆಗಿರುವವರನ್ನು ಗುರುತಿಸಿ, ಅವರಿಗೆ ಆಸ್ಪತ್ರೆಗಳಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಮೂಲಕ ಮುಖ್ಯವಾಹಿನಿಗೆ ತರಲು ಇಲಾಖೆ ನಿರ್ಧರಿಸಿದೆ.

ಯುಗಾದಿ, ರಂಜಾನ್ ಹಿನ್ನೆಲೆ: ಎರಡು ಸಾವಿರ ಹೆಚ್ಚುವರಿ ಬಸ್

ಪುಟ ೧➡ ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ. ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ವಿಶೇಷ ಕಾರ್ಯಾಚರಣೆ. ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಮತ್ತಿತರ ಸ್ಥಳಗಳಿಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ.

ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ. ಇ-ಟಿಕೆಟ್ ಬುಕಿಂಗ್ www.ksrtc.karnataka.gov.in ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಮುಟ್ಟಿನ ರಜೆ: ಲಾಡ್ ಪ್ರತಿಕ್ರಿಯೆ

• ಬೆಂಗಳೂರು: ಮಹಿಳಾ ಉದ್ಯೋಗಿಗಳು ಮತ್ತು ವಿದ್ಯಾರ್ಥಿನಿಯರ ಮುಟ್ಟಿನ ರಜೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರತಿಕ್ರಿಯೆ ನೀಡಿದ್ದು, ರಾಜ್ಯ ಸರ್ಕಾರವು ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ರಜೆಯನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಅನ್ವಯಿಸಿ ರೂಪಿಸಿರುವ ನೀತಿಯನ್ನು ಪ್ರಶಂಸಿಸಿರುವುದು ಸ್ವಾಗತಾರ್ಹ ಎಂದಿದ್ದಾರೆ. ರಾಜ್ಯದ ಮುಟ್ಟಿನ ರಜೆ ನೀತಿಯ ಕುರಿತು, ನಾವು ಸಂಬಂಧಿಸಿದ ಎಲ್ಲ ತಜ್ಞರು, ಉದ್ಯೋಗದಾತರು, ಕೈಗಾರಿಕೋದ್ಯಮಿಗಳು, ಉದ್ಯಮಿಗಳು, ವೈದ್ಯರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಜೊತೆಗೆ ವ್ಯಾಪಕ ಚರ್ಚೆ ಮಾಡಿ, ಸಾಧಕ-ಬಾಧಕಗಳನ್ನು ಪರಿಶೀಲಿಸಿ ಸೂಕ್ತ ನೀತಿಯೊಂದನ್ನು ಜಾರಿಗೆ ತಂದಿದ್ದೇವೆ. ಘನವೆತ್ತ ಕೋರ್ಟ್ ಅಭಿಪ್ರಾಯಪಟ್ಟಿರುವಂತೆ, ನಾಲ್ಕೈದು ದಿನಗಳ ರಜೆ ಮತ್ತು ಅದನ್ನು ಕಾನೂನನ್ನಾಗಿ ರೂಪಿಸಿ ಜಾರಿಗೆ ತರುವುದು ಪ್ರಾಯೋಗಿಕವಾಗಿ ಸಾಧುವಲ್ಲ ಎಂದರು.

ಮಂಡ್ಯದಲ್ಲಿ ವಾಹನ ಪರೀಕ್ಷೆ

ಪುಟ ೧➡ ಆ ಕೊರತೆ ನೀಗಿಸಲು ಎಆರ್‌ಎಐನಿಂದ ಪರೀಕ್ಷಾ ಕೇಂದ್ರ ಆರಂಭಿಸಲು ರಾಜ್ಯ ಸರ್ಕಾರಕ್ಕೆ ಜಾಗ ನೀಡುವಂತೆ ಪತ್ರ ಬರೆದಿದ್ದಾಗಿ ಹೇಳಿದರು.

ಕೈಗಾರಿಕೆ ಸ್ಥಾಪನೆಗೆ 100 ಎಕರೆ ಜಾಗ ನೀಡುವುದಾಗಿ ರಾಜ್ಯಸರ್ಕಾರ ಬಜೆಟ್ ಪುಸ್ತಕದಲ್ಲಿ ಘೋಷಣೆ ಮಾಡಿದ್ದಾರೆ. ಜಾಗ ಯಾವಾಗ ನೀಡುತ್ತಾರೆ ಎಂಬುದನ್ನು ನೋಡಬೇಕಿದೆ. ಅವರು ಜಾಗ ನೀಡಿದ ಬಳಿಕ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಾನು ಕೈಗಾರಿಕೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಜಿಲ್ಲೆಯ ಜನರ ನಿರೀಕ್ಷೆಯನ್ನು ಯಾವುದೇ ಕಾರಣಕ್ಕೂ ಹುಸಿಗೊಳಿಸುವುದಿಲ್ಲ. ಜಿಲ್ಲೆಯ ವಿದ್ಯಾವಂತ ಯುವಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವುದಲ್ಲದೆ, ಅಕ್ಕಪಕ್ಕದ ಜಿಲ್ಲೆಗಳ ಯುವಕರಿಗೂ ಉದ್ಯೋಗ ಸಿಗುವಂತೆ ಮಾಡುವುದಾಗಿ ಭರವಸೆ ನೀಡಿದರು.

ಜತೆಗೆ 200-300 ಕೋಟಿ ರೂ. ವೆಚ್ಚದಲ್ಲಿ ಸ್ಟಾರ್ಟಪ್ ಕಂಪನಿಗಳು ಆರಂಭಿಸುತ್ತೇನೆ. ಅಲ್ಲಿಯೂ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ದೇವೇಗೌಡರ ಬಗ್ಗೆ ಅಭಿಮಾನವಿಟ್ಟು ನನ್ನನ್ನು ಬಹುಮತದ ಅಂತರದಿಂದ ಗೆಲ್ಲಿಸಿದ್ದೀರಿ. ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು. ಸಮಾರಂಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕ ಎಚ್.ಟಿ.ಮಂಜು, ಮಾಜಿ ಶಾಸಕರಾದ ಡಾ. ಕೆ.ಅನ್ನದಾನಿ, ಜೆ.ಬಿ.ಶಿವಕುಮಾರ್, ಕೆ.ಸುರೇಶ್‌ಗೌಡ, ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮಂಡ್ಯ ವಿಧಾನಸಭಾ ಕ್ಷೇತ್ರದ ಮುಖಂಡ ಬಿ.ಎಸ್.ರಾಮಚಂದ್ರು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಭಾಗವಹಿಸಿದ್ದರು.

ಸಿಎಸ್‌ಆರ್ ಫಂಡ್ ನೀಡಿದ ಟಿವಿಎಸ್ ಕಂಪನಿಯ ಸಿಎಫ್‌ಒ ಸೇತುರಾಂ, ಉಪಾಧ್ಯಕ್ಷ ಪ್ರಸಾದ್ ಕೃಷ್ಣನ್, ಇನ್‌ಫೋಸಿಸ್‌ನ ಹಿರಿಯ ಉಪಾಧ್ಯಕ್ಷ ಸತೀಶ್ ಬಿ.ನಂಜಪ್ಪ, ಎಚ್‌ಎಂಟಿ ಅಧ್ಯಕ್ಷ ರಾಜೇಶ್ ಕೊಹ್ಲಿ, ಹಿಂದುಜಾ ಹಾಸ್ಪಿಟಲ್‌ನ ಡಾ.ಸಂಜಯ್‌ಕುಮಾರ್ ಬಜಾಜ್, ಪ್ರದೀಪ್, ಸೈಲ್ ಕಂಪನಿಯ ರಾಜೀವ್ ಪಾಂಡೆ, ಸಿವೈಕೆ ಪಾಂಡೆ ಅವರನ್ನು ಅಭಿನಂದಿಸಲಾಯಿತು.

ಬಿಜೆಪಿಯಿಂದ ಎಸ್‌ಐಆರ್ ಕಚೇರಿ



ಪುಟ ೧➡ ಇದು ದೇಶದ ಭದ್ರತೆಗೆ ಅಪಾಯಕಾರಿ. ಈ ಕುರಿತು ಹೆಚ್ಚಿನ ಕ್ರಮ ಕೈಗೊಳ್ಳುವಂತೆ ಕಾರ್ಯಾಗಾರದಲ್ಲಿ ಚರ್ಚೆ ಆಗಿದೆ ಎಂದರು.

ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಎಸ್ ಐಆರ್ ಕರ್ನಾಟಕ-ತೆಲಂಗಾಣದ ಪ್ರಭಾರಿ ಅಲ್ಕಾ ಗುರ್ಜರ್, ವಿಧಾನ ಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಮಾಜಿ ರಾಜ್ಯ ಕಾರ್ಯದರ್ಶಿ ಮತ್ತು ಎಸ್‌ಐಆರ್ ರಾಜ್ಯ ತಂಡದ ಸಂಚಾಲಕ ಜಗದೀಶ್ ಹಿರೇಮನಿ ಸೇರಿ ರಾಜ್ಯ ತಂಡದ ಸದಸ್ಯರು ಕಾರ್ಯಕ್ರಮದಲ್ಲಿದ್ದರು.

ಔಟ್ ಗೋಯಿಂಗ್ ಸಿಎಂ: ಛಲವಾದಿ



ಪುಟ ೧➡ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಸಿದ್ದರಾಮಯ್ಯ ರಾಜಕಾರಣವನ್ನೇ ಮೈಗೂಡಿಸಿಕೊಂಡು ಬಂದವರು. ತಮ್ಮ ಉಸಿರು ಇರುವವರೆಗೆ ರಾಜಕೀಯದಲ್ಲಿ ಇರುವೆ ಎಂದು ಹೇಳುತ್ತಾರೆ. ಅವರಿಗೆ ರಾಜಕೀಯವೇ ಜೀವನ ಆಗಿತ್ತು. ಆದರೆ ರಾಜಕೀಯ ಜೀವ ಕೊಟ್ಟ ಈ ರಾಜ್ಯದ ಜನರಿಗೆ ಅವರು ಕೊಟ್ಟಿದ್ದು ಏನು ಎಂದು ಪ್ರಶ್ನಿಸಿದರು. ಈಗ ಮಗನನ್ನು ರಕ್ಷಿಸಿ ಎನ್ನುತ್ತಾರೆ. ವಂಶಪಾರಂಪರ್ಯಕ್ಕೆ ಅವರು ಜೋತು ಬಿದ್ದಿದ್ದಾರೆ. ಅವರು ತಮ್ಮ ಮಗನ ಪರವಾಗಿ ಮಾತನಾಡುವುದನ್ನು ಬಿಟ್ಟು ರಾಜ್ಯದ ಜನರ ಪರ ಮಾತನಾಡಬೇಕಿತ್ತು. ಇದು ಅವರ ರಾಜಕೀಯ ಜೀವನದ ಅಂತ್ಯದ ದಿನಗಳ ಮಾತು ಎಂದು ಹೇಳಿದರು.

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

ಪುಟ ೧➡ ಯುದ್ಧ ಆರಂಭವಾದಾಗಿನಿಂದ ಇರಾನ್ ಸರ್ಕಾರ ಇಂಟರ್ನೆಟ್ ಸ್ಥಗಿತಗೊಳಿಸಿರುವುದರಿಂದ,ಇಸ್ರೇಲ್‌ನೀಡಿದ್ದಎಚ್ಚರಿಕೆಬಹುತೇಕಜನರಿಗೆತಲುಪಿರಲಿಲ್ಲ ಎಂದು ಹೇಳಲಾಗಿದೆ. ಇನ್ನೊಂದೆಡೆ ಯುದ್ಧದಿಂದಾಗಿ ಭಾರತ ಸಮಸ್ಯೆ ಎದುರಿಸುತ್ತಿದ್ದರೂ ಹಂತ ಹಂತವಾಗಿ ಸಮಸ್ಯೆಯಿಂದ ಹೊರಬಂದು ನಾಗರಿಕರ ರಕ್ಷಣೆ ಮತ್ತು ದೈನಂದಿನ ಜೀವನಕ್ಕೆ ಸಮಸ್ಯೆಯಾಗದಂತೆ ಗಮನಹರಿಸುತ್ತಿದೆ.

ಅಮೆರಿಕ-ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

ಪುಟ ೧➡ ಚೀನಾದ 'ಡಿಎಫ್-17' ನಂತಹ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ತಡೆಯಲು ಈ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಜಪಾನ್ ಪ್ರಧಾನಿ ತಕೈಚಿ, ಮುಂಬರುವ ವಾಷಿಂಗ್ಟನ್ ಭೇಟಿಯ ಸಮಯದಲ್ಲಿ ಈ ಬಹುಕೋಟಿ ಡಾಲರ್ ಯೋಜನೆಯಲ್ಲಿ ಸೇರುವ ಬಗ್ಗೆ ಚರ್ಚಿಸುವ ನಿರೀಕ್ಷೆಯಿದೆ.

ರಾಜತಾಂತ್ರಿಕ ಕಾರ್ಯತಂತ್ರ: ಕಿಮ್ ಜೊಂಗ್-ಉನ್ ಅವರ ಈ ಪ್ರಚೋದನಾಕಾರಿ ಕ್ರಮಗಳ ಹೊರತಾಗಿಯೂ, ಚೀನಾದ ಪ್ರಭಾವ ಕುಗ್ಗಿಸಲು ಅಧ್ಯಕ್ಷ ಟ್ರಂಪ್, ಕಿಮ್ ಜಾಂಗ್-ಉನ್ ಅವರೊಂದಿಗೆ ವೈಯಕ್ತಿಕ ಬಾಂಧವ್ಯ ವೃದ್ಧಿಸಲು ಉತ್ಸುಕರಾಗಿದ್ದಾರೆ. ಚೀನಾದ ಭೂಪ್ರದೇಶದಲ್ಲಿ ಸಂಭವನೀಯ ಶೃಂಗಸಭೆ ನಡೆಸುವ ಬಗ್ಗೆ ದಕ್ಷಿಣ ಕೊರಿಯಾದ ಪ್ರಧಾನಿ ಕಿಮ್ ಮಿನ್-ಸಿಯೋಕ್ ಖಚಿತಪಡಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಯುಎಸ್ ನಡೆ ಕುತೂಹಲ ಮೂಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

• ಹೊಸದಿಲ್ಲಿ: ಈ ಹಿಂದೆ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳದಂತೆ ಭಾರತಕ್ಕೆ ಎಚ್ಚರಿಕೆ ನೀಡಿ ಸುಂಕ ಹೊರೆ ನೀಡಿದ್ದ ಅಮೆರಿಕ, ಇರಾನ್ ಜತೆ ಯುದ್ಧ ಮಾಡಿದ ಎರಡು ವಾರಗಳಲ್ಲೇ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವಂತೆ ಭಾರತ ಸೇರಿದಂತೆ ಜಗತ್ತಿಗೆ ಬೇಡಿಕೊಳ್ಳುತ್ತಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಲೇವಡಿ ಮಾಡಿದ್ದಾರೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಬಗ್ಗೆ ಯುರೋಪಿನ ನಿಲುವನ್ನು ಟೀಕಿಸಿದ ಅರಘ್ಚಿ, ಇರಾನ್ ಮೇಲಿನ ಯುದ್ಧವು 'ಕಾನೂನುಬಾಹಿರ'ವಾಗಿದೆ. ಇರಾನ್ ಮೇಲಿನ ಕಾನೂನುಬಾಹಿರ ಯುದ್ಧ ಬೆಂಬಲಿಸುವುದರಿಂದ ರಷ್ಯಾದ ವಿರುದ್ಧ ಅಮೆರಿಕದ ಬೆಂಬಲ ಸಿಗುತ್ತದೆ ಎಂದು ಯುರೋಪ್ ಭಾವಿಸಿದೆ ಎಂದು ಹೇಳಿದರು.

ತವರಿನತ್ತ ಶಿವಾಲಿಕ್, ನಂದಾದೇವಿ

ಭಾರತದ ಮೊದಲ ಎಲ್‌ಪಿಜಿ ಸಾಗಣೆ ಹಡಗು ಶಿವಾಲಿಕ್ ಹಾರ್ಮುಜ್ ಜಲಸಂಧಿಯಿಂದ ಈಗಾಗಲೇ ತೆರಳಿದ್ದು, ಎರಡನೇ ಹಡಗು ನಂದಾದೇವಿ ಸಹ ಹಾರ್ಮುಜ್ ಜಲಸಂಧಿ ಯಿಂದ ಶನಿವಾರ ಪ್ರಯಾಣ ಆರಂಭಿಸಿದೆ. ಸುಮಾರು 46,000 ಟನ್‌ಗಳಿಗೂ ಹೆಚ್ಚು ಎಲ್‌ಪಿಜಿ ಇನ್ನೆರಡು ದಿನಗಳಲ್ಲಿ ತವರಿಗೆ ತಲುಪಲಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಭಾರತೀಯ ನೌಕಾಪಡೆಯ ಮಾರ್ಗದರ್ಶನದಲ್ಲಿ ಎರಡೂ ಹಡಗುಗಳು ಹಾರ್ಮುಜ್‌ನಿಂದ ಭಾರತದತ್ತ ಪ್ರಯಾಣ ಬೆಳೆಸಿವೆ. ಮುಂದಿನ ಎರಡು ದಿನಗಳೊಳಗೆ ಮುಂಬೈ ಅಥವಾ ಕಾಂಡ್ಲಾ ಬಂದರಿಗೆ ಹಡುಗಳು ಬರುವುದನ್ನು ನಿರೀಕ್ಷಿಸಲಾಗಿದೆ. ನಂದಾದೇವಿ ಹಡಗಿನಲ್ಲಿ 46,000 ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹಾಗೂ ಶಿವಾಲಿಕ್‌ನಲ್ಲೂ 40,000ದಿಂದ 55,000 ಟನ್‌ಗಳಷ್ಟು ಎಲ್‌ಪಿಜಿ ಇದೆಯೆಂದು ಮೂಲಗಳು ತಿಳಿಸಿವೆ. ಇವೆರಡೂ ಹಡಗುಗಳು ಭಾರತದ ಸಂಪೂರ್ಣ ಇಂಧನ ಪೂರೈಕೆ ಸರಪಣಿಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ.

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

ಪುಟ ೧➡ ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ: ಬಯೋಗ್ಯಾಸ್ ಘಟಕಗಳಲ್ಲಿ ಪ್ರತಿ ಟನ್ ಹಸಿ ತ್ಯಾಜ್ಯದಿಂದ ಸುಮಾರು 30ರಿಂದ 50 ಕೆಜಿ ಬಯೋಗ್ಯಾಸ್ ಉತ್ಪಾದನೆ ಸಾಧ್ಯವಾಗುತ್ತದೆ. ಪ್ರತಿ ಘಟಕದಲ್ಲಿ ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ ನಡೆಯುತ್ತಿದೆ. ಇಲ್ಲಿ ಉತ್ಪಾದನೆಯಾಗುವ ಬಯೋಗ್ಯಾಸ್‌ನ್ನು ಘಟಕಗಳ ಒಳಾಂಗಣ ಬಳಕೆಗೆ ಬಳಸಲಾಗುತ್ತಿದ್ದು, ಹೆಚ್ಚುವರಿ ಬಯೋಗ್ಯಾಸ್ ಬಳಸಿ ಜನರೇಟರ್ ಮೂಲಕ ವಿದ್ಯುತ್ ಉತ್ಪಾದಿಸಿ ಸಮೀಪದ ಉದ್ಯಾನವನಗಳಲ್ಲಿ ದೀಪಗಳನ್ನು ಬೆಳಗಿಸಲಾಗುತ್ತಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ತಿಳಿಸಿದ್ದಾರೆ. ಕೋರಮಂಗಲದಲ್ಲಿರುವ 8.5 ಟನ್ ಸಾಮರ್ಥ್ಯದ ಬಯೋಗ್ಯಾಸ್ ಘಟಕದಿಂದ ಸಮೀಪದ ಹೋಟೆಲ್‌ಗೆ ಪ್ರತಿದಿನ ಸುಮಾರು 120 ಕೆಜಿ ಬಯೋಗ್ಯಾಸ್ ಸರಬರಾಜು ಮಾಡಲಾಗುತ್ತಿದ್ದು, ಪ್ರತಿ ಕೆಜಿಗೆ ರೂ.70ರಂತೆ ದಿನಕ್ಕೆ ಸುಮಾರು ರೂ.8,400 ಆದಾಯ ಲಭ್ಯವಾಗುತ್ತಿದೆ. ಇದರ ಮೂಲಕ ಹಸಿ ತ್ಯಾಜ್ಯದಿಂದ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ಅಡುಗೆ ಇಂಧನವಾಗಿ ಬಳಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ಬಯೋಗ್ಯಾಸ್‌ನ್ನು ಸಿಲಿಂಡರ್‌ಗಳಿಗೆ ತುಂಬಿಸಿ ಸರಬರಾಜು ಮಾಡುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುವುದು. ಈ ಬಗ್ಗೆ ಬೆಲೆ ಸೇರಿದಂತೆ ಮತ್ತಿತರ ವಿಷಯದ ಬಗ್ಗೆ ಮಾತುಕತೆ ನಡೆಯುತ್ತಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಬಯೋಗ್ಯಾಸ್ ಘಟಕ ಸ್ಥಾಪನೆಗೆ ವೇಗ

ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ದಿನಕ್ಕೆ ಸುಮಾರು 300 ಟನ್ ಹಸಿ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಹೊಸ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೂ ಚಾಲನೆ ನೀಡಲಾಗಿದೆ. ಇದಲ್ಲದೆ ಕನ್ನಹಳ್ಳಿ ಪ್ರದೇಶದಲ್ಲಿ ಸುಮಾರು 1,000 ಟನ್ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸುವ ಘಟಕ ನಿರ್ಮಾಣಕ್ಕೆ ಸಾತರಾಂ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿದೆ. ಅಲ್ಲದೆ ಹೊಸದಾಗಿ ನಾಲ್ಕು ವಿಕೇಂದ್ರೀಕೃತ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಲು ಕ್ರಮ ವಹಿಸಲಾಗಿದ್ದು, ಅವುಗಳಲ್ಲಿ ಎರಡು ಘಟಕಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾರ್ಯಾರಂಭಗೊಳ್ಳಲಿವೆ. ಉಳಿದ ಎರಡು ಘಟಕಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಜಿಬಿಎ ತಿಳಿಸಿದೆ.

"ಕಡಿಮೆ ಅವಧಿಯಲ್ಲಿ ಪ್ರಸ್ತುತ ಇರುವ ಘಟಗಳನ್ನು ಉನ್ನತೀಕರಣಗೊಳಿಸಿ ಅಲ್ಲಿ ಬಯೋ ಗ್ಯಾಸ್ ಉತ್ಪತ್ತಿ ಮಾಡಿ, ಸ್ಥಳೀಯ ಹೋಟೆಲ್‌ಗಳಿಗೆ ವಿತರಣೆ ಮಾಡಲು ಕ್ರಮ ವಹಿಸಲಾಗುವುದು.

■ ಮಹೇಶ್ವರ್ ರಾವ್, ಜಿಬಿಎ ಮುಖ್ಯ ಆಯುಕ್ತ

ತರಬೇತಿಯಿಂದ ಕ್ರೀಡೆಯಲ್ಲೂ ದೇಶ ಮುಂಚೂಣಿ

ಮಂಡ್ಯ: ಭಾರತದ ಕೆಳಮಟ್ಟದ ಕ್ರೀಡಾ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಖೇಲೋ ಇಂಡಿಯಾ ಯೋಜನೆಯನ್ನು ಜಾರಿಗೆ ತಂದಿದೆ. ಇದರಿಂದ ಭಾರತವನ್ನು ಶ್ರೇಷ್ಠ ಕ್ರೀಡಾರಾಷ್ಟ್ರವಾಗಿ ರೂಪಿಸಲು ಸಹಕಾರಿಯಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸೂಖ್ ಮಾಂಡವೀಯ ವಿಶ್ವಾಸದಿಂದ ನುಡಿದರು

ತಾಲೂಕಿನ ವಿ.ಸಿ.ಫಾರಂನಲ್ಲಿ 14 ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಕ್ರೀಡಾಪಟುಗಳುತರಬೇತಿಹಾಗೂಮೂಲಸೌಕರ್ಯಗಳಿಲ್ಲದೆಪರದಾಡುತ್ತಿದ್ದರು. ಕಳೆದ 11 ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ಅತ್ಯಾಧುನಿಕ ಕ್ರೀಡಾ ಸೌಲಭ್ಯ, ಅಂತಾರಾಷ್ಟ್ರೀಯ ಮಟ್ಟದ ತರಬೇತಿಯನ್ನು ನೀಡುವ ಮೂಲಕ ಹೆಚ್ಚು ಹೆಚ್ಚು ಪದಕಗಳನ್ನು ಗೆಲ್ಲುವುದಕ್ಕೆ ಸಹಕಾರಿ ಯಾಗಿದೆ ಎಂದು ಹೇಳಿದರು.

2016ರಲ್ಲಿ ಖೇಲೋ ಇಂಡಿಯಾ ಆರಂಭವಾದ ಬಳಿಕ ಇಡೀ ರಾಷ್ಟ್ರದಲ್ಲಿಕ್ರೀಡಾ ಚಟುವಟಿಕೆಗಳು ಗರಿಗೆದರಿವೆ. ಎಲ್ಲಾಕ್ರೀಡೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ನಗರ ಪ್ರದೇಶಕ್ಕೆ ಸೀಮಿತವಾಗಿದ್ದ ಕ್ರೀಡಾ ಚಟುವಟಿಕೆಗಳು ಪ್ರತಿ ಹಳ್ಳಿ ಮತ್ತು ಶಾಲೆಗಳಲ್ಲೂ ಆರಂಭಗೊಂಡಿವೆ. ಗ್ರಾಮೀಣ ಭಾಗದಿಂದಲೂ ಉತ್ತಮ ಕ್ರೀಡಾಪ್ರತಿಭೆಗಳು ಬೆಳಕಿಗೆ ಬರುವಂತಾಗಿದೆ. ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್, ಒಲಂಪಿಕ್ಸ್‌ಕ್ರೀಡಾಕೂಟದಲ್ಲೂಕ್ರೀಡಾಪಟುಗಳು ಚಿನ್ನ ಸೇರಿದಂತೆ ಹಲವು ಪದಕಗಳನ್ನುಗೆಲ್ಲುವಂತಾಗಿದೆ ಎಂದು



ತಿಳಿಸಿದರು.

ಮಂಡ್ಯ ನೆಲದಿಂದ ರಾಜ್ಯವಷ್ಟೇ ಅಲ್ಲ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕ್ರೀಡಾಪಟುಗಳು ಬಂದಿದ್ದಾರೆ. ಆ ಪೈಕಿ ನಾನು ಅಥ್ಲೆಟಿಕ್ಸ್‌ನಲ್ಲಿ ವಿಕಾಸಗೌಡ ಹಾಗೂ ವ್ಹೀಲ್ ಚೇರ್ ಟೆನ್ನಿಸ್ ಆಟಗಾರ್ತಿ ಕೆ.ಆರ್. ಶಿಲ್ಪಾ ಅವರನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಇಂತಹ ಅನೇಕ ಕ್ರೀಡಾಪಟುಗಳು ಮಂಡ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರು ಭಾರತದ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಬೆಳಗುತ್ತಿದ್ದಾರೆ. ಇಲ್ಲಿ ನಿರ್ಮಾಣವಾಗಲಿರುವಒಳಾಂಗಣಕ್ರೀಡಾಂಗಣದಸದುಪಯೋಗ ಪಡೆದುಕೊಂಡು ಇಂತಹ ಅಸಂಖ್ಯಾತ ಪ್ರತಿಭೆಗಳು ಇಲ್ಲಿಂದ ಹೊರಬರಬೇಕು ಎಂದು ಹಾರೈಸುತ್ತೇನೆ ಎಂದು ಆಶಿಸಿದರು.

ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ

ಕೇಂದ್ರ ಸಂಪುಟದಲ್ಲಿ ನನ್ನ ಸಹೋದ್ಯೋಗಿ ಹಾಗೂ ಎನ್‌ಡಿಎ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರ ಪರಿಶ್ರಮದಿಂದ ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣವಾಗುತ್ತಿದೆ. ಕುಮಾರಸ್ವಾಮಿ ಅವರೇ, ಜನರಿಗಾಗಿ ನೀವು ಮಾಡಿರುವ ಕೆಲಸವು ಜನರು ನಿಮ್ಮ ಮೇಲೆ ತೋರಿಸುತ್ತಿರುವ ಪ್ರೀತಿಯಲ್ಲಿಯೇ ಕಾಣುತ್ತಿದೆ ಎಂದು ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು.ವಿಶೇಷಚೇತನರ ಬಗ್ಗೆ ನೀವು ಹೊಂದಿರುವ ಮಮತೆ, ಬದ್ಧತೆಯನ್ನು ನಾನು ಕಣ್ಣಾರೆ ನೋಡುತ್ತಿದ್ದೇನೆ. ನನಗೆ ಬಹಳ ಸಂತೋಷ ಉಂಟು ಮಾಡಿದೆ. ನೀವು ಮಾಡುತ್ತಿರುವ ಈ ಕೆಲಸ ಶ್ಲಾಘನಾರ್ಹ. ನೀವು ಎಲೆಕ್ಟ್ರಿಕ್ ವಾಹನಗಳನ್ನು ನೀಡುವ ಮೂಲಕ ವಿಶಿಷ್ಟಚೇತನರಿಗೆ ಮಾತ್ರ ಸಹಾಯ ಮಾಡುತ್ತಿಲ್ಲ, ಪರಿಸರಕ್ಕೆ ಕೂಡ ಒಳ್ಳೆಯದು ಮಾಡುತ್ತಿದ್ದೀರಿ ಎಂದು ಮಾಂಡವೀಯ ಅವರು ಶ್ಲಾಘಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಶಾಸಕರಾದ ಎಚ್.ಟಿ. ಮಂಜು, ಕೆ. ವಿವೇಕಾನಂದ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಕೆ. ಅನ್ನದಾನಿ, ಜಿ.ಬಿ. ಶಿವಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ರಮೇಶ್, ಬಿಜೆಪಿ ಮುಖಂಡ ಡಾ. ಸಿದ್ದರಾಮಯ್ಯ ಇದ್ದರು.

ಶಂಕುಸ್ಥಾಪನೆ



ಬಾಗಲಕೋಟೆ ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಶಂಕುಸ್ಥಾಪನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವುಕುಮಾರ, ಸಚಿವ ಎಂ.ಬಿ.ಪಾಟೀಲ,ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ ಇದ್ದರು.

ಕಿರುಸುದ್ದಿ

ವಿದೇಶಿ ಪ್ರವಾಸಿಗರ ನೆರವಿಗೆ ಬದ್ಧ: ಸಚಿವ ಪಾಟೀಲ್

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಯುದ್ಧದ ಸನ್ನಿವೇಶ ಹಾಗೂ ಅಂತಾರಾಷ್ಟ್ರೀಯ ಪ್ರಯಾಣದಲ್ಲಿನ ಅನಿಶ್ಚಿತತೆಯಿಂದಾಗಿ ರಾಜ್ಯದಲ್ಲಿ ಸಿಲುಕಿರುವ ವಿದೇಶಿ ಪ್ರವಾಸಿಗರ ನೆರವಿಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ. ಪ್ರಸ್ತುತ ಯುದ್ಧದ ಕಾರಣದಿಂದಾಗಿ ಪ್ರಯಾಣದ ಅಡಚಣೆ ಎದುರಿಸುತ್ತಿರುವ ಮತ್ತು ವೀಸಾ ಸಂಬಂಧಿತ ಸಮಸ್ಯೆಗಳಿಂದ ಸಂಕಷ್ಟಕ್ಕೆ ಸಿಲುಕಿರುವ ವಿದೇಶಿ ಪ್ರವಾಸಿಗರು ಯಾವುದೇ ಸಹಾಯಕ್ಕಾಗಿ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ರಾಜ್ಯ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ವಿದೇಶಿ ಅತಿಥಿಗಳಿಗೆ ಈ ಸಂಕಷ್ಟದ ಸಮಯದಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಇಲಾಖೆಯು ವಿಶೇಷ ನಿಗಾ ವಹಿಸಿದೆ. ಅತಿಥಿ ದೇವೋ ಭವ ಎಂಬ ಆಶಯದಂತೆ, ರಾಜ್ಯದಲ್ಲಿರುವ ವಿದೇಶಿ ಪ್ರವಾಸಿಗರಿಗೆ ವೀಸಾ ನಿರ್ವಹಣೆ ಸೇರಿದಂತೆ ಅಗತ್ಯವಿರುವ ಎಲ್ಲಾ ನೆರವು ನೀಡಲು ಇಲಾಖೆ ಸನ್ನದ್ಧವಾಗಿದೆ ಎಂದು ಅವರು ಭರವಸೆ ನೀಡಿದ್ದಾರೆ.

ಸಹಾಯಕ್ಕಾಗಿ ಸಂಪರ್ಕಿಸಿ: ವಿದೇಶಿ ಪ್ರವಾಸಿಗರು ಮಾಹಿತಿ ಅಥವಾ ತುರ್ತು ನೆರವಿಗಾಗಿ ಬೆಳಗ್ಗೆ 5:30 ರಿಂದ ರಾತ್ರಿ 10:00 ಗಂಟೆಯವರೆಗೆ. ಈ 89706 50021 ದೂರವಾಣಿ ಸಂಖ್ಯೆಗೆ ಕರೆ ಮಾಡಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕ ಎಚ್.ಪಿ. ಜನಾರ್ಧನ 96119 21927 ಅವರನ್ನು ಸಂಪರ್ಕಿಸಿ.

ಐಟಿ, ಬಿಟಿ ಕ್ಷೇತ್ರದಿಂದ ಉದ್ಯೋಗಾವಕಾಶ

ವಿಧಾನ ಪರಿಷತ್: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿಟಿ) ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡುತ್ತಿದೆ ಎಂದು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಕೆ.ಎಸ್. ನವೀನ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಐಟಿ ಕಂಪನಿಗಳ ಸ್ಥಾಪನೆ ಮತ್ತು ಸ್ಟಾರ್ಟ್‌ಅಪ್ ಪ್ರೋತ್ಸಾಹ ನೀಡಲು ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು. ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಮಾಹಿತಿಯಂತೆ ಕಲಬುರಗಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸುಮಾರು 21 ಐಟಿ ಕಂಪನಿಗಳು ಸ್ಥಾಪನೆಯಾಗಿವೆ. ಬಳ್ಳಾರಿಯ ಐಟಿ ಪಾರ್ಕ್‌ನಲ್ಲಿ ಈಗಾಗಲೇ ಸುಮಾರು 18 ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಸಾರಥಿ ಯೋಜನೆ: ಆಯ್ಕೆ ಪಟ್ಟಿ ರದ್ದು

ವಿಧಾನ ಪರಿಷತ್: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 2025-26ನೇ ಸಾಲಿನಲ್ಲಿ ಲಭ್ಯವಿರುವ ಸರ್ಕಾರದ ಸಾಂಸ್ಥಿಕ ಕೋಟಾದಡಿಯಲ್ಲಿ ನೇರ ಸಾಲ, ಗಂಗಾ ಕಲ್ಯಾಣ, ಉದ್ಯಮಶೀಲತೆ, ಮೈಕ್ರೋ ಕ್ರೆಡಿಟ್ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಯ ಅಡಿ ಕೆಲವು ಫಲಾನುಭವಿಗಳನ್ನು ಕ್ರಮಬದ್ಧವಾಗಿ ಆಯ್ಕೆಯಾಗಿಲ್ಲವೆಂದು ಕಂಡು ಬಂದಿರುವ ಹಿನ್ನೆಲೆ ಈ ಪಟ್ಟಿಗಳನ್ನು ರದ್ದುಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು. ಸದಸ್ಯರಾದ ಟಿ.ಎನ್. ಜವರಾಯಿ ಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಫಲಾನುಭವಿಗಳನ್ನು ರದ್ದುಪಡಿಸಿರುವ ಪಟ್ಟಿಯನ್ನು ಪರಿಶೀಲಿಸಿ, ಕೆಲವು ಫಲಾನುಭವಿಗಳು ಅರ್ಹರಿದ್ದಲ್ಲಿ ಸಾಂಸ್ಥಿಕ ವಿವೇಚನಾ ಕೋಟಾದ ಮಿತಿಯ ಅಡಿಯಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ತೀರ್ಪು ಪ್ರಕಟವಾಗದಿದ್ದರೂ ರೈತರಿಗೆ ನೆರವು: ಡಿ.ಕೆ.ಶಿವಕುಮಾರ

ಸಂತ್ರಸ್ತರಿಗೆ ಶೀಘ್ರ ಪರಿಹಾರ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗಾಗಿ ಬ್ರಿಜೇಶ್ ಪಟೇಲ್‌ರವರ ತೀರ್ಪು ಪ್ರಕಟವಾಗಿಲ್ಲ. ಕೋರ್ಟ್ ಆದೇಶವನ್ನು ಕೇಂದ್ರ ಸರ್ಕಾರ ಜಾರಿಗೆ ತರುತ್ತಿಲ್ಲ, ಆದರೂ ನಮ್ಮ ಸರ್ಕಾರ ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಜಲ ನಮ್ಮ ಹಕ್ಕು ಎಂದು ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರ ನೀಡುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿ, ಮೂರನೇ ಹಂತದ ಯುಕೆಪಿ ಕಾಮ ಗಾರಿಗಾಗಿ 1 ಲಕ್ಷ 33 ಸಾವಿರ ಎಕರೆ ಭೂಸ್ವಾಧೀನ ಮಾಡಿಕೊಂಡು ರೈತರಿಗೆ ಹಣ ಕೊಡಲು ಬದ್ಧರಾಗಿದ್ದೇವೆ. ಚೆಕ್ ಕೂಡ ನೀಡಲಾಗುತ್ತಿದೆ. ಈ ತೀರ್ಮಾಣದಿಂದ ಪಕ್ಕದ ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹಾಕಿ ರೈತರಿಗೆ ಪರಿಹಾರ ನೀಡದಂತೆ ತಕರಾರು ಅರ್ಜಿ ಹಾಕಿವೆ. ಆದರೂ ನಾವು ಈ ಬಗ್ಗೆ ಮನವರಿಕೆ ಮಾಡಲು ಕೇಂದ್ರ ಪ್ರಯತ್ನ ಪಟ್ಟಿದ್ದೇವೆ. ಹೀಗಾಗಿ ನಮ್ಮ ಸರ್ಕಾರ ರೈತರಿಗಾಗಿ ಬಲಿಷ್ಠವಾದ ತೀರ್ಮಾನ ಕೈಗೊಂಡಿದೆ ಎಂದರು.

ಜಾತಿಯನ್ನು ಕೇಳದೇ ಗುಣ ಕೇಳಬೇಕು. ಧರ್ಮ ಕೇಳದೇ ನಡತೆ ಕೇಳಬೇಕು ಎಂಬ ದಾರಿಯಲ್ಲಿ ರೈತರ ಬದುಕಿಗೆ ಸರ್ಕಾರ ನೆರವಾಗಲಿದೆ. ಸಣ್ಣ ನೀರಾವರಿ ಸಚಿವರು ಮತ್ತು ನಾವು ದೆಹಲಿಗೆ ತೆರಳಿ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗಿ



> ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣವಾಗಲಿದೆ. ರಾಜ್ಯದಲ್ಲಿ 17945 ವಿದ್ಯಾರ್ಥಿಗಳು ಪ್ರತಿ ವರ್ಷ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಓದಿ ಪದವಿ ಪಡೆದುಕೊಳ್ಳಲಿದ್ದಾರೆ. 5070 ಪಿಜಿ ಸೀಟ್, 44,000 ನರ್ಸಿಂಗ್, ಮೆಡಿಕಲ್‌ಗೆ ಶಕ್ತಿ ತುಂಬಲು ಸರ್ಕಾರ ಕೆಲಸ ಮಾಡುತ್ತಿದೆ.
> ■ ಡಿ.ಕೆ.ಶಿವಕುಮಾರ, ಉಪಮುಖ್ಯಮಂತ್ರಿ

ನಮ್ಮ ಕೆಲಸಕ್ಕೆ ಅಡ್ಡಿ ಮಾಡಬಾರದು. ಯೋಜನೆಗೆ ಕೇಂದ್ರದಿಂದ ಅನುದಾನ ಕೂಡ ಬಿಡುಗಡೆ ಮಾಡಬೇಕು ಎಂದು ಒತ್ತಡ ಹಾಕುತ್ತೇವೆ ಎಂದರು.

ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಕಳೆದ ವಿಧಾನಸಭೆಯ ಚುನಾವಣೆಯಲ್ಲಿ 14 ಸ್ಥಾನಗಳನ್ನು ಗೆಲ್ಲಿಸಿಕೊಟ್ಟ ಜನರ ಋಣ ತೀರಿಸಲು ಬಾಗಲಕೋಟೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸಿದ್ದೇವೆ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮಾತನಾಡಿ, ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್, ಕ್ಯಾನ್ಸರ್ ಆಸ್ಪತ್ರೆ, ಟ್ರಾಮಾ ಸೆಂಟರ್, ಯೂನಿವರ್ಸಲ್ ಹೆಲ್ತ್ ಮಾಡುವ ಮೂಲಕ ರಾಜ್ಯದ ಜನತೆಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದರು. ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್ ನಿರ್ಮಾಣವಾಗುತ್ತಿರುವ ಪರಿಣಾಮದಿಂದ ಗ್ರಾಮೀಣ ಭಾಗದ ರೈತರು ಮಕ್ಕಳು, ಸಾಮಾನ್ಯ, ಬಡವರ ಮಕ್ಕಳಿಗೆ ಮೆರಿಟ್ ಆಧಾರದ ಮೇಲೆ ಸೀಟ್ ಸಿಗಲಿದೆ ಎಂದರು.

ಸಚಿವ ಎಂ.ಬಿ.ಪಾಟೀಲ,ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ ಇದ್ದರು.

ಫ್ಲಿಪ್‌ಕಾರ್ಟ್ ವಿರುದ್ಧ ಕ್ರಮ ಕೈಗೊಳ್ಳಲು ಪತ್ರ

ಬೆಂಗಳೂರು: ಹಣ ಮಾಡುವ ಭರದಲ್ಲಿ ಫ್ಲಿಪ್‌ಕಾರ್ಟ್ ಎನ್ನುವ ಸಂಸ್ಥೆ 1 ರೂಪಾಯಿಗೆ 1 ಲೀಟರ್ ಹಾಲು ನೀಡಲು ಮುಂದಾಗಿದೆ. ರೈತ ಸಮುದಾಯವನ್ನು ಧ್ವಂಸ ಮಾಡುವಂತಹ ಕೃತ್ಯಕ್ಕೆ ಕೈ ಹಾಕಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇಡೀ ದೇಶದಾದ್ಯಂತ ದಂಗೆ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.



ಶನಿವಾರ ಸದಾಶಿವನಗರದ ನಿವಾಸದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 1 ರೂಪಾಯಿಗೆ 1 ಲೀಟರ್ ಹಾಲು ಮಾರಲು ಮುಂದಾಗಿರುವ ಫ್ಲಿಪ್ ಕಾರ್ಟ್ ಸಂಸ್ಥೆ ವಿರುದ್ಧ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ ಇವರಿಗೆ ಸೆಕ್ಷನ್ 19/1 ಎ ಅಡಿ ಕ್ರಮ ತೆಗೆದುಕೊಳ್ಳಬೇಕು ಎಂದು ದೂರು ನೀಡಲಾಗಿದೆ. ಜತೆಗೆ ಈ ವಿಚಾರವನ್ನು ಪ್ರಧಾನಿ ಮೋದಿಯವರಿಗೆ ಇ-ಮೇಲ್ ಮುಖಾಂತರ ಕಳಿಸುತ್ತಿದ್ದೇನೆ ಎಂದು ತಿಳಿಸಿದರು.

ಮಾರುಕಟ್ಟೆಯನ್ನು ಆವರಿಸಿಕೊಳ್ಳಬೇಕುಎಂದುಮಾಡುತ್ತಿರುವ ಸ್ಪರ್ಧೆಯಿಂದ ರೈತರಿಗೆ ಹೊಡೆತ ಬೀಳುತ್ತದೆ. ಇದಕ್ಕಾಗಿ ಯೇ ಸುಮಾರು 2 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ರೈತರಿಗೆ ನಾವು 38, 39, 40 ರೂಪಾಯಿ ಹಣವನ್ನು ಪಾವತಿ ಮಾಡುತ್ತಿದ್ದೇವೆ. ಇವರು 1 ರೂಪಾಯಿಗೆ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ.ಯಾರಿಂದ ಖರೀದಿ ಮಾಡುತ್ತಿದ್ದಾರೆ. ಎಲ್ಲಿಂದ ಹಾಲು ಬರುತ್ತಿದೆ ಎಂದು ತಿಳಿದುಕೊಳ್ಳಬೇಕಿದೆ ಎಂದರು.

14.5 ಲಕ್ಷ ಲೀ ಹಾಲು ಮಾರಾಟ

ಈಗಾಗಲೇ 14.5 ಲಕ್ಷ ಲೀಟರ್ ಹಾಲು ಮಾರಾಟ ಆಗಿದೆ. ಈಗಾಗಲೇ ಎಲ್ಲಾ ಕಡೆ ಜಾಹೀರಾತು ನೀಡಿದೆ. ಸಾರ್ವಜನಿಕರ ಹಣವನ್ನ ಹೂಡಿಕೆ ಮಾಡಿ ಗ್ರಾಹಕರನ್ನ ಆಕರ್ಷಣೆ ಮಾಡಲಾಗುತ್ತಿದೆ. ಆ ಕಂಪನಿಯವರು ಎಷ್ಟು ದಿನ ಈ ರೀತಿ ಹಾಲು ಕೊಡುತ್ತಾರೆ ಎಂಬುದನ್ನು ಬಹಿರಂಗಗೊಳಿಸಬೇಕು. ಬಮುಲ್ ಒಕ್ಕೂಟಕ್ಕೆ 40 ರಿಂದ 50 ಸಾವಿರ ಲೀಟರ್ ಹಾಲು ಮಾರಾಟ ಕಡಿಮೆಯಾಗಿದೆ. ಎಷ್ಟು ದಿನದಿಂದ ಇದು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕು ಎಂದರು.

ಪ್ರವಾಸಿಗರ ಸಂಖ್ಯೆ ಇಳಿಮುಖ

ಚಿಕ್ಕಮಗಳೂರು: ಜಿಲ್ಲೆಯ ವಿವಿಧ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಇಳಿಮುಖವಾಗಿದ್ದು, ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದಂತಾಗಿದೆ.

ಚಿಕ್ಕಮಗಳೂರು ತಾಲ್ಲೂಕಿನ ಗಿರಿ ತಪ್ಪಲಿನ ನಿಸರ್ಗ ತಾಣಗಳಾದ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ದತ್ತಪೀಠ, ಕೆಮ್ಮಣ್ಣುಗುಂಡಿ ಇನ್ನಿತರೆ ಪ್ರದೇಶಗಳು ಶನಿವಾರ ಪ್ರವಾಸಿಗರಿಲ್ಲದೆ ಬಿಕೋ ಎನ್ನುತ್ತಿದ್ದವು. ವಾರಾಂತ್ಯದ ದಿನಗಳಲ್ಲಿ ಪ್ರವಾಸಿಗರು ಹಾಗೂ ಪ್ರವಾಸಿ ವಾಹನಗಳಿಂದ ಗಿಜಿಗುಡುವ ನಗರ ಸಮೀಪದ ಕೈಮರ ಚೆಕ್‌ಪೋಸ್ಟ್ ಸರ್ಕಲ್‌ನಲ್ಲಿ ಜನ, ವಾಹನ ಸಂಚಾರವೇ ಇರಲಿಲ್ಲ, ಪ್ರಮುಖ ಹೋಟೆಲ್‌ಗಳು ಬಾಗಿಲು ಮುಚ್ಚಿದ್ದ ಪರಿಣಾಮ ಇಡೀ ಪ್ರದೇಶ ಬಿಕೋ ಎನ್ನುತ್ತಿರುವುದು ಕಂಡುಬಂತು.

ಯಾವುದೇ ಪರಿಸ್ಥಿತಿಯಲ್ಲೂ ವಾರಾಂತ್ಯದ ದಿನಗಳಲ್ಲಿ ಬೆಂಗಳೂರು ಸೇರಿದಂತೆ ಹೊರ ಜಿಲ್ಲೆಗಳ ಐಟಿ ಉದ್ಯೋಗಿಗಳು ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಆದರೆ ಈ ವಾರಾಂತ್ಯದಲ್ಲಿ ಜಿಲ್ಲೆಗೆ ಭೇಟಿ ನೀಡಿರುವವರ ಸಂಖ್ಯೆ ಕ್ಷೀಣಿಸಿದೆ. ಇದರ ಪರಿಣಾಮ ಬಹುತೇಕ ಹೋಂಸ್ಟೇಗಳು, ರೆಸಾರ್ಟ್‌ಗಳು, ಲಾಡ್ಜ್‌ಗಳು ಪ್ರವಾಸಿಗರಿಲ್ಲದೆ ಖಾಲಿ ಉಳಿದಿದೆ.

ಪ್ರವಾಸಿ ಸ್ಥಳಗಳಲ್ಲಿ ಹೋಟೆಲ್‌ಗಳು, ಕ್ಯಾಂ ಟೀನ್, ಕಾಂಡಿಮೆಂಟ್ಸ್‌ಗಳು, ಬೇಕರಿಗಳು ಇನ್ನಿತರೆ ವ್ಯಾಪಾರ ವಹಿವಾಟಿಗೂ ಪೆಟ್ಟು ಬಿದ್ದಿದ್ದು, ಪ್ರವಾ ಸೋದ್ಯಮ ನಷ್ಟ ಅನುಭವಿಸುವಂತಾಗಿದೆ ಎಂದರು.



ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ

ಮಧ್ಯಪ್ರಾಚ್ಯದಲ್ಲಿ ತಲೆದೋರಿದುವ ಯುದ್ಧದ ಪರಿಸ್ಥಿತಿಯಿಂದ ಉಂಟಾಗಿರುವ ಅಡುಗೆ ಅನಿಲ ಅಭಾವದ ಕಾರಣ ಎಲ್ಲೆಡೆ ಹೋಟೆಲ್‌ಗಳು ಮುಚ್ಚಲ್ಪಡುತ್ತಿರುವುದರಿಂದ ಐಟಿ ಉದ್ಯೋಗಿಗಳು ಸೇರಿದಂತೆ ಇತರೆ ಪ್ರವಾಸಿಗರು ತಮ್ಮ ಪ್ರವಾಸದ ಯೋಜನೆಯನ್ನು ಕೈಬಿಟ್ಟಿರುವ ಸಾಧ್ಯತೆ ಇದೆ. ಇಂದಿನ ಒಟ್ಟಾರೆ ಪರಿಸ್ಥಿತಿ ಪ್ರವಾಸವನ್ನು ಸಂಪೂರ್ಣ ಆನಂದಿಸಲು ಪೂರಕವಾಗಿಲ್ಲ ಎನ್ನುವ ಕಾರಣಕ್ಕೆ ಪ್ರವಾಸಿಗರು ಹಿಂದೇಟು ಹಾಕುತ್ತಿದ್ದಾರೆ. ಇದು ಹೀಗೇ ಇರುವುದಿಲ್ಲ, ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ ಮರುಳಲಿದೆ ಎಂದು ಕೈಮರದ ಹೋಟೆಲ್ ಮಾಲೀಕ ಮುರುಗನ್ ಹೇಳುತ್ತಾರೆ.

ಕೈಮಗ್ಗ ಉತ್ಪನ್ನಗಳಿಗೆ ಉತ್ತಮ ಬೇಡಿಕೆ: ಸಚಿವ

ಬೆಂಗಳೂರು: ರಾಜ್ಯದ ಕೈಮಗ್ಗ ಉತ್ಪನ್ನಗಳು ಹೊರ ರಾಜ್ಯಗಳಲ್ಲಿ ಬೇರೆ-ಬೇರೆ ಬ್ರ್ಯಾಂಡ್‌ಗಳಲ್ಲಿ ಮಾರಾಟವಾಗುತ್ತಿವೆ. ನಮ್ಮದೇ ಉತ್ಪನ್ನಗಳು ಬೇರೆ ರಾಜ್ಯಗಳಿಂದ ಬೇರೆ ಬ್ರ್ಯಾಂಡ್‌ಗಳ ರೂಪದಲ್ಲಿ ರಾಜ್ಯಕ್ಕೆ ಬರುತ್ತಿವೆ. ಸ್ಥಳೀಯವಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ರಾಜಾಜಿನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ಟೇಡಿಯಂನಲ್ಲಿ 14 ದಿನಗಳ ಭಾರತೀಯ ಕೈಮಗ್ಗ ಪರಂಪರೆ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಮ್ಮ ಉತ್ಪನ್ನಗಳಿಗೆ ನಮ್ಮಲ್ಲೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಯಶವಂತಪುರದಲ್ಲಿರುವ ಇಲಾಖೆಯ ಒಂದೂವರೆ ಎಕರೆ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಶೀಘ್ರದಲ್ಲಿ ಶಂಕುಸ್ಥಾಪನೆ ನೆರವೇರಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು. ಇತ್ತೀಚೆಗೆ ಪಾರಂಪರಿಕ ಕಲೆ ನಶಿಸಿ ಹೋಗುತ್ತಿದೆ ಎಂದರು.



ಅಂತಿಮ ಹಂತದಲ್ಲಿ ಜವಳಿ ನೀತಿ

2026-30 ಅವಧಿಯ ನೂತನ ಜವಳಿ ನೀತಿ ಅಂತಿಮ ಹಂತಕ್ಕೆ ಬಂದಿದೆ. ಮೆಗಾ ಮತ್ತು ಮಿನಿ ಇಂಡಸ್ಟ್ರಿಸ್‌ಗಳನ್ನು ಒಂದೇ ಸೂರಿನ ಅಡಿಯಲ್ಲಿ ತರುವ ಪ್ರಯತ್ನ ನಡೆದಿದೆ. ಕಲಬುರಗಿಯಲ್ಲಿ ನಿರ್ಮಾಣವಾಗುತ್ತಿರುವ ಪಿಎಂ ಮಿತ್ರ ನೂಲಿನಿಂದ ಬಟ್ಟೆ ಹಂತದವರೆಗೆ ಎಲ್ಲ ಚಟುವಟಿಕೆಗಳು ಪಾರ್ಕ್‌ನಲ್ಲಿ ಒಂದೇ ಸೂರಿನ ಅಡಿಯಲ್ಲಿ ಬರಲಿವೆ. ಈ ಯೋಜನೆ ಅನುಷ್ಠಾನವಾದರೆ ಕರ್ನಾಟಕದಲ್ಲಿ ಮೈಲಿಗಲ್ಲಾಗಲಿದೆ ಎಂದು ಶಿವಾನಂದ ಪಾಟೀಲ್ ಮಾಹಿತಿ ನೀಡಿದರು.

52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ

ವಿಧಾನ ಪರಿಷತ್: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿದ್ದು, ವಿವಿಧ ಇಲಾಖೆಗಳಲ್ಲಿ 52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ ಹೊರಬೀಳಲಿದೆ. ಈ ಸಂಬಂಧ ಸರ್ಕಾರ ಮಟ್ಟದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಡಾ. ಎಂ.ಜಿ. ಮುಳೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಬೀದರ ಜಿಲ್ಲೆಯಲ್ಲಿ 106



ಹುದ್ದೆಗಳೂ ಸೇರಿ ರಾಜ್ಯಾದ್ಯಂತ 823 ನಿಲಯ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆರ್ಥಿಕ ಇಲಾಖೆಯಿಂದ ಒಪ್ಪಿಗೆ ಸಿಗಬೇಕಿದೆ. ಉಳಿದಂತೆ ಖಾಲಿ ಇರುವ ಗ್ರೂ-ಡಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಂಡು ಹಾಸ್ಟೆಲ್‌ಗಳನ್ನು ನಿರ್ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ ವಾರ್ಷಿಕವಾಗಿ ಓಬಿಸಿ ಇಲಾಖೆಯಿಂದಲೇ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ 1.41 ಲಕ್ಷ ವಿದ್ಯಾರ್ಥಿಗಳ ಹಾಸ್ಟೆಲ್ ಪ್ರವೇಶಾತಿ ಬೇಡಿಕೆ ಇದೆ ಎಂದರು.

ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಳ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ರೈಲ್ವೆ ಕಾಮಗಾರಿಗಳಿಗೆ ಸರ್ಕಾರದಿಂದ ಹಿನ್ನಡೆ

ಹುಬ್ಬಳ್ಳಿ: ಧಾರವಾಡ-ಬೆಳಗಾವಿ ಮಧ್ಯೆ ರೈಲ್ವೆ ಮಾರ್ಗದ ಯೋಜನೆ ಕಾಮಗಾರಿಗೆ ರಾಜ್ಯ ಸರ್ಕಾರ ಭೂಸ್ವಾಧೀನಕ್ಕೆ ಸಹಕಾರ ನೀಡುತ್ತಿಲ್ಲ, ಇದರಿಂದ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿದ್ದು, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಟೈ ಹುಬ್ಬಳ್ಳಿ ಪದಾಧಿಕಾರಿಗಳು ಸರ್ಕಾರ ಮೇಲೆ ಒತ್ತಡ ಹಾಕಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.



ನಗರದಲ್ಲಿ ಶನಿವಾರ ಟೈ ಹುಬ್ಬಳ್ಳಿ ವತಿಯಿಂದ ಏರ್ಪಡಿಸಿದ್ದ ಟೈಕಾನ್ -2026 ಉತ್ತರ ಕರ್ನಾಟಕ ರೈಸಿಂಗ್ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್‌ಗೆ ಸ್ಥಾಪನೆಯಾಗಿದ್ದು, ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಿಸಿದೆ. ಇದರಿಂದ ಕೈಗಾರಿಕೋದ್ಯಮಿಗಳು ಮುಂದೆ ಬರುತ್ತಿಲ್ಲ, ಈ ಬಗ್ಗೆ ಸಂಸ್ಥೆಗಳು ಸರ್ಕಾರದ ಗಮನಕ್ಕೆ ತರಬೇಕು ಎಂದರು. ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗದ ಕಾಮಗಾರಿಗೆ ಶೀಘ್ರದಲ್ಲಿಯೇ ಅನುಮೋದನೆ ದೊರೆಯಲಿದೆ. ಇದರಿಂದ ಉತ್ತರ ಕರ್ನಾಟಕ ಭಾಗದ ಕೈಗಾರಿಕೋದ್ಯಮಿಗಳಿಗೆ ಬಹಳಷ್ಟು ಸಹಕಾರವಾಗಲಿದೆ. ಇದು ಬಂದರುಗಳಿಗೆ ಸಂಪರ್ಕದ ಕೊಂಡಿಯಾಗಲಿದ್ದು, ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ದೇಶದಲ್ಲಿ ವಾಣಿಜ್ಯೋದ್ಯಮಿಗಳಿಗೆ ಕೌಶಲ್ಯ ಬಹಳ ಅವಶ್ಯಕ. ದೇಶದ ಎಲ್ಲ ಕ್ಷೇತ್ರದಲ್ಲಿ ಅವಕಾಶಗಳು ತೆರೆದುಕೊಂಡಿವೆ. ಕೃತಕ ಬುದ್ಧಿಮತ್ತೆ(ಎಐ), ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರ ಬೆಳೆದಿವೆ. ದೇಶದಲ್ಲಿ ಮುಂದಿನ ಐದು ವರ್ಷದಲ್ಲಿ ಕೋಟ್ಯಾಂತರ ಉದ್ಯೋಗಸೃಷ್ಟಿಯಾಗಲಿವೆ. ಕೃಷಿಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಲಿದೆ ಎಂದು ತಿಳಿಸಿದರು.

ದೇಶದಲ್ಲಿ 300ಕ್ಕೂ ಹೆಚ್ಚು ಮೊಬೈಲ್ ತಯಾರಿಕಾ ಕಂಪನಿಗಳಿದ್ದು, ವಿಶ್ವಕ್ಕೆ ಶೇ.30ರಷ್ಟು ಮೊಬೈಲ್‌ಗಳನ್ನು ಇಲ್ಲಿಂದ ರಫ್ತು ಮಾಡಲಾಗುತ್ತಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಬೇರೆ ರಾಜ್ಯಗಳಲ್ಲಿ ವಿದ್ಯುತ್ ದರ ಕಡಿಮೆಯಿದ್ದು, ರಾಜ್ಯದಲ್ಲಿ 90 ಪೈಸೆ ಹೆಚ್ಚಿಸಲಾಗಿದೆ. ಇದು ಕೈಗಾರಿಕೋದ್ಯಮಿಗಳಿಗೆ ಹೊರೆಯಾಗಲಿದೆ. ಭಾರತ ಉತ್ಪನ್ನಗಳಿಗೆ ವಿದೇಶದಲ್ಲಿ ಭಾರೀ ಬೇಡಿಕೆ ಇದೆ. ದೇಶದಲ್ಲಿ ವಿಮಾನ ನಿಲ್ದಾಣ, ರೈಲ್ವೆ ಮಾರ್ಗ, ರಸ್ತೆ ಸಂಪರ್ಕ ಮಾಡಿದ್ದರಿಂದ ಅಭಿವೃದ್ಧಿಗೆ ಸಹಕಾರವಾಗಿದೆ ಎಂದರು.

ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಟೈ ಇವತ್ತು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. 16 ವರ್ಷ ಹಿಂದೆ 5 ಜನ ಆರಂಭಿಸಿದ್ದೇವು. ಈಗ ಬಹಳ ಹೆಸರುಗಳಿಸಿದೆ. ನವೋದ್ಯಮಿಗಳಿಗೆ ಮಾರ್ಗ ದರ್ಶನ ಮಾಡಲಾಗುತ್ತಿದೆ. ಶಿಕ್ಷಣ ಸೇರಿದಂತೆ ನಾಲ್ಕು ಕ್ಷೇತ್ರದ ಒಳಗೊಂಡು ಮುಂದೆ ನಡೆದಿದೆ. ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವಂತೆ ವಾತಾವರಣ ನಿರ್ಮಾಣವಾಗಿದೆ. ಸ್ವಂತ ಯೋಜನೆ, ಆಲೋಚನೆಯಿಂದ ಅನೇಕರು ಉದ್ಯಮಿಗಳಾಗಿ ಬೆಳೆದಿದ್ದಾರೆ ಎಂದು ಹೇಳಿದರು.

ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಟೈ ಹುಬ್ಬಳ್ಳಿ ಅಧ್ಯಕ್ಷ ಗಿರೀಶ ಮಾನೆ, ವಿಶಾಲ ನಾಡ ಗೌಡರ, ವಿ.ಎಸ್. ವಿ ಪ್ರಸಾದ, ಅಮೃತ ಕಬಾಡೆ ಇದ್ದರು.

ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವ ಸೂಚನೆ

ಮಾ.28ರಂದು ಮೇಲುಕೋಟೆ ವೈರಮುಡಿ

ಮಂಡ್ಯ: ಮೇಲುಕೋಟೆಯಲ್ಲಿ ಪ್ರಮುಖ ಆಕರ್ಷಣೆಯಾದ ಮೇಲುಕೋಟೆ ವೈರಮುಡಿ ಉತ್ಸವ ಮಾ. 28ರಂದು ನಡೆಯಲಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ವಹಿಸುವಂತೆ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವೈರಮುಡಿ ಬ್ರಹ್ಮೋತ್ಸವದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾ. 23ರಿಂದ ಏ. 4ರವರೆಗೆ ವೈರಮುಡಿ ಉತ್ಸವ ನಡೆಯಲಿದ್ದು, ಉತ್ಸವದಲ್ಲಿ ಯಾವುದೇ ಲೋಪದೋಷಗಳಾಗದಂತೆ, ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಮತ್ತು ಬಿಗಿ ಭದ್ರತೆ ಒದಗಿಸುವಂತೆ ಸೂಚಿಸಿದರು.

ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತಾಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ



ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.

ಪೊಲೀಸ್ ಇಲಾಖೆಯವರು ವೈರಮುಡಿ ಬ್ರಹ್ಮೋತ್ಸವದಲ್ಲಿ ಕಿರೀಟಧಾರಣಾ ಮೆರವಣಿಗೆಯ ಸಂದರ್ಭದಲ್ಲಿ ಶಾಂತಿಯುತವಾಗಿ ಹಾಗೂ ಸಮಾಧಾನವಾಗಿ ಜನರು ದೇವರು ನೋಡವಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಈ ಸಂಬಂಧ ದೇವಸ್ಥಾನದ ಅರ್ಚಕರೊಂದಿಗೆ ಸಭೆ ನಡೆಸಿ ಶಾಂತಿಯುತವಾಗಿ ನಡೆಯಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಮಾತನಾಡಿ, ಭಕ್ತರಿಗೆ ಕುಡಿಯುವ ನೀರಿನ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ವೈರಮುಡಿ ಉತ್ಸವದಲ್ಲಿ ಜನಸಂದಣಿಯಾಗದಂತೆ ಬ್ಯಾರಿಕೇಡಿಂಗ್ ಅಳವಡಿಸಿ ಸಮಸ್ಯೆ ನಿವಾರಣೆಗೆ ಕ್ರಮ ವಹಿಸಬೇಕು ಎಂದುಹೇಳಿದರು. ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿ, ಈಗಾಗಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಭಕ್ತಾದಿಗಳಿಗೆ ಅಗತ್ಯವಿರುವ ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ಮತ್ತು ಸಂಚಾರ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಆರೋಗ್ಯ ಸೇವೆಗಳು, ಸಾರಿಗೆ ವ್ಯವಸ್ಥೆ (ಕೆ.ಎಸ್.ಆರ್.ಟಿ.ಸಿ. ಬಸ್‌ಗಳು) ಮತ್ತು ಬಿಗಿ ಪೊಲೀಸ್ ಬಂದೋಬಸ್ತ್‌ಗೆ ಸಭೆಯಲ್ಲಿ ಆದ್ಯತೆ ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ.ಜೆ. ಶೋಭಾರಾಣಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಉಪವಿಭಾಗಾಕಾರಿ ಶ್ರೀನಿವಾಸ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಂಗ್ರೆಸ್ ವಿರುದ್ಧ ಸಂಸದ ಬಿ.ವೈ. ರಾಘವೇಂದ್ರ ಆಕ್ರೋಶ

ಇಂಧನ ಬಿಕ್ಕಟ್ಟು ನೆಪದಲ್ಲಿ ರಾಜಕೀಯ



• **ಶಿವಮೊಗ್ಗ:** ಇರಾನ್ ಮತ್ತು ಅಮೇರಿಕಾ, ಇಸ್ರೇಲ್ ಸಂಘರ್ಷ ಮತ್ತು ಹೊರ್ಮುಜ್ ಜಲಸಂಧಿಯ ಅಡಚಣೆಯಿಂದಾಗಿ ಇಡೀ ಜಗತ್ತು ಇಂಧನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈ ಗಂಭೀರ ಪರಿಸ್ಥಿತಿಯಲ್ಲೂ ಕಾಂಗ್ರೆಸ್ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿರುವುದು ದುರದೃಷ್ಟಕರ ಎಂದು ಸಂಸದ ಬಿ.ವೈ. ರಾಘವೇಂದ್ರ ತೀವ್ರವಾಗಿ ಖಂಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಬ್ಯಾರೆಲ್‌ಗೆ 120 ಡಾಲರ್ ದಾಟಿದ್ದರೂ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ ಸರ್ಕಾರ ಜನರ ಮೇಲೆ ಹೊರೆ ಬೀಳದಂತೆ ನೋಡಿಕೊಳ್ಳುತ್ತಿದೆ. ಹಾಗಿದ್ದರೂ ಜನರನ್ನು ಆತಂಕಗೊಳಿಸುವಂತೆ ಪ್ರತಿಭಟನೆ ನಡೆಸಿ, ಅನಗತ್ಯ ಹೇಳಿಕೆ ನೀಡಿ, ದೇಶದ ಬಿಕ್ಕಟ್ಟಿನ ಸಂದರ್ಭದಲ್ಲೂ ಕೀಳು ರಾಜಕೀಯ ನಡೆಸುತ್ತಿದೆ ಎಂದು ಕಿಡಿ ಕಾರಿದ್ದಾರೆ.

ನೆರೆಯ ರಾಷ್ಟ್ರಗಳಲ್ಲಿ ಇಂಧನ ಬೆಲೆ ಶೇ.20ಕ್ಕಿಂತಲೂ ಅಧಿಕ ಏರಿಕೆಯಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಭಾರತದಲ್ಲಿ ಬೆಲೆಗಳು ಸ್ಥಿರವಾಗಿರುವಂತೆ ನೋಡಿಕೊಳ್ಳಲಾಗಿದೆ. ಇಂತಹ ಸೂಕ್ಷ್ಮ, ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ ದೇಶದ ಏಕತೆ ಕಾಯ್ದುಕೊಂಡು, ಕೇಂದ್ರ ಸರ್ಕಾರಕ್ಕೆ ಸಾಥ್ ನೀಡುವ ಬದಲು, ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಜನರಲ್ಲಿ ಆತಂಕ ಸೃಷ್ಟಿಸುತ್ತಿರುವ ಕಾಂಗ್ರೆಸ್‌ನ ನಕಾರಾತ್ಮಕ ರಾಜಕಾರಣ ದೇಶ ವಿರೋಧಿಯಾಗಿದೆ ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಫಲವಾಗಿ ಭಾರತ ಕೇವಲ ಒಂದು ಮಾರ್ಗ ಅವಲಂಬಿಸದೆ, ರಷ್ಯಾ, ಕೆನಡಾ ಮತ್ತು ಅಮೆರಿಕದಂತಹ ಪರ್ಯಾಯ ಮೂಲಗಳಿಂದ ಇಂಧನ ಆಮದು ಮಾಡಿಕೊಳ್ಳುತ್ತಿದೆ.

> **ಕೋವಿಡ್ ಬಿಕ್ಕಟ್ಟನ್ನು ಮೆಟ್ಟಿ ನಿಂತಂತೆ ಪ್ರಧಾನಿ ಮೋದಿಯವರ ಸಮರ್ಥ ನಾಯಕತ್ವದಲ್ಲಿ ಭಾರತವು ಇಂಧನ ಸವಾಲನ್ನೂ ಯಶಸ್ವಿಯಾಗಿ ಗೆಲ್ಲಲಿದೆ. ಸಾರ್ವಜನಿಕರು ಅನಗತ್ಯವಾಗಿ ಆತಂಕಕ್ಕೆ ಒಳಗಾಗಬೇಡಿ. ವದಂತಿಗಳಿಗೆ ಕಿವಿಗೊಡಬಾರದು ಮತ್ತು ಭಯಭೀತರಾಗಿ ಮುಂಗಡ ಬುಕ್ಕಿಂಗ್ ಮಾಡುವ ಅಗತ್ಯವಿಲ್ಲ.**
> ■ ಬಿ.ವೈ. ರಾಘವೇಂದ್ರ, ಸಂಸದ

ಹೊರ್ಮುಜ್ ಜಲಸಂಧಿಯ ಮೂಲಕ ಬರುತ್ತಿದ್ದ ಶೇ. 40-50 ರಷ್ಟು ಪೂರೈಕೆಗೆ ಧಕ್ಕೆಯಾಗದಂತೆ ಈಗಾಗಲೇ ಶೇ.70 ರಷ್ಟು ಕಚ್ಚಾ ತೈಲವನ್ನು ಪರ್ಯಾಯ ಮಾರ್ಗಗಳ ಮೂಲಕ ಸುರಕ್ಷಿತಗೊಳಿಸಲಾಗಿದೆ. ದೇಶದ 33 ಕೋಟಿ ಕುಟುಂಬಗಳ ಅಡುಗೆ ಮನೆಗೆ ಮೊದಲ ಆದ್ಯತೆ ನೀಡಿರುವ ಕೇಂದ್ರ ಸರ್ಕಾರ, ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಗೃಹಬಳಕೆಯ ಅನಿಲ ಪೂರೈಕೆಯನ್ನು ಖಚಿತಪಡಿಸಿದೆ ಎಂದು ಹೇಳಿದ್ದಾರೆ.

ಪೆಟ್ರೋಲಿಯಂ ಸಚಿವರು ಮತ್ತು ಕೇಂದ್ರ ನಾಯಕತ್ವವು ನಿರಂತರವಾಗಿ ಪರಿಸ್ಥಿತಿಯನ್ನು ಅವಲೋಕಿಸುತ್ತಿದೆ. ದೇಶದಲ್ಲಿ ಇಂಧನ ಮತ್ತು ಅನಿಲದ ಸಾಕಷ್ಟು ದಾಸ್ತಾನು ಇರುವಂತೆ ನೋಡಿಕೊಳ್ಳಲಾಗಿದೆ. ಬಿತ್ತನೆ ಹಂಗಾಮು ಹತ್ತಿರವಿರುವ ಈ ಸಮಯದಲ್ಲಿ ರೈತರಿಗೆ ಬೇಕಾದ ಗೊಬ್ಬರ ಕಾರ್ಖಾನೆಗಳಿಗೆ ಶೇ. 70ರಷ್ಟು ಗ್ಯಾಸ್ ಪೂರೈಕೆಯನ್ನು ಸರ್ಕಾರ ಖಚಿತಪಡಿಸಿದೆ. ಹೋಟೆಲ್ ಮತ್ತು ವಾಣಿಜ್ಯ ವಲಯಕ್ಕೆ ಶೇ.20 ಮೀಸಲು ಬಿಡುಗಡೆ ಮಾಡುವ ಜೊತೆಗೆ ಪರ್ಯಾಯ ಇಂಧನ ಬಳಕೆಗೆ ಅವಕಾಶ ನೀಡಿ ವ್ಯವಸ್ಥಿತ ಹಂಚಿಕೆ ಮಾಡಲಾಗುತ್ತಿದೆ. ಕಾಳಸಂತೆಯನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ರಾಘವೇಂದ್ರ ಮಾಹಿತಿ ನೀಡಿದ್ದಾರೆ.

ಮಾಜಿ ಸಿಎಂ ಎಸ್.ಬಂಗಾರಪ್ಪ ರಸ್ತೆ ನಾಮಫಲಕ ಉದ್ಘಾಟನೆ

• **ಶಿವಮೊಗ್ಗ:** ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರ ಯೋಜನೆಗಳು, ಕಾರ್ಯಕ್ರಮಗಳು ಸದಾ ಹಸಿರಾಗಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್ ಮಧು ಬಂಗಾರಪ್ಪ ಹೇಳಿದರು.

ಗೋಪಾಲಗೌಡ ಬಡಾವಣೆಯಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಮಹಾನಗರಪಾಲಿಕೆ ವ್ಯಾಪ್ತಿಯ ಆಲ್ಕೊಳ ವೃತ್ತದಿಂದ ಡಿ.ವಿ.ಜಿ. ವೃತ್ತದವರೆಗೆ 100 ಅಡಿ ದ್ವಿಪಥ ರಸ್ತೆಗೆ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ರಸ್ತೆ ಎಂದು ನಾಮ ಫಲಕ ಉದ್ಘಾಟನೆ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 290 ಮನೆಗಳಿಗೆ ಹಕ್ಕುಪತ್ರಗಳ ವಿತರಣೆ ಹಾಗೂ ಆಶ್ರಯ ಯೋಜನೆ ಅಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಮನೆಗಳ ಕೀ ಹಸ್ತಾಂತರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾನವೀಯತೆ ಸೇರಿದಂತೆ ಜೀವನಕ್ಕೆ ಅಗತ್ಯವಾದ ಎಲ್ಲವನ್ನು ನೀಡುವ ಶಿಕ್ಷಣ ಬಹಳ ಮುಖ್ಯವೆಂದು ಹೇಳುತ್ತಿದ್ದ ಬಂಗಾರಪ್ಪನವರು ಅಂದು ಒಂದು ಅದ್ಭುತ ಕಾರ್ಯಕ್ರಮ ತಂದರು. 90 ರ ದಶಕದಲ್ಲಿ ಬಡ ವರ್ಗಕ್ಕೆ ಶಿಕ್ಷಣ ಬಹಳ ಕಷ್ಟವಾಗಿತ್ತು. ಅಂತಹ ಸಂದರ್ಭದಲ್ಲಿ ಶಾಲೆಗೆ ಬರುವ ಮಕ್ಕಳಿಗೆ ಪ್ರತಿ ದಿನ ರೂ. 1 ಅವರ ತಾಯಿಯ ಕೈಯಲ್ಲಿ ನೀಡುವ ಯೋಜನೆ



ಜಾರಿಗೆ ತಂದು, ಬಡವರ ಮಕ್ಕಳು ಶಾಲೆಗೆ ಬರುವಂತೆ ಮಾಡಿದರು. ಲೋಹಿಯಾ, ಗೋಪಾಲಗೌಡರು, ಕಾಗೋಡು ತಿಮ್ಮಪ್ಪ, ಬಂಗಾರಪ್ಪ ಇವರನ್ನೆಲ್ಲ ನಾವು ಸ್ಮರಿಸಲೇಬೇಕು. ಗೋಪಾಲಗೌಡರ ಜಯಂತಿಯಂದು ಬಂಗಾರಪ್ಪ ರಸ್ತೆ ನಾಮಕರಣ ಆಗುತ್ತಿರುವುದು ಹಿರಿಯ ಚೇತನಗಳ ಆಶೀರ್ವಾದ. ಬಂಗಾರಪ್ಪನವರ ತತ್ವ ಸಿದ್ಧಾಂತಗಳನ್ನು ಅನುಸರಿಸಿಕೊಂಡು ಹೋಗುತ್ತಿದ್ದೇನೆ ಎಂದರು.

ಶಾಸಕ ಎಸ್.ಎನ್. ಚನ್ನಬಸಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂದುಕೊಂಡಂತೆ ಕಾರ್ಯ ನಿರ್ವಹಣೆ ಮಾಡುತ್ತಿದ್ದ ಧೀಮಂತ ವ್ಯಕ್ತಿ ಬಂಗಾರಪ್ಪ. ಎಂದಿಗೂ ಜಾತಿಗೆ ಅವರು ಅಂಟಿಕೊಂಡಿರಲಿಲ್ಲ, ರಾಜ್ಯದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ಸದಾ ಚಿಂತಿಸುತ್ತಿದ್ದ ಅವರು ಅಕ್ಷಯ, ಆರಾಧನಾ, ಆಶ್ರಯದಂತಹ ಉತ್ತಮ ಯೋಜನೆಗಳನ್ನು ನೀಡಿದ ಶ್ರೇಷ್ಠ ನಾಯಕ ಎಂದರು.

ಕೆರೆ ಕಟ್ಟೆಗಳ ಜಾಗ ರಕ್ಷಿಸುವ ಅಗತ್ಯವಿದೆ. ದೊಡ್ಡ ದೊಡ್ಡ ಕಟ್ಟಡಗಳು ಕೆರೆಗಳ ಜಾಗದಲ್ಲಿ ನಿರ್ಮಾಣವಾಗಿವೆ. ಇದಕ್ಕೆ ಪರಿಹಾರ ಹುಡುಕಬೇಕಿದೆ. ಬಡವರ ಪರವಾಗಿ ನಾವೆಲ್ಲಾ ಒಟ್ಟಾಗಿ ಹೋಗೋಣ ಎಂದರು.

ವಿಧಾನ ಪರಿಷತ್ ಶಾಸಕಿ ಬಲ್ಕೀಶ್ ಬಾನು ಮಾತನಾಡಿ, ಹಕ್ಕುಪತ್ರ ಇಲ್ಲದೆ ಭಯದಲ್ಲಿ ಜೀವನ ನಡೆಸುತ್ತಿದ್ದ ಜನರಿಗೆ ಹಕ್ಕುಪತ್ರ ನೀಡುವ ಮೂಲಕ ಧೈರ್ಯ ತುಂಬಲಾಗುತ್ತಿದೆ ಎಂದರು.

ಅಲೆಮಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ ಮಾತನಾಡಿ, 100 ಕೋಟಿ ರೂ.ಅನುದಾನವನ್ನು ಅಲೆಮಾರಿಗಳ ಅಭಿವೃದ್ಧಿಗೆ ಮೀಸಲಿಡಲಾಗಿದೆ. ಅಲೆಮಾರಿಗಳ ಮಕ್ಕಳಿಗೆ ನಾಲ್ಕು ಶಾಲೆಗಳನ್ನು

> **ಆಶ್ರಯ, ಆರಾಧನಾ, ಗ್ರಾಮೀಣ ಕೃಪಾಂಕ ಯೋಜನೆಗಳು ರೈತರ 10 ಹೆಚ್‌ಪಿ ಪಂಪ್ ಸೆಟ್‌ಗೆ ಉಚಿತ ವಿದ್ಯುತ್ ನೀಡಿ ರೈತರ ನೆರವಿಗೆ ಬಂದಿರುವುದನ್ನು ನಾವು ಸದಾ ಸ್ಮರಿಸಬೇಕು. ಈ ಯೋಜನೆಗಳಿಂದ ರೈತರು ಆರ್ಥಿಕವಾಗಿ ಸುಧಾರಣೆ ಯಾಗುತ್ತಿರುವುದನ್ನು ನೋಡಿ ಸಂತೋಷವಾಗುತ್ತದೆ.**
> ■ ಎಸ್ ಮಧು ಬಂಗಾರಪ್ಪ

ನಿರ್ಮಿಸಲು ಅವಕಾಶ ನೀಡಲಾಗಿದೆ. ಅದರಲ್ಲಿ ಒಂದು ಶಾಲೆಯನ್ನು ಜಿಲ್ಲೆಗೆ ತರಲು ಸಚಿವರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ(ವಿದ್ಯುತ್ ಮಗ್ಗಗಳ) ನಿಗಮದ ಅಧ್ಯಕ್ಷ ಚೇತನ್ ಕೆ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸಿ.ಎಸ್. ಚಂದ್ರಭೂಪಾಲ, ಡಾ.ಜಿ.ಡಿ. ನಾರಾಯಣಪ್ಪ , ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್, ಪಾಲಿಕೆ ಆಯುಕ್ತ ಮಾಯಣ್ಣಗೌಡ ಪಾಲ್ಗೊಂಡಿದ್ದರು.

ಮಾ. 24ರಂದು ಪರಿಸರಕ್ಕಾಗಿ ನಾವು ಮತ್ತು ರಾಷ್ಟ್ರಭಕ್ತರ ಬಳಗದಿಂದ ಅಹೋರಾತ್ರಿ ಧರಣಿ: ಕೆಎಸ್‌ಈ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ವಿರೋಧ

• **ಶಿವಮೊಗ್ಗ :** ಶರಾವತಿ ಪಂಪ್ಡ್ ಸ್ಟೋರೇಜ್ ವಿರೋಧಿಸಿ ಪರಿಸರಕ್ಕಾಗಿ ನಾವು ಮತ್ತು ರಾಷ್ಟ್ರಭಕ್ತರ ಬಳಗದ ವತಿಯಿಂದ ಮಾ. 24ರಂದು ಬೆಳಿಗ್ಗೆ 9.30ರಿಂದ ಮಾ.25ರ ಬೆಳಿಗ್ಗೆ 9.30ರ ವರೆಗೆ ನಗರದ ನೆಹರೂ ಕ್ರೀಡಾಂಗಣದ ಎದುರು ಶಿವಮೂರ್ತಿ ವೃತ್ತದಲ್ಲಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಗೆ ಸಾಕಷ್ಟು ವಿರೋಧ ವ್ಯಕ್ತವಾಗಿದೆ. ನ್ಯಾಯಾಲಯ ಕೂಡ ಈ ಯೋಜನೆಯಿಂದ ಪರಿಸರಕ್ಕೆ ಧಕ್ಕೆಯಾಗಲಿದೆ ಎಂದು ಹೇಳಿದ್ದರೂ ಕೂಡ ಸರ್ಕಾರ ಮಾತ್ರ ಇದನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಯತ್ನ ನಡೆಸುತ್ತಿದೆ ಎಂದರು.

ಯೋಜನೆ ವ್ಯಾಪ್ತಿಯಲ್ಲಿ 16,000ಕ್ಕೂ ಹೆಚ್ಚು ಮರಗಳನ್ನು ಕಡಿಯುವ ಪ್ರಸ್ತಾಪವಿದೆ. ಅಪರೂಪದ ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಲಿದೆ. ಭೂಕುಸಿತ, ಜಲಮಾಲಿನ್ಯ, ನದಿ ಕಣಿವೆಗಳಲ್ಲಿ ಹೂಳು ತುಂಬಲು ಅನುಕೂಲ ಕಲ್ಪಿಸಿದಂತಾಗುತ್ತದೆ. ಸಿಂಹಬಾಲದ ಸಿಂಗಳಿಕ, ಕಾಳಿಂಗ ಸರ್ಪ, ಮಂಗಟ್ಟೆ ಹಕ್ಕಿ, ಕೆಂದಳಿಲು ಮೊದಲಾದ ಅಪರೂಪದ ಪ್ರಾಣಿಗಳ ವಾಸ



> **ಭೂಕಂಪದ ಆತಂಕ**
> **ಸುಮಾರು 18,000 ಟನ್ ಸ್ಫೋಟಕಗಳನ್ನು ಬಳಸಿ ಭೂಗತ ಬಂಡೆಗಳನ್ನು ಒಡೆದು ಸುರಂಗ ಮಾರ್ಗವನ್ನು ಕೊರೆಯಲಾಗುತ್ತದೆ. ಸುಮಾರು 1800 ಅಡಿ ಆಳದವರೆಗೆ ಭೂಮಿಯನ್ನು ಕೊರೆಯಲಾಗುತ್ತದೆ. ಇದರಿಂದ ಈ ಪ್ರದೇಶದಲ್ಲಿ ಭೂಕಂಪನವಾಗುವ ಆತಂಕವಿದೆ. ಜಲಮೂಲಗಳಿಗೆ ಹಾನಿಯಾಗಲಿದೆ ಎಂಬ ವರದಿಯೂ ಇರುವುದರಿಂದ ಇದನ್ನು ಕಾರ್ಯಗತ ಮಾಡದಂತೆ ತಡೆಯುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದರು.**

ಪ್ರದೇಶಕ್ಕೂ ಧಕ್ಕೆಯಾಗಲಿದೆ ಎಂದರು.

ಅಹೋರಾತ್ರಿ ಧರಣಿಯಲ್ಲಿ ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದು, ಸುಮಾರು 500 ಜನ ಭಾಗವಹಿಸಲಿದ್ದಾರೆ. ಇದಕ್ಕೆ ಬರುವ ಸಂಘಟನೆಗಳು ತಮ್ಮ ತಮ್ಮ ಬ್ಯಾನರ್‌ಗಳನ್ನು ತರಬಹುದು ಎಂದು ಹೇಳಿದರು.

ಡಾ.ಬಿ.ಎಂ.ಕುಮಾರಸ್ವಾಮಿ ಮಾತನಾಡಿ, ಪರಿಸರ ಹೋರಾಟಗಾರರು ಯೋಜನೆಯ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿದ್ದು, ಜೂನ್ 10ರೊಳಗೆ ಉತ್ತರಿಸುವಂತೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳಿಗೆ ನೋಟೀಸ್ ಜಾರಿಮಾಡಿದೆ. ನ್ಯಾಯಾಲಯದ ಸೂಚನೆ ಬರುವವರೆಗೆ ಯಾವುದೇ ಕಾಮಗಾರಿಯನ್ನು ಈ ಶರಾವತಿ ಕಣಿವೆಯಲ್ಲಿ ನಡೆಸದಂತೆ ತಾಕೀತು ಮಾಡಿದೆ. ಅಹೋರಾತ್ರಿ ಧರಣಿ ಸಂದರ್ಭದಲ್ಲಿ ಯೋಜನೆ ವಿರುದ್ಧ ಸಹಿ ಸಂಗ್ರಹಣೆಯೂ ನಡೆಯಲಿದೆ. ಪಕ್ಷಾತೀತವಾಗಿ ಹಮ್ಮಿಕೊಂಡಿರುವ ಈ ಹೋರಾಟಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಇನ್ನೋರ್ವ ಹೋರಾಟಗಾರ ಡಾ. ಶ್ರೀಪತಿ ಎಲ್.ಕೆ. ಮಾತನಾಡಿ, ಈಗ ಯೋಜನೆಗೆ ಮೊದಲ ಹಂತದಲ್ಲಿ 10,500 ಕೋಟಿ ರೂ. ವೆಚ್ಚದ ಅಂದಾಜು ಮಾಡಲಾಗಿದೆ. ಮುಂದೆ ಇದು ಪೂರ್ಣವಾಗುವ ಹೊತ್ತಿಗೆ 20,000 ಕೋಟಿ ರೂ.ಗೆ ತಲುಪಬಹುದು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಈ ಸಾಲಿನ ಬಜೆಟ್‌ನಲ್ಲಿ 3000 ಮೆಗಾವ್ಯಾಟ್ ಉತ್ಪಾದನೆಗೆ 3,500 ಕೋಟಿ ರೂ. ವೆಚ್ಚವಾಗಲಿದೆ ಎಂದು ತಿಳಿಸಿದ್ದಾರೆ ಎಂದರು.

ಮುಖ್ಯಮಂತ್ರಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಕೈಬಿಟ್ಟು ಬಜೆಟ್‌ನಲ್ಲಿ ಮಂಡಿಸಿದ ಯೋಜನೆಗಳನ್ನೇ ಮುಂದುವರೆಸಬಹುದು. ಅಲ್ಲದೆ ಪಂಪ್ಡ್ ಸ್ಟೋರೇಜ್‌ನಲ್ಲಿ ಶೇ.77ರಷ್ಟು ಕ್ಷಮತೆಯಿದ್ದು, ಬ್ಯಾಟರಿ ಸ್ಟೋರೇಜ್‌ನಲ್ಲಿ ಶೇ.99ರಷ್ಟು ಕ್ಷಮತೆ ಇರುತ್ತದೆ ಆದ್ದರಿಂದ ಸರ್ಕಾರ ಪರ್ಯಾಯ ಮಾರ್ಗದ ಬಗ್ಗೆ ಚಿಂತನೆ ಮಾಡುವಂತೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಷ್ಟ್ರಭಕ್ತರ ಬಳಗದ ಕೆ.ಈ. ಕಾಂತೇಶ್, ಪರಿಸರ ಹೋರಾಟಗಾರ ಎಸ್.ಬಿ. ಅಶೋಕ್ ಕುಮಾರ್, ನವ್ಯಶ್ರೀ ನಾಗೇಶ್, ಮಹಾದೇವ ಸ್ವಾಮಿ, ಶ್ರೀಕಾಂತ್, ಸುಬ್ಬಣ್ಣ, ಪರಿಸರ ರಮೇಶ್, ಜನಾರ್ಧನ್ ಪೈ ಉಪಸ್ಥಿತರಿದ್ದರು.

ಶ್ರೀ ರಾಮಚಂದ್ರ ಪರಿವಾರ ದೇವತೆ ನೂತನ ಉತ್ಸವ ಮೂರ್ತಿ ಪ್ರತಿಷ್ಠಾಪನೆ

• **ಶಿಕಾರಿಪುರ :** ಇಲ್ಲಿನ ಪ್ರಸಿದ್ದ ಶ್ರೀ ಹುಚ್ಚುರಾಯ ಸ್ವಾಮಿ ದೇವಸ್ಥಾನಕ್ಕೆ ನೂತನ ಶ್ರೀ ರಾಮಚಂದ್ರರ ಪರಿವಾರ ದೇವತೆಯ ಉತ್ಸವ ಮೂರ್ತಿ ಭವ್ಯ ಮೆರವಣಿಗೆಯಲ್ಲಿ ಶನಿವಾರ ಆಗಮಿಸಿದ್ದು ಸಾಂಪ್ರದಾಯಕವಾಗಿ ಉತ್ಸವ ಮೂರ್ತಿಯನ್ನು ಶ್ರದ್ಧಾಭಕ್ತಿಯಿಂದ ಭಕ್ತರು ಸ್ವಾಗತಿಸಿದರು.

ಭಕ್ತರ ಸುದೀರ್ಘ ಕಾಲದ ಶ್ರೀ ರಾಮಚಂದ್ರ ಲಕ್ಷ್ಮಣ ಸೀತಾಮಾತೆ ಹಾಗೂ ಅಂಜನೇಯ ಸ್ವಾಮಿಯ ಉತ್ಸವ ಮೂರ್ತಿಯ ಅಪೇಕ್ಷೆಯನ್ವಯ ಶ್ರೀ ರಾಮಸೇವಾ ಸಮಿತಿ ಕಳೆದ ಕೆಲ ದಿನದಿಂದ ಸಕ್ರೀಯವಾಗಿ ನೂತನ ವಿಗ್ರಹ ನಿರ್ಮಾಣಕ್ಕೆ ಕೈಗೊಂಡ ಸಂಕಲ್ಪದಂತೆ ದಾನಿಗಳ ನೆರವಿನಿಂದ ಅಲ್ಪಾವಧಿಯಲ್ಲಿಯೇ ಉತ್ಸವ ಮೂರ್ತಿ ಶ್ರೀ ಹುಚ್ಚುರಾಯಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಪ್ರತಿಷ್ಠಾಪನೆಯಾಗಿದೆ.

ಅಂದಾಜು 2.5 ಅಡಿ ಎತ್ತರದ ಜತೆಗೆ 60 ಕೆ.ಜಿ ಭಾರದ ಪಂಚಲೋಹದಿಂದ ನಿರ್ಮಾಣವಾಗಿರುವ ಸುಂದರ ಭವ್ಯ ಶ್ರೀ ರಾಮಚಂದ್ರರ ಪರಿವಾರ ದೇವತೆಯ ಆತ್ಯಾಕರ್ಷಕ ಉತ್ಸವ



ಮೂರ್ತಿ ಬೆಂಗಳೂರಿನಿಂದ ಆಗಮಿಸಿದ್ದು ಸಂಪ್ರದಾಯಬದ್ದವಾಗಿ ಋತ್ವಿಜರ ಪೂಜೆಯ ನಂತರದಲ್ಲಿ ನಡೆದ ಭವ್ಯ ಮೆರವಣಿಗೆಯಲ್ಲಿ ಬಸ್ ನಿಲ್ದಾಣದ ಮೂಲಕ ಪಟ್ಟಣದ ಪ್ರಮುಖ ಬೀದಿಯಲ್ಲಿ ಸಂಚರಿಸಿ ರಾಜಬೀದಿಯಿಂದ ದೇವಾಲಯವನ್ನು ಪ್ರವೇಶಿಸಲಾಯಿತು. ಪಟಾಕಿ, ಮಂಗಳವಾದ್ಯದ ಮೂಲಕ ಸಾರೋಟಿನಲ್ಲಿ ನಡೆದ ಉತ್ಸವ ಮೂರ್ತಿಯ ಮೆರವಣಿಗೆಯನ್ನು ದೇವಾಲಯದಲ್ಲಿ ನೂರಾರು ಭಕ್ತರ ಜತೆಗೆ ದೇವಾಲಯದ ಪ್ರಧಾನ ಅರ್ಚಕ ಪುರೋಹಿತ್ ಉಮೇಶ್ ಭಟ್, ವೆಂಕಟೇಶ್ ಮತ್ತಿತರರು ಸ್ವಾಗತಿಸಿದರು.

ನಂತರದಲ್ಲಿ ದೇವಾಲಯದಲ್ಲಿ ಮಹಾ ಮಂಗಳಾರತಿ ಜತೆಗೆ ವಿವಿಧ ಧಾರ್ಮಿಕ ಪೂಜೆಯನ್ನು ನೆರವೇರಿಸಲಾಯಿತು. ನೆರೆದಿದ್ದ ಭಕ್ತ ವರ್ಗಕ್ಕೆ ಸಿಹಿ ವಿತರಿಸಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ರಾಮೋತ್ಸವ ಸಮಿತಿಯ ಸೋಮಶೇಖರ್, ವಿಜಯಕುಮಾರ್, ಗೋಪಿ ಚಕ್ರವರ್ತಿ, ಗಿರೀಶ್ ನಾಡಿಗ್, ಋತ್ವಿಜರಾದ ಪ್ರದೀಪ ಕುಲಕರ್ಣಿ, ಗಿರೀಶ ಭಟ್, ಹರೀಶ್ ಜೋಯ್ಸ್, ನರಸಿಂಹ ಜೋಯ್ಸ್ ತಾಲೂಕು ವಿಪ್ರ ಸಮಾಜದ ಮುಖಂಡ ವಸಂತಮಾಧವ, ಪ್ರವೀಣ ಕೆ.ಎ, ಕಾಶೀಬಾಯಿ, ರಮೇಶ್ ಹೊಳ್ಳ, ಪಲ್ಲವಿ, ವಸಂತಿ, ಸುಕನ್ಯಾ, ಸುಷ್ಮಾ, ದಿವ್ಯ, ಅನ್ನಪೂರ್ಣ,ಶ್ರೀಲಕ್ಷ್ಮಿ ಹಾಜರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿಕೆ

ಶಾಲಾ ಶಿಕ್ಷಣದಲ್ಲಿ ರಂಗ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ

• **ಶಿವಮೊಗ್ಗ :** ಮಕ್ಕಳ ಮಾನಸಿಕ ವಿಕಸನಕ್ಕಾಗಿ ರಂಗಶಿಕ್ಷಣ ಹಾಗೂ ನೈತಿಕ ವಿಜ್ಞಾನವನ್ನ ಪಠ್ಯದಲ್ಲಿ ಅಳವಡಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದರು.

ಶಿವಮೊಗ್ಗ ರಂಗಾಯಣದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ಪಿ. ಲಂಕೇಶ್ ಬಯಲು ರಂಗಮಂದಿರವನ್ನು ಶನಿವಾರ ಉದ್ಘಾಟಿಸಿ ಮಾತನಾಡಿ, ದಶಕಗಳಿಂದ ಸ್ಥಗಿತಗೊಂಡಿರುವ ನೈತಿಕ ವಿಜ್ಞಾನ ವಿಷಯವನ್ನು ಈ ವರ್ಷದಿಂದಲೇ ಮರು ಜಾರಿಗೊಳಿಸಲಾಗುತ್ತಿದೆ ಎಂದರು.

ನೈತಿಕ ವಿಜ್ಞಾನವನ್ನು 1 ರಿಂದ 10 ನೇ ತರಗತಿಯವರೆಗೆ ಅಳವಡಿಸಲಾಗುತ್ತಿದ್ದು, ಈಗಾಗಲೇ ಪುಸ್ತಕ ಮುದ್ರಣಕ್ಕೆ ಹೋಗಿವೆ. ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಇದರ ಮೂಲ ಉದ್ದೇಶವಾಗಿದೆ ಎಂದರು.

ಕಲೆ ಮತ್ತು ಸಂಸ್ಕೃತಿಗೆ ವಿಶೇಷ ಒತ್ತು ನೀಡುವ ನಿಟ್ಟಿನಲ್ಲಿ ಮೈಸೂರಿನಲ್ಲಿ ಪ್ರತ್ಯೇಕ ಕಲೆ ಕರ್ನಾಟಕ ಪಬ್ಲಿಕ್ ಶಾಲೆ



ಆರಂಭಿಸಲು ಯೋಜನೆ ರೂಪಿಸಲಾಗಿದೆ. ಇಲ್ಲಿನ ಹಾಸ್ಟೆಲ್ ವ್ಯವಸ್ಥೆಯಡಿ ಪ್ರತಿಭಾವಂತ ಮಕ್ಕಳಿಗೆ ರಂಗಭೂಮಿ, ಸಂಗೀತ ಮತ್ತು ಜಾನಪದ ಕಲೆಗಳ ತರಬೇತಿ ನೀಡಲಾಗುವುದು ಎಂದರು.

ಇಂದಿನ ರೀಲ್ಸ್ ಮತ್ತು ಸಾಮಾಜಿಕ ಜಾಲತಾಣಗಳ ಹಾವಳಿಯಿಂದ ಮಕ್ಕಳು ದಾರಿ ತಪ್ಪದಂತೆ ತಡೆಯಲು ಸಾಂಸ್ಕೃತಿಕ ಚಟುವಟಿಕೆಗಳು ಸಹಕಾರಿಯಾಗಿದ್ದು ರಂಗ ಶಿಕ್ಷಣಕ್ಕೆ ಉತ್ತೇಜಿಸಿ ಅನುಷ್ಠಾನ ಮಾಡಬೇಕಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ.ಮಂಜುನಾಥ್ ಸ್ವಾಮಿ ಬಿ.ಎಸ್ ಮಾತನಾಡಿ, ಯಾವುದೇ ನಾಡಿನ ನಿಜವಾದ ಶ್ರೀಮಂತಿಕೆ ಅಲ್ಲಿನ ಪ್ರಕೃತಿ ಮತ್ತು ಸಂಸ್ಕೃತಿಯಲ್ಲಿ ಅಡಗಿರುತ್ತದೆ. ಇಂತಹ ಸಂಸ್ಕೃತಿಯನ್ನು ಪೋಷಿಸಿ ಬೆಳೆಸುವಲ್ಲಿ ಶಿವಮೊಗ್ಗ ರಂಗಾಯಣದ ಕೊಡುಗೆ ಅಪಾರವಾಗಿದೆ ಎಂದರು.

ಶಾಸಕರಾದ ಆರಗ ಜ್ಞಾನೇಂದ್ರ, ನಾಟಕ ಅಕಾಡೆಮಿ ಅಧ್ಯಕ್ಷ ನಾಗರಾಜ ಮೂರ್ತಿ, ರಂಗಾಯಣ ಮಾಜಿ ನಿರ್ದೇಶಕರಾದ ಸಂದೇಶ್ ಜವಳಿ, ಎಂ.ಗಣೇಶ್, ಇಕ್ಬಾಲ್ ಅಹ್ಮದ್, ಮಲ್ಲಿಕಾರ್ಜುನ ಕಡಕೋಳ, ಚಂದ್ರೇಗೌಡರು, ಕಾಂತೇಶ್ ಕದರಮಂಡಲಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಉಮೇಶ್, ರಂಗಾಯಣದ ಆಡಳಿತಾಧಿಕಾರಿ ಡಾ.ಶೈಲಜಾ ಇದ್ದರು.

ನಾಗರಿಕ ಹಿತರಕ್ಷಣಾ ವೇದಿಕೆ ಪ್ರಧಾನ ಕಾರ್ಯದರ್ಶಿ ವಸಂತ ಕುಮಾರ್ ಕಳವಳ

ಮಲೆನಾಡಿನಲ್ಲಿ 500 ಅಡಿಗಿಂತ ಹೆಚ್ಚು ಆಳ ಬಾವಿ ಕೊರೆಯುವ ಅನಿವಾರ್ಯ ಸೃಷ್ಟಿ

• **ಶಿವಮೊಗ್ಗ:** ಮಲೆನಾಡಿನಲ್ಲಿ 500 ಅಡಿಗಿಂತ ಹೆಚ್ಚು ಆಳಕ್ಕೆ ಕೊಳವೆ ಬಾವಿ ಕೊರೆಯುವ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ನಾಗರಿಕ ಹಿತರಕ್ಷಣಾ ವೇದಿಕೆ ಪ್ರಧಾನ ಕಾರ್ಯದರ್ಶಿ ವಸಂತ ಕುಮಾರ್ ಕಳವಳ ವ್ಯಕ್ತಪಡಿಸಿದರು.

20ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಪ್ರಕೃತಿ ಒಡಲ ಚಿಂತನೆ ಗೋಷ್ಠಿಯಲ್ಲಿ ಬರಿದಾಗುತ್ತಿರುವ ನದಿ ಒಡಲು ವಿಷಯ ಕುರಿತಾಗಿ ಮಾತನಾಡಿದರು.

ಮಲೆನಾಡಿನ ಒಡಲ ಬೆಂಕಿಯಿಂದ ಜೀವ ಜಲವು ಬರಿದಾಗುತ್ತಿದ್ದು, ಸಿಹಿ ನೀರಿನಲ್ಲಿದ್ದ ಸುಮಾರು 48ಕ್ಕೂ ಹೆಚ್ಚು ಪ್ರಭೇದಗಳ ಸಂತತಿ ಕಡಿಮೆಯಾಗಿದೆ. ಪರಿಸರ ತನ್ನ ಸಮತೋಲನ ಕಳೆದುಕೊಂಡಿದೆ. ಕಂಪದ ಗದ್ದೆಯಲ್ಲಿ ಕಾಣುತ್ತಿದ್ದ ತೇವಾಂಶವೇ ಒಣಗಿ ಹೋಗಿದೆ. ಪಶ್ಚಿಮಘಟ್ಟಕ್ಕೆ ನೀರಿನ ಗೋಪುರ ಎಂದು ಕರೆಯಲಾಗುತ್ತದೆ. ಅಂತಹ ಪ್ರಕೃತಿ ಎಲ್ಲಿದೆ ಈವಾಗ. ಬರಿದಾದ ನದಿಯ ಪಕ್ಕದಲ್ಲಿ ಬಾವಿ ತೋಡಿ ತೋಟ ನಿರ್ವಹಿಸುವ ಪರಿಸ್ಥಿತಿ ಬಂದಿದೆ ಎಂದರು.

ಪ್ರತಿ ವರ್ಷ ತುಂಗೆ ಹಾಗೂ ಭದ್ರಾ ನದಿಯಲ್ಲಿ ಶೇ.24.16 ರಷ್ಟು ಬತ್ತಿ ಹೋಗುತ್ತಿದೆ. 160 ಕಿಮೀ ಹರಿಯಬೇಕಿದ್ದ ಶರಾವತಿ ನದಿ, ಡ್ಯಾಂಗಳು



> **ಸರ್ಕಾರದ ಅಭಿವೃದ್ಧಿ ನೀತಿಗಳು ಬದಲಾಗಬೇಕಿದೆ. ಒಳ್ಳೆಯ ಪರಿಸರ ನೀಡುವುದು ಅಭಿವೃದ್ಧಿ ಎಂಬ ಪರಿಕಲ್ಪನೆಯೇ, ಆಳುವ ಜನಪ್ರತಿನಿಧಿಗಳಿಗಿಲ್ಲ. ಪರಿಸರ ಉಳಿಸುವ ಯಾವ ಯೋಜನೆಗಳು ರೂಪಗೊಂಡಿಲ್ಲ. ನಾಗರೀಕರಾಗಿ ನಾವು ಕೂಡ ಒಂದಿಷ್ಟು ಕಾಡು ಕೊಡಿ ಎಂದು ಸರ್ಕಾರಕ್ಕೆ ಹಕ್ಕೊತ್ತಾಯ ಮಾಡುವ ಅನಿವಾರ್ಯತೆ ಇದೆ. ಹೀಗೆ ಪರಿಸರದ ಮೇಲೆ ಅಭಿವೃದ್ಧಿಯ ಪ್ರಹಾರ ಮುಂದುವರೆದಲ್ಲಿ, ಭವಿಷ್ಯದಲ್ಲಿ ತುಂಗೆ, ಶರಾವತಿ ನದಿಗಳು ಸಂಪೂರ್ಣ ನಶಿಸಿ ಹೋಗಲಿದೆ ಎಂದರು.**

ಎಂಬ ಅಭಿವೃದ್ಧಿ ಪ್ರಹಾರಕ್ಕೆ ಸಿಲುಕಿ ಕೇವಲ 8 ಕಿಮೀ ಮಾತ್ರ ಹರಿಯುತ್ತಿದೆ. ಕುಮದ್ವತಿ ನದಿ ಮಳೆಗಾಲದಲ್ಲಿ ಮಾತ್ರ ಹರಿಯುವ ನದಿಯಾಗಿದೆ. ಮಲೆನಾಡಿನಲ್ಲಿ ಸುಮಾರು 75 ಸಾವಿರ ಎಕರೆ ಕಾಡು, ಕೃಷಿ ಭೂಮಿಯಾಗಿ ಪರಿವರ್ತನೆಗೊಂಡಿದೆ. ಒಂದು ಮರ 15 ಸಾವಿರ ಲೀಟರ್ ಹಿಡಿದು ತನ್ನ ಅಂತರ್ಜಲದಲ್ಲಿ ಶೇಖರಣೆ ಮಾಡಿಕೊಳ್ಳುತ್ತದೆ. ಕೃಷಿ ಭೂಮಿಯ ಪರಿವರ್ತನೆಯಿಂದಾಗಿ 20 ಲಕ್ಷ ಕೋಟಿ ನೀರಿನ ಅಂತರ್ಜಲ ಕಳೆದುಕೊಂಡಿದ್ದೇವೆ ಎಂದರು.

ತಜ್ಞ ಡಾ.ವಿ.ಎಲ್.ಎಸ್.ಕುಮಾರ್ ಮಾತನಾಡಿ, ಶಿವಮೊಗ್ಗ ನಗರಕ್ಕೆ ಪ್ರವೇಶಿಸುವ ತುಂಗಾ ನದಿ, ಚರಂಡಿ ನೀರಿಗಿಂತ ಕಲುಷಿತವಾಗಿ ಹರಿಯುತ್ತಿದೆ. ಶಿವಮೊಗ್ಗ ನಗರದ ಗಾಳಿ ಅತ್ಯಂತ ಕೆಟ್ಟ ರೂಪದಲ್ಲಿ ಮಾಲಿನ್ಯಗೊಂಡಿದೆ. ದೆಹಲಿ, ಹರಿಯಾಣದಲ್ಲಿ ಹೆಚ್ಚು ಮಾಲಿನ್ಯ ಸೂಸುವ ನಿಷೇಧಗೊಂಡ ವಾಹನಗಳು, ಶಿವಮೊಗ್ಗ ನಗರದಲ್ಲಿ ಅನಾಯಾಸವಾಗಿ ಓಡಾಡುತ್ತಿವೆ. ರಾಸಾಯನಿಕ ಗೊಬ್ಬರದ ಬಳಕೆಯಿಂದ ಪರಿಸರ ಸಂಪೂರ್ಣ ಹಾಳಾಗಿದೆ. ತೋಟದ ಸುತ್ತಮುತ್ತ ಅಗಲವಾದ ಎಲೆಗಳ ಮರಗಳನ್ನು ನೆಡಲು ಪ್ರಯತ್ನಿಸಿ. ಅದು ಹೆಚ್ಚು ಆಮ್ಲಜನಕ ಉತ್ಪಾದಿಸುತ್ತದೆ. ಹುಟ್ಟು ಹಬ್ಬದ ದಿನ ಗಿಡಗಳನ್ನು ನೆಡಲು ಆಸಕ್ತರಾಗಿ ಎಂದು ಹೇಳಿದರು.

ಸಾಗರದ ಬಿ.ಆರ್.ಜಯಂತ್ ಮಾತನಾಡಿ, ಪರಿಸರ ಕಲುಷಿತಗೊಂಡಿದ್ದು ಕೇವಲ ಅರಣ್ಯ ನಾಶದಿಂದ ಮಾತ್ರವಲ್ಲ, ಆಧುನಿಕತೆಯ ಅನೇಕ ನಡವಳಿಕೆಗಳು ಕಾರಣ. ಸಮೂಹದಲ್ಲಿ ಸ್ವಚ್ಛತೆಯ ಸಂಸ್ಕೃತಿ ಇಲ್ಲದೆ ಇರುವ ನಡವಳಿಕೆಗಳು, ಪರಿಸರ ಮಾಲಿನ್ಯದ ಬಗ್ಗೆ ಹೆಚ್ಚು ಆತಂಕ ಪಡುವ ಅನಿವಾರ್ಯತೆ ಸೃಷ್ಟಿಯಾಗಿದೆ. ಸ್ವಚ್ಛತೆಯೆ ದೈವತ್ವ ಎಂಬ ಸಂಸ್ಕೃತಿ ಅಳವಡಿಸಿಕೊಳ್ಳಬೇಕೆಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಡಿ.ಮಂಜುನಾಥ ಅಧ್ಯಕ್ಷತೆ ವಹಿಸಿದ್ದರು. ತೀರ್ಥಹಳ್ಳಿ ಕಸಾಪ ಅಧ್ಯಕ್ಷ ಟಿ.ಕೆ.ರಮೇಶ್ ಶೆಟ್ಟಿ ನಿರೂಪಿಸಿದರು.

ಜಿಲ್ಲಾ 20ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಸಚಿವ ಮಧು ಬಂಗಾರಪ್ಪ ಭರವಸೆ

ಕನ್ನಡದ ಕೆಲಸಗಳಿಗೆ ಸರ್ಕಾರದಿಂದ ಅನುದಾನಕ್ಕೆ ಯತ್ನ

• **ಶಿವಮೊಗ್ಗ :** ಕನ್ನಡದ ಕೆಲಸಗಳಿಗೆ ಸರ್ಕಾರದಿಂದ ಅನುದಾನ ಕೊಡಿಸಲು ಪ್ರಾಮಾಣಿಕ ಯತ್ನ ಮಾಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದರು.

ಜಿಲ್ಲಾ ಕಸಾಪ ವತಿಯಿಂದ ಸಾಹಿತ್ಯ ಗ್ರಾಮದಲ್ಲಿ ಶನಿವಾರ ಆಯೋಜಿಸಿದ್ದ ಜಿಲ್ಲಾ 20ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಸಾನಿಗಳಿಗೆ ಗೌರವ ಸಮರ್ಪಣೆ ಮಾಡಿ ಮಾತನಾಡಿದರು.

ಸಾಹಿತ್ಯ ಗ್ರಾಮದ ಮೂಲ ಸೌಕರ್ಯ ಹಾಗೂ ಇತರೆ ಯೋಜನೆಗಳಿಗಾಗಿ ಜಿಲ್ಲಾ ಕಸಾಪ 2.5 ಕೋಟಿ ರೂ. ಬೇಡಿಕೆ ಇಟ್ಟಿದ್ದು, ಸರ್ಕಾರಕ್ಕೆ ಇದು ದೊಡ್ಡ ಮೊತ್ತವಲ್ಲ. ಕುವೆಂಪು ನಾಡಿನಲ್ಲಿ ಕನ್ನಡ ಕೆಲಸ ಸುಗಮವಾಗಿ ನಡೆಯಬೇಕಿದೆ. ಅಧ್ಯಕ್ಷರ ನೇತೃತ್ವದ ತಂಡ ಬೆಂಗಳೂರಿಗೆ ಬಂದರೆ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ ಅನುದಾನ ಕೊಡಿಸುವ ಹಾಗೂ ಸಮ್ಮೇಳನಕ್ಕೆ ವೈಯಕ್ತಿಕವಾಗಿ 1.5 ಲಕ್ಷ ರೂ ನೀಡುವ ಭರವಸೆ ನೀಡಿದರು.

ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಕಡ್ಡಾಯ ಮಾಡಬೇಕೆಂಬ ಒತ್ತಾಯವಿದೆ. ಆದರೆ ಮಾಧ್ಯಮ ಆಯ್ಕೆ ಪೋಷಕರ ಆಯ್ಕೆ ಎಂದು ನ್ಯಾಯಾಲಯ ಹೇಳಿದೆ. ಹೀಗಾಗಿ ಕನ್ನಡ ಉಳಿಸುವ ನಿಟ್ಟಿನಲ್ಲಿ ಪೋಷಕರೇ ಕಾಳಜಿ ವಹಿಸಬೇಕಿದೆ ಎಂದರು.



ಸಮ್ಮೇಳನದ ನಿರ್ಣಯಗಳು

- ಪ್ರಾಥಮಿಕದಿಂದ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಶಿಕ್ಷಣದವರೆಗೆ ಕನ್ನಡ ಭಾಷೆಗೆ ಮೊದಲ ಆದ್ಯತೆ ನೀಡುವುದು.
- ಪದೇ ಪದೇ ಪಠ್ಯಕ್ರಮ ಬದಲಾವಣೆ ಬೇಡ
- ಕನ್ನಡದ ಸಾಹಿತ್ಯ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಆಯೋಜನೆ ಹಾಗೂ ಭಾಗವಹಿಸುವಿಕೆಗೆ ಶಿಕ್ಷಣ ಇಲಾಖೆ ಯಾವುದೇ ನಿರ್ಬಂಧಗಳನ್ನು ವಿಧಿಸಬಾರದು.
- ಕೇಂದ್ರ ಕಸಾಪದಲ್ಲಿ ನಡೆದಿರುವ ಭ್ರಷ್ಟಾಚಾರ ಆರೋಪಿಗಳ ವಿರುದ್ಧ ಸರ್ಕಾರವು ಕಠಿಣ ಕ್ರಮ ಕೈಗೊಳ್ಳಬೇಕು.
- ಮಲೆನಾಡಿನ ಪರಿಸರಕ್ಕೆ ಪೂರಕವಾದ ಅಭಿವೃದ್ಧಿ ನೀತಿ ರೂಪಿಸಬೇಕು
- ಸಾಹಿತ್ಯ ಗ್ರಾಮ ಯೋಜನೆಗೆ ಅನುದಾನ ನೀಡುವುದು
- ಆಡಳಿತ ಭಾಷೆಯಾಗಿ ಕನ್ನಡ ಬಳಕೆ ಕಡ್ಡಾಯಗೊಳಿಸಬೇಕು.
- ಹೊಸನಗರ ಪ್ರತ್ಯೇಕ ವಿಧಾನಸಭಾ ಕ್ಷೇತ್ರ ಘೋಷಿಸಬೇಕು.
- ಡಿಜಿಟಲ್ ವೇದಿಕೆಗಳಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ನೀಡುವುದು
- ವೈದ್ಯಕೀಯ ಶಿಕ್ಷಣದಲ್ಲಿ, ಆಯಾ ಕೋಟಾದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಉಚಿತ ವೈದ್ಯಕೀಯ ಅಧ್ಯಯನಕ್ಕೆ ಅವಕಾಶ ಕಲ್ಪಿಸುವುದು
- ★1 ರಿಂದ 5 ನೇ ತರಗತಿವರೆಗೆ ಏಕರೂಪ ಶಿಕ್ಷಣ ವ್ಯವಸ್ಥೆ ಜಾರಿಗೊಳಿಸುವುದು

ಬಳಿಕ ನಡೆದ ಸಮಾರೋಪ ಸಮಾರಂಭದಲ್ಲಿ ಹಿರಿಯ ಸಾಹಿತಿ ಡಾ. ಪದ್ಮ ಪ್ರಸಾದ್ ಸಮಾರೋಪ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷೆ ವಿಜಯಶ್ರೀ, ಎಂಎಲ್‌ಸಿ ಡಿ.ಎಸ್.ಅರುಣ್, ರೈತ ಸಂಘದ ರಾಜ್ಯಾಧ್ಯಕ್ಷ ಎಚ್.ಆರ್. ಬಸವರಾಜಪ್ಪ, ಜಿಪಂ ಮಾಜಿ ಅಧ್ಯಕ್ಷ ಕಲಗೋಡು ರತ್ನಾಕರ್, ಜಿಲ್ಲಾ ಕಸಾಪ ಅಧ್ಯಕ್ಷ ಡಿ. ಮಂಜುನಾಥ್ ಇದ್ದರು.

ರಾಜಕಾರಣಿಗಳಿಂದ ಸರ್ಕಾರಿ ಶಾಲೆಗಳ ಉದ್ಧಾರ ನಿರೀಕ್ಷಿಸುವಂತಿಲ್ಲ: ಎಂ.ಎಸ್. ಮೂರ್ತಿ

• **ಶಿವಮೊಗ್ಗ :** ಬಹುತೇಕ ಎಲ್ಲಾ ರಾಜಕಾರಣಿಗಳು ಶಿಕ್ಷಣವನ್ನೇ ವ್ಯವಹಾರ ಮಾಡಿಕೊಂಡಿರುವುದರಿಂದ ಯಾವ ರಾಜಕಾರಣಿಯಿಂದಲೂ ಸರ್ಕಾರಿ ಶಾಲೆಗಳ ಉದ್ಧಾರ ನಿರೀಕ್ಷಿಸುವಂತಿಲ್ಲವೆಂದು ಚಿತ್ರಕಲಾವಿದ, ಬರಹಗಾರ ಎಂ.ಎಸ್.ಮೂರ್ತಿ ಹೇಳಿದರು.

ಜಿಲ್ಲಾ ಕಸಾಪ ವತಿಯಿಂದ ಸಾಹಿತ್ಯ ಗ್ರಾಮದಲ್ಲಿ ಆಯೋಜಿಸಿರುವ ಜಿಲ್ಲಾ 20 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶನಿವಾರ ಕನ್ನಡ ಶಾಲೆಗಳು ಈ ಹೊತ್ತಿನ ಸಮಸ್ಯೆಗಳ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಅರಿವು ಹಾಗೂ ಎಚ್ಚರಿಕೆಯಿಂದ ಭಾಷೆ ಮತ್ತು ಕನ್ನಡ ಶಾಲೆಗಳ ಉಳಿಸುವ ಕೆಲಸವನ್ನು ನಾವೇ ಮಾಡಬೇಕಿದೆ. ಗುಣಮಟ್ಟದಲ್ಲಿ ಸರ್ಕಾರಿ ಶಾಲೆಗಳು ನಡೆದರೆ ರಾಜಕಾರಣಿಗಳಿಗೆ ತೊಂದರೆಯಾಗಲಿದೆ. ಹೀಗಾಗಿ ಸರ್ಕಾರಿ ಶಾಲೆಗಳು ಪ್ರಯೋಗಶಾಲೆಗಳಂತಾಗಿವೆ. ಶಿಕ್ಷಕರೂ ಕೂಡ ಇದರಿಂದ ಹೊರತಾಗಿಲ್ಲ ಎಂದರು.

ಈ ನಾಡಿನಲ್ಲಿ ಹಲವಾರು ಚಳವಳಿಗಳು ರೂಪುಗೊಂಡಿವೆ. ಬದಲಾವಣೆಯೂ ಆಗಿದೆ. ಆದರೆ ಮಕ್ಕಳ ಭವಿಷ್ಯದ ಕುರಿತಾಗಿ ಯಾವ ಚಳವಳಿಗೂ ರೂಪುಗೊಂಡಿಲ್ಲ.ಎಲ್ಲರೂ ತಮ್ಮ ಮಕ್ಕಳು ಡಿಸ್ಟಿಂಗ್‌ಶನ್‌ನಲ್ಲಿ ಪಾಸ್ ಆಗಬೇಕೆಂದು ಬಯಸುತ್ತಾರೆ. ಡಿಸ್ಟಿಂಗ್‌ಶನ್‌ನಲ್ಲಿ ಪಾಸಾದವರು ಈ ದೇಶವನ್ನೇ ಬಿಟ್ಟಿದ್ದಾರೆ. 35-38 ಅಂಕ ಪಡೆದವರು ಈ ರಾಷ್ಟ್ರದಲ್ಲಿಯೇ ಇದ್ದಾರೆ. ಡಿಸ್ಟಿಂಗ್‌ಶನ್‌ನಲ್ಲಿ ಪಾಸಾದವರಿಗೆ ಆತ್ಮ ಸ್ಥೈರ್ಯ ಕಡಿಮೆ. ಅವರಿಗೆ ಸೆಲೆಕ್ಟಿವ್ ಆದ ಕೆಲಸವೇ ಬೇಕಿದೆ. ಆದರೆ ಕಡಿಮೆ ಅಂಕಪಡೆದವರಿಗೆ ಆತ್ಮಸ್ಥೈರ್ಯ ಹೆಚ್ಚು, ಇವರು ಯಾವುದೇ ಕೆಲಸ ಮಾಡಿ ಅಥವಾ ಸ್ವಯಂ ಉದ್ಯಮ ಮಾಡಿ ಬದುಕುವ ಆತ್ಮಸ್ಥೈರ್ಯವಿರುತ್ತದೆ ಎಂದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಾಬಲೇಶ್ವರ ಹೆಗಡೆ ಮಾತನಾಡಿ, ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯ ಕೊಡಬೇಕು. ಕೆಪಿ ಶಾಲೆಗಳಿಗೆ ಹೆಚ್ಚು ಮಕ್ಕಳನ್ನು ಸೇರಿಸಿದರೆ ವೈಯಕ್ತಿವಾಗಿ ಗಮನ ನೀಡಲು ಸಾಧ್ಯವಾಗುವುದಿಲ್ಲ, ಸವಾಲುಗಳನ್ನು ಮೆಟ್ಟಿ ನಿಲ್ಲುವ ಗುಣಾತ್ಮಕ ಶಿಕ್ಷಣ ನೀಡಲು ರಾಜಕೀಯ ಇಚ್ಛಾಶಕ್ತಿ ಬೇಕಿದೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಅಶ್ವಿನ್ ಕುಮಾರ್ ಮಾತನಾಡಿ, ಇಡೀ ದೇಶದಲ್ಲಿ ಏಕರೂಪದ ಶಿಕ್ಷಣ ಜಾರಿಗೆ ಬರಬೇಕಿದೆ. ಸರ್ಕಾರಿ ಶಾಲೆಗಳನ್ನು ಪ್ರಯೋಗ ಶಾಲೆಗಳನ್ನಾಗಿ ಮಾಡಿಕೊಂಡು ಮಕ್ಕಳ ಹಾಗೂ ಶಿಕ್ಷಕರನ್ನು ಶೋಷಣೆ ಮಾಡುವುದನ್ನು ನಿಲ್ಲಿಸಬೇಕಿದೆ. ಕನ್ನಡ ಮತ್ತು ಇಂಗ್ಲೀಷನ್ನು ಕಲಿಸಬೇಕಿದೆ ಎಂದರು. ವೇದಿಕೆಯಲ್ಲಿ ಶಿಕ್ಷಕರಾದ ರಾಮಾಚಾರಿ, ಶಿವರಾಂ ಇದ್ದರು.

ಭಾರತೀಯ ಜನತಾ ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ವಾಗ್ದಾಳಿ

ದಾವಣಗೆರೆ ಸಂಸದರಿಗೆ ಮಾಧ್ಯಮಗಳಲ್ಲಿ ಪ್ರಚಲಿತರಾಗಬೇಕಂತ ಆಸೆಯಿರಬೇಕು

ದಾವಣಗೆರೆ: ದಾವಣಗೆರೆ ಸಂಸದರಾದ ಪ್ರಭಾ ಮಲ್ಲಿಕಾರ್ಜುನ್ ಅವರು ಅಭಿವೃದ್ಧಿ ಮಾಡೋದು ಬಿಟ್ಟು ಮಾಧ್ಯಮಗಳಲ್ಲಿ ಪ್ರಚಲಿತರಾಗಬೇಕಂತ ಆಸೆ ಇರಬೇಕು. ಹಾಗಾಗಿ ಕೇಂದ್ರ ಸರ್ಕಾರದ ವಿರುದ್ಧ ಸುಳ್ಳು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ದಾವಣಗೆರೆ ಜಿಲ್ಲಾಧಿಕಾರಿಗಳು ಸಿಲಿಂಡರ್ ಕೊರತೆ ಇಲ್ಲ ಅಂತ ಸ್ಪಷ್ಟಪಡಿಸಿದ್ದಾರೆ. ಆದರೆ ಸಂಸದರು ದೆಹಲಿಯಲ್ಲಿ ಸಿಲಿಂಡರ್ ಕೊರತೆ ಬಗ್ಗೆ ಮಾತನಾಡುತ್ತಾರೆ. ಸುಳ್ಳು ಹೇಳಿಕೆ ಮತ್ತು ಹಿಂದುಗಳ ವಿರುದ್ಧ ಹೇಳಿಕೆ ಕೊಡುವುದನ್ನು ಬಿಡಬೇಕು ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ವಾಗ್ದಾಳಿ ನಡೆಸಿದರು.

ನಗರದ ಗಡಿಯಾರ ಕಂಬದ ಬಳಿ ಶನಿವಾರ ಭಾರತೀಯ ಜನತಾ ಪಕ್ಷದ ಮಹಿಳಾ ಮೋರ್ಚಾದ ವತಿಯಿಂದ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಅವರ ಸಿಲೆಂಡರ್ ಕೊರತೆ ಹೇಳಿಕೆ ಖಂಡಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು.



ದಾವಣಗೆರೆಯಲ್ಲಿ ದುರ್ಗಾಂಬಿಕಾ ದೇವಸ್ಥಾನದಲ್ಲಿ ದೀಪವನ್ನು ಹಚ್ಚುತ್ತಾರೆ. ತಮಿಳುನಾಡಿನ ಬೆಟ್ಟದ ಮೇಲೆ ತಿರುವನಂತಪುರ ದೇವಸ್ಥಾನದಲ್ಲಿ ದೀಪ ಹಚ್ಚುವ ಆದೇಶ ಮಾಡಿದ ಮೊದಲ ನ್ಯಾಯಾಧೀಶರ ವಿರುದ್ಧ ಪದಚ್ಯುತಿ ಮಾಡಲು ಮೊದಲು ಸಹಿ ಮಾಡಿರುತ್ತಾರೆ. ಈ ತರದ ಇಬ್ಬದಿ ನೀತಿಯ ರಾಜಕಾರಣವನ್ನು ಮಾಡುವುದು ತಮಗೆ ಶೋಭೆ ತರುವುದಿಲ್ಲ.

■ **ಯಶವಂತರಾವ್ ಜಾಧವ್, ಮಾಜಿ ಜಿಲ್ಲಾಧ್ಯಕ್ಷ ಭಾಜಪ**

ಯುದ್ಧದ ಸಂದರ್ಭದಲ್ಲಿ ಪೆಟ್ರೋಲ್ ಸೇರಿದಂತೆ ಅಗತ್ಯ ವಸ್ತುಗಳಿಗೆ ಸಂಬಂಧಿಸಿದಂತೆ ಆಡಚಣೆಗಳು ಆಗುವುದು ಸಾಮಾನ್ಯ. ಈ ಸಮಸ್ಯೆಯನ್ನು ಎಲ್ಲಾ ದೇಶಗಳು ಎದುರಿಸುತ್ತಿದೆ. ರಾಜ್ಯ ಸರ್ಕಾರದಿಂದ ಸರ್ವರ್ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿಲ್ಲ, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಕೊಡಲು ಸಹ ಯೋಗ್ಯತೆಯಿಲ್ಲ, ಸರ್ಕಾರಿ ನೌಕರರಿಗೆ ಸಂಬಳ ಕೊಡುವ ಶಕ್ತಿಯಿಲ್ಲ, ಜಿಲ್ಲೆಯ ಸಮಸ್ಯೆಗಳ ಬಗ್ಗೆ ಮಾತನಾಡದ ಸಂಸದರು ಜಾಗತಿಕ ಸಮಸ್ಯೆ ಕುರಿತು ಇಂದು ಮಾತನಾಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಶ್ಯಾಮ್ ಸಿದ್ದಪ್ಪ, ಗಾಯಿತ್ರಿ ಸಿದ್ದೇಶ್ವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾತಿ ವೀರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭಾಗ್ಯ ಪಿಸಾಳೆ, ಚೇತನ ಶಿವಕುಮಾರ್, ಮಾಜಿ ಧೂಡಾ ಸದಸ್ಯರಾದ ದೇವಿರಮ್ಮ, ಗೌರಮ್ಮ ಪಾಟೀಲ್, ರೇಣುಕಾ ಕೃಷ್ಣ, ನೀತಾ ನಂದೀಶ್, ಮಂಜುಳಾ ಇಟಗಿ, ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ವೀಣಾ ನಂಜಪ್ಪ, ಸೀಮಾ, ಶಾಂತಮ್ಮ, ಬಿಜೆಪಿ ಉತ್ತರ ಮಂಡಲದ ಅಧ್ಯಕ್ಷ ತಾರೇಶ್ ನಾಯ್ಕ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಶಿವನಗೌಡ ಟಿ. ಪಾಟೀಲ್, ಗುರು ಸೋಗಿ, ಟಿಂಕರ್ ಮಂಜಣ್ಣ, ತರಕಾರಿ, ಬಾಲಚಂದ್ರ ಶೆಟ್ಟಿ, ಶಿವು, ಶಂಕರಗೌಡ ಬಿರಾದರ, ಶಿವಾನಂದ, ಕಿಶೋರ್ ಕುಮಾರ್, ಬಸಣ್ಣ, ಕುಮಾರ್, ರಾಮಚಂದ್ರ, ಮಾಲತೇಶ್ ಗೋವಿಂದರಾಜ್ ಉಪಸ್ಥಿತರಿದ್ದರು.

ಕರಿಯರ್ ಮೇಳದಲ್ಲಿ ಶಾಸಕ ಬಿ.ಪಿ. ಹರೀಶ್

ಶಿಕ್ಷಣ ಉದ್ಯೋಗಕ್ಕೆ ಸೀಮಿತವಾಗದಿರಲಿ



ದಾವಣಗೆರೆ: ಶಿಕ್ಷಣವು ಕೇವಲ ಸರ್ಕಾರಿ ಉದ್ಯೋಗಕ್ಕಾಗಿ ಸೀಮಿತವಾಗಬಾರದು. ಸ್ವ-ಉದ್ಯೋಗ ಮತ್ತು ಕೌಶಲ್ಯಾಧಾರಿತ ಶಿಕ್ಷಣಕ್ಕೆ ಇಂದು ಹೆಚ್ಚಿನ ಮಹತ್ವವಿದೆ. ಎನ್‌ಎಸ್‌ಕ್ಯೂಎಫ್ ಮತ್ತು ಸ್ಕಿಲ್ ಇಂಡಿಯಾದಂತಹ ಯೋಜನೆಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು. ನಮ್ಮ ಕಾಲದಲ್ಲಿ ಇಂತಹ ಮಾರ್ಗದರ್ಶನ ಸಿಗುತ್ತಿರಲಿಲ್ಲ, ಇಂದಿನ ವಿದ್ಯಾರ್ಥಿಗಳು ನಿಜಕ್ಕೂ ಅದೃಷ್ಟವಂತರು ಎಂದು ಹರಿಹರ ಶಾಸಕ ಬಿ.ಪಿ. ಹರೀಶ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ನಡೆದ 2025-26ನೇ ಸಾಲಿನ ಪಿ.ಎಬಿ ಅನುಮೋದಿತ ಚಟುವಟಿಕೆಯಡಿ ಹಮ್ಮಿಕೊಂಡಿದ್ದ ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ಹಾಗೂ ಬೃಹತ್ ಕರಿಯರ್ ಮೇಳ ಉದ್ಘಾಟಿಸಿ ಮಾತನಾಡಿದರು.

ಧೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಕರಿಯರ್ ಮೇಳದ ಕೈಪಿಡಿಯನ್ನು ಬಿಡುಗಡೆಗೊಳಿಸಿ ಮಾತನಾಡಿ, ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣ ಮತ್ತು ಟಿವಿ ಮಾಧ್ಯಮಗಳಿಂದ ದೂರವಿದ್ದು ಆ ಸಮಯವನ್ನು ಜ್ಞಾನಾರ್ಜನೆಗೆ ಬಳಸಿಕೊಳ್ಳಬೇಕು. ಪೋಷಕರು ಮತ್ತು ಶಿಕ್ಷಕರ ಮಾರ್ಗದರ್ಶನದಂತೆ ನಡೆದು ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗಿತ್ತೆ ಮಾಧವ ವಿಠ್ಠಲ್ ರಾವ್ ಮಾತನಾಡಿ, ಬಡತನವು ಪ್ರತಿಭೆಗೆ ಅಡ್ಡಿಯಾಗದು ಮನಸ್ಸಿದ್ದರೆ ಮಾರ್ಗವಿದೆ. ಅಂಕ ಗಳಿಕೆಗಿಂತ ಅರ್ಥಪೂರ್ಣ ಕಲಿಕೆಗೆ ಆದ್ಯತೆ ನೀಡಿ ಎಂದು ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಿದರು.

ಅಲ್ಲದೆ, ಯುಪಿಎಸ್ಸಿ, ಕೆಪಿಎಸ್ಸಿ, ಐಐಟಿ, ಎನ್ ಐಟಿ ಸೇರಿದಂತೆ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದ ವಿವಿಧ ಆಯಾಮಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಮುಂಬರುವ ಜೂನ್ ತಿಂಗಳಿನಲ್ಲಿ ಎಸ್ ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಪಂಚಾಯತ್ ವತಿಯಿಂದಲೇ ಮತ್ತೊಂದು ಬೃಹತ್ ಕಾರ್ಯಕ್ರಮ ಆಯೋಜಿಸುವುದಾಗಿ ಭರವಸೆ ನೀಡಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೊಟ್ರೇಶ್ ಜಿ. ಅವರು ಸ್ವಾಗತಿಸಿದರು. ಡಯಟ್ ಪ್ರಾಂಶುಪಾಲೆ ಗೀತಾ ಎಸ್. ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿವಿಧ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಪೋಷಕರು ಹಾಗೂ ನೂರಾರು ವಿದ್ಯಾರ್ಥಿಗಳು ಈ ಮೇಳದ ಪ್ರಯೋಜನ ಪಡೆದುಕೊಂಡರು.

ಆರೋಗ್ಯ ತಪಾಸಣಾ ಶಿಬಿರದಲ್ಲಿ ವೈದ್ಯೆ ಡಾ. ಮೇಘಾ ಅಭಿಪ್ರಾಯ

ಸರ್ವಿಕಲ್ ಕ್ಯಾನ್ಸರ್ ಬಗ್ಗೆ ಜಾಗೃತಿ ಹೊಂದಿ

ದಾವಣಗೆರೆ: ಇಂದಿನ ಸಮಾಜದಲ್ಲಿ ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಸರ್ವಿಕಲ್ ಕ್ಯಾನ್ಸರ್ ಹಾಗೂ ಹೀಮೋಗ್ಲೋಬಿನ್ ಕೊರತೆ ಕುರಿತು ಯುವತಿಯರು ಆರಂಭ ದಲ್ಲಿಯೇ ಜಾಗೃತಿ ಹೊಂದುವುದು ಬಹಳ ಮುಖ್ಯ ವಾಗಿದೆ ಎಂದು ವೈದ್ಯೆ ಡಾ. ಮೇಘಾ ಅಭಿಪ್ರಾಯಪಟ್ಟರು.

ಅವರು ಶನಿವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ ಇಲ್ಲಿ ಯುವ ರೆಡ್ ಕ್ರಾಸ್ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ, ದಾವಣಗೆರೆ ಇವರ ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರಿಗಾಗಿ ಸರ್ವಿಕಲ್ ಕ್ಯಾನ್ಸರ್ ಜಾಗೃತಿ ಹಾಗೂ ಹೀಮೋಗ್ಲೋಬಿನ್ ಪರೀಕ್ಷೆಯ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರಲ್ಲಿ ಸರ್ವಿಕಲ್ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿ. ಸರಿಯಾದ ಆರೋಗ್ಯ ಕಾಳಜಿ, ಸಮಯೋಚಿತ ಪರೀಕ್ಷೆಗಳು ಹಾಗೂ ವೈದ್ಯಕೀಯ ಸಲಹೆಗಳನ್ನು ಅನುಸರಿಸುವ ಮೂಲಕ ಈ ರೋಗವನ್ನು ಆರಂಭದಲ್ಲಿಯೇ ಪತ್ತೆಹಚ್ಚಿ ನಿಯಂತ್ರಿಸಬಹುದು. ಯುವತಿಯರು ತಮ್ಮ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಇದೇ ವೇಳೆ ಮಾತನಾಡಿದ ಡಾ. ಉಪೇಂದ್ರ, ವಿದ್ಯಾರ್ಥಿನಿಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಹೀಮೋಗ್ಲೋಬಿನ್ ಕೊರತೆ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಸಮತೋಲನಯುತ ಆಹಾರ, ಹಸಿರು ಸೊಪ್ಪುಗಳು, ಕಾಳುಗಳು, ಹಣ್ಣುಗಳು ಹಾಗೂ ಕಬ್ಬಿಣಾಂಶಯುಕ್ತ ಆಹಾರವನ್ನು ಸೇವಿಸುವುದರಿಂದ ಹೀಮೋಗ್ಲೋಬಿನ್ ಮಟ್ಟವನ್ನು ಹೆಚ್ಚಿಸಬಹುದು. ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಅರಿವು ಹೊಂದಿ ಜೀವನಶೈಲಿಯಲ್ಲಿ ಉತ್ತಮ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಪ್ರೊ.ಬಸವರಾಜ ಸಿ. ತಹಶೀಲ್ದಾರ್, ಯುವ ರೆಡ್‌ಕ್ರಾಸ್ ಘಟಕದ ಸಂಯೋಜಕ ಡಾ. ಕೆ. ನಾಗೇಂದ್ರ ನಾಯ್ಕ, ಡಾ. ಮಾದನಾಯ್ಕ, ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕ ಪ್ರೊ. ಲೋಕೇಶ್ ನಾಯ್ಕ, ಪ್ರೊ. ಮಂಜುನಾಥ್, ಕೆ.ಎಂ. ಸ್ಮಿತಾ ಉಪಸ್ಥಿತರಿದ್ದರು.

ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ ಎಸ್. ಒಡೇನಪುರ

ನಾಳೆ ಸರ್ಕಾರಿ ಮಹಿಳಾ ನೌಕರರಿಗೆ ಕ್ರೀಡಾ ಸ್ಪರ್ಧೆ

ದಾವಣಗೆರೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಜಿಲ್ಲಾ ಮಹಿಳಾ ಸರ್ಕಾರಿ ನೌಕರರಿಗೆ ಮಾರ್ಚ್ 16ರಂದು ಕ್ರೀಡಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ವೀರೇಶ ಎಸ್. ಒಡೇನಪುರ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿನ ನಿಜಲಿಂಗಪ್ಪ ಬಡಾವಣೆಯಲ್ಲಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಅಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆಯಲಿರುವ ಕ್ರೀಡೆಯಲ್ಲಿ ಮಹಿಳಾ ನೌಕರರಿಗಾಗಿ ಲೆಮೆನ್ ಅಂಡ್ ಸ್ಪೂನ್, ಮ್ಯೂಸಿಕಲ್ ಛೇರ್, ಬಾಲ್ ಇನ್ ದ ಬಕೆಟ್, ಹಗ್ಗ ಜಗ್ಗಾಟ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಸೂಚನೆ ಮೇರೆಗೆ ಮಹಿಳಾ ದಿನಾಚರಣೆಯನ್ನು ಮಾರ್ಚ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಮಧ್ಯಾಹ್ನ 3ಕ್ಕೆ ನಡೆವ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ನೆರವೇರಿಸುವರು. ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಕರಾಸನೌ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞ ವೈದ್ಯೆ ಡಾ. ಶಾಂತಾ ಭಟ್, ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಮಮತ ಹೊಸಗೌಡರ ಇದ್ದರು. ಅಂದು ಖಾದಿ



ಮೇಳವನ್ನು ಕೂಡ ಹಮ್ಮಿಕೊಳ್ಳಲಾಗಿದೆ. ಕ್ರೀಡೆಗಳಲ್ಲಿ ಅಂದು ಭಾಗವಹಿಸುವ ಮಹಿಳಾ ನೌಕರರಿಗೆ ಜಿಲ್ಲಾಧಿಕಾರಿಗಳು ಓಓಡಿ ನೀಡಲಿದ್ದಾರೆ ಎಂದರು.

ವೈಯಕ್ತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಮಹಿಳಾ ನೌಕರರಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ, ಪಾರಿತೋಷಕ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ಗುಂಪು ಸ್ಪರ್ಧೆಗಳಲ್ಲಿ ವಿಜೇತರಿಗೆ ಪ್ರಥಮ ಬಹುಮಾನ ಮಾತ್ರ ನೀಡಲಾಗುವುದು. ವಿಶೇಷವಾಗಿ ಬಿ.ಎಡ್, ಡಿ.ಎಡ್ ಮಹಿಳಾ ಶಿಭಿರಾರ್ಥಿಗಳು ಕೂಡ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು. ವಿಜೇತರಿಗೆ ಪ್ರಥಮ 10 ಸಾವಿರ, ದ್ವಿತೀಯ 5 ಸಾವಿರ, ತೃತೀಯ 3 ಸಾವಿರ ಬಹುಮಾನ ಇರಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಖಜಾಂಚಿ ಬಿ.ಆರ್. ತಿಪ್ಪೇಸ್ವಾಮಿ, ರಾಜ್ಯ ಪರಿಷತ್ ಸದಸ್ಯ ಜಿ. ಓಬಳಪ್ಪ ಜಿಲ್ಲಾ ಕಾರ್ಯಾಧ್ಯಕ್ಷ ಆರ್. ತಿಪ್ಪೇಸ್ವಾಮಿ, ಆನಂದಪ್ಪ, ಅಂಜಿನಪ್ಪ, ತಿಪ್ಪೇಸ್ವಾಮಿ ಇದ್ದರು.

ನಾನು ಬಿಜೆಪಿ ಟಿಕೆಟ್ ಆಕಾಂಕ್ಷಿ: ನಸೀರ್

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ ಪಕ್ಷದಿಂದ ತಮಗೆ ಟಿಕೆಟ್ ನೀಡಬೇಕೆಂದು ಬಿಜೆಪಿ ಮುಖಂಡ ಡಾ. ನಸೀರ್ ಅಹಮದ್ ಬಿಜೆಪಿ ವರಿಷ್ಠರಲ್ಲಿ ಮನವಿ ಮಾಡಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಕಳೆದ ಐದು ವರ್ಷಗಳಿಂದ ಭಾರತೀಯ ಜನತಾ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ. ಪ್ರಸ್ತುತ ಕರ್ನಾಟಕ ರಾಜ್ಯ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನನಗೆ ಅವಕಾಶ ಸಿಕ್ಕರೆ ನಾನು ಚುನಾವಣೆಯಲ್ಲಿ ಗೆಲ್ಲುತ್ತೇನೆ ಎಂಬ ವಿಶ್ವಾಸ ನನಗಿದೆ. ಅದ್ದರಿಂದ ನನಗೆ ಟಿಕೆಟ್ ನೀಡಬೇಕೆಂದು ಮನವಿ ಮಾಡಿದರು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ, ನಾನು ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಯೋಜನಾ ಆಯೋಗದ ಸದಸ್ಯನಾಗಿ ಸೇವೆ ಸಲ್ಲಿಸಿದ್ದೇನೆ. ಸಿಂಡಿಕೇಟ್-ಕೆನರಾ ಬ್ಯಾಂಕಿನ ನಿರ್ದೇಶಕನಾಗಿಯೂ ಸೇವೆ ಸಲ್ಲಿಸಿದ್ದೇನೆ. ಅಲ್ಲಿ ನಾನು ನಿರ್ಗತಿಕರ ಉನ್ನತಿ ಮತ್ತು ಕಲ್ಯಾಣಕ್ಕಾಗಿ ಕೆಲಸ ಮಾಡಿದ್ದೇನೆ ಎಂದರು.

ಶಿಕ್ಷಣ ಮತ್ತು ಸಮಾಜ ಸೇವೆಗೆ ನನ್ನ ಕೊಡುಗೆಗಳನ್ನು ಗುರುತಿಸಿ, ಕರ್ನಾಟಕ ಸರ್ಕಾರ, ವಿಶ್ವವಿದ್ಯಾಲಯಗಳು, ಗೌರವಾನ್ವಿತ ಮಠಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ನಾನು ಪಡೆದಿದ್ದೇನೆ. ಮಧ್ಯ ಕರ್ನಾಟಕದ ಪ್ರಮುಖ ಮಠಗಳಲ್ಲೊಂದಾದ ದಾವಣಗೆರೆಯ ಶ್ರೀಮುರುಘ ರಾಜೇಂದ್ರ ವಿರಕ್ತ ಮಠದ ಮೊದಲ ಮುಸ್ಲಿಂ ಮಂಡಳಿ ಸದಸ್ಯನಾದ ಗೌರವವೂ ನನಗಿದೆ ಎಂದು ಮಾಹಿತಿ ನೀಡಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕರಾದ ಶಾಮನೂರು ಶಿವಶಂಕರಪ್ಪ ನಿಧನರಾಗಿದ್ದಾರೆ ಮತ್ತು ಯಾವುದೇ ಸಮಯದಲ್ಲಿ ಉಪಚುನಾವಣೆ ಘೋಷಣೆಯಾಗಬಹುದು. ಈ ಕ್ಷೇತ್ರದಲ್ಲಿ 75,000 ಕ್ಕೂ ಹೆಚ್ಚು ಮತದಾರರು ಮುಸ್ಲಿಂ ಸಮುದಾಯಕ್ಕೆ ಸೇರಿದವರು. ಲಿಂಗಾಯತ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರು ನನಗೆ ಬೆಂಬಲ ನೀಡುವ ಅಗತ್ಯವಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶಾಮೀರ್ ಆಲಂ ಖಾನ್, ಟಿಪ್ಪು ಸುಲ್ತಾನ್, ಎಕ್ಬಾಲ್ ಇತರರು ಇದ್ದರು.

ಅಲ್ಪಸಂಖ್ಯಾತರಿಗೆ ಅವಕಾಶ ನೀಡಿ: ಗೀತಾ ಮುರುಗೇಶ್

ದಾವಣಗೆರೆ: ದಿವಂಗತ ಡಾ. ಶಾಮನೂರು ಶಿವಶಂಕರಪ್ಪ ಅವರು ಕೊಟ್ಟ ಮಾತಿನಂತೆ ದಕ್ಷಿಣಕ್ಕೆ ಅಲ್ಪಸಂಖ್ಯಾತರಿಗೆ ಅವಕಾಶ ನೀಡುವಂತೆ ನಗರಸಭೆಯ ಮಾಜಿ ಸದಸ್ಯೆ ಶಾಮನೂರು ಗೀತಾ ಮುರುಗೇಶ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೆ ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಆ ಕ್ಷೇತ್ರದ ಶಾಸಕ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಅನೇಕ ಆಕಾಂಕ್ಷಿತ ಕಾರ್ಯಕರ್ತರು, ಮುಖಂಡರು ಮುಂದೆ ಬಂದಿದ್ದಾರೆ. ಆದರಲ್ಲೂ ಮುಸ್ಲಿಂ ಸಮುದಾಯದ ಅಲ್ಪಸಂಖ್ಯಾತರು ತಮ್ಮ ಅಪೇಕ್ಷೆಯನ್ನು ಮಾಧ್ಯಮಗಳ ಮೂಲಕ ವ್ಯಕ್ತಪಡಿಸುತ್ತಾ ಟಿಕೆಟ್‌ಗಾಗಿ ಪಕ್ಷದ ವರಿಷ್ಠರ ಗಮನ ಸೆಳೆಯುತ್ತಿರುವುದು ಕಂಡು ಬರುತ್ತಿದೆ. ಮುಸ್ಲಿಂ ಜನಾಂಗದ ಮತದಾರರೇ ಅತ್ಯಧಿಕ ಸಂಖ್ಯೆಯಲ್ಲಿ ಇರುವುದು ಹಾಗೂ ಅಭ್ಯರ್ಥಿಯ ಗೆಲುವಿಗೆ ಅವರ ಮತಗಳೇ ನಿರ್ಣಾಯಕ ಎನಿಸುವಂತಾಗಿದೆ ಎಂದು ಹೇಳಿದರು.

ಅಂತೆಯೇ ಹಿರಿಯ ರಾಜಕೀಯ ಧುರೀಣರಾಗಿದ್ದ ಶಾಮನೂರು ಶಿವಶಂಕರಪ್ಪನವರು ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ 4ರಿಂದ 5 ಬಾರಿ ಮುಸ್ಲಿಂ ಸಮುದಾಯದ ಮತಗಳಿಂದಲೇ ಶಾಸಕರಾಗಿ ಬಹುಮತದಿಂದ ಆಯ್ಕೆಗೊಂಡಿರುವುದು ಎಲ್ಲರಿಗೂ ತಿಳಿದ ವಿಚಾರ ಎಂದು ತಿಳಿಸಿದರು.

ಅಲ್ಪಸಂಖ್ಯಾತರ ಮೇಲಿದ್ದ ಪ್ರೀತಿ, ವಿಶ್ವಾಸಗಳಿಂದ ಹಾಗೂ ಅಲ್ಪಸಂಖ್ಯಾತರು ಶಿವಶಂಕರಪ್ಪನವರ ಮೇಲಿದ್ದ ಗೌರವದಿಂದಾಗಿ ನಿರಂತರ ಗೆಲುವನ್ನು ಸಾಧಿಸುತ್ತಾ ಬಂದಿದ್ದರು. ಕಳೆದೆರಡು ಚುನಾವಣೆಗಳಲ್ಲಿ ಇದು ನನ್ನ ಕೊನೆಯ ಚುನಾವಣೆ ಮುಂದಿನ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಅಭ್ಯರ್ಥಿಗೆ ಅವಕಾಶ ಮಾಡಿಕೊಡುವುದಾಗಿ ಆ ಸಮುದಾಯದವರೇ ಹೇಳುವಂತೆ ಕೊಟ್ಟ ಮಾತಿಗೆ ತಪ್ಪದೇ ನಡೆಯುವ ನಿಷ್ಠಾವಂತ ವ್ಯಕ್ತಿ ಎಸ್.ಎಸ್. ರವರು ಎನ್ನುವುದು ನನಗೆ ಮನವರಿಕೆಯಾಗಿದೆ ಎಂದು ಹೇಳಿದರು.

ಆದ್ದರಿಂದ ಎಸ್.ಎಸ್. ರವರ ಮಾತಿನಂತೆ ಅವರ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಅವರು ನಡೆಯುವರೆಂಬ ಆತ್ಮವಿಶ್ವಾಸ ನನಗಿದೆ. ಅದರಂತೆ ಎಸ್.ಎಸ್.ಎಂ. ರವರು ಅಲ್ಪಸಂಖ್ಯಾತರ ಋಣ ತೀರಿಸಲು ಅವರಲ್ಲಿ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಿ ತಂದೆ ಮಾತನ್ನು ಪೂರೈಸಲಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಮನೂರು ಮುರುಗೇಶ್ ಇದ್ದರು.

ಹೆಚ್ಚಿನ ಬೆಲೆಗೆ ಸಿಲಿಂಡರ್ ಮಾರಾಟ ಮಾಡಿದರೆ ಕ್ರಮ: ಬೇಳೂರು

ಸಾಗರ: ಎಸ್ಮಾ ಜಾರಿಯಿದ್ದು ಅಕ್ರಮವಾಗಿ ಗ್ಯಾಸ್ ಸಂಗ್ರಹಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುತ್ತದೆ ಎಂದು ಶಾಸಕ ಹಾಗೂ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ಗೋಪಾಲಕೃಷ್ಣ ಬೇಳೂರು ತಿಳಿಸಿದರು.

ಇಲ್ಲಿನ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಶನಿವಾರ ಅಡುಗೆ ಅನಿಲ ಸಮರ್ಪಕ ಪೂರೈಕೆ, ಕಾರ್ಗಲ್ ಭಾಗದಲ್ಲಿ ವ್ಯಾಪಿಸಿರುವ ವಾಂತಿಬೇಧಿ ಹಾಗೂ ಕೆಎಫ್‌ಡಿ ಕುರಿತು ಕರೆಯಲಾಗಿದ್ದ ಸಭೆಯಲ್ಲಿ ಮಾತನಾಡಿದರು.

ಸಾಗರದಲ್ಲಿ ಅಡುಗೆ ಅನಿಲ ಸದ್ಯ ಯಾವುದೇ ಕೊರತೆ ಇಲ್ಲ. ಸಾರ್ವಜನಿಕರು ಅನಗತ್ಯ ಗಾಬರಿಯಾಗಿ ಮುಂಗಡ ಬುಕ್ಕಿಂಗ್ ಮಾಡಿಕೊಳ್ಳಲು ಹೋಗಬೇಡಿ. 45 ದಿನಕ್ಕೊಂದು ಸಿಲೆಂಡರ್ ಗ್ಯಾಸ್ ಕಂಪನಿಗಳು ಪೂರೈಕೆ ಮಾಡುತ್ತವೆ. ಸದ್ಯ ಹೋಟೆಲ್ ಮತ್ತು ಕಲ್ಯಾಣ ಮಂಟಪಗಳಲ್ಲಿ ವಾಣಿಜ್ಯ ಅಡುಗೆ ಅನಿಲ ಕೊರತೆ ಬಗ್ಗೆ ಸಣ್ಣಪುಟ್ಟ ಚರ್ಚೆ ನಡೆಯುತ್ತಿದೆ. ಕಲ್ಯಾಣ ಮಂಟಪಗಳಲ್ಲಿ ಮದುವೆ ಹೆಚ್ಚು ಬುಕ್ ಆಗಿರುವುದರಿಂದ ಅಲ್ಲಿ ಯಾವುದೇ ರೀತಿ ಸಮಸ್ಯೆ ಆಗದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ತುರ್ತು ಇರುವ ಕಡೆಗಳಲ್ಲಿ ಹೋಟೆಲ್‌ಗಳಿಗೂ ವಾಣಿಜ್ಯ ಸಿಲೆಂಡರ್ ಪೂರೈಕೆ ಮಾಡಲಾಗುತ್ತದೆ ಎಂದರು.

ತಹಶೀಲ್ದಾರ್ ರಶ್ಮಿ ಹಾಲೇಶ್ ಮಾತನಾಡಿದರು. ಉಪವಿಭಾಗಾಧಿಕಾರಿ ವಿರೇಶ್ ಕುಮಾರ್, ಡಾ. ಶ್ರೀನಿವಾಸ್, ಡಾ. ಕಿರಣ್, ಡಾ. ನಾಗರಾಜ್, ಡಾ.ಹರ್ಷವರ್ಧನ್, ಟಿ.ಪಿ.ರಮೇಶ್, ಶ್ರೀನಿವಾಸ್ ಇದ್ದರು.

ವಿಚಾರ ಸಂಕಿರಣ ಉದ್ಘಾಟಿಸಿದ ಕುವೆಂಪು ವಿವಿ ಸಿಂಡಿಕೇಟ್ ಸದಸ್ಯ ಕೆ.ಪಿ. ಶ್ರೀಪಾಲ್

ಇಂದು ಎಲ್ಲೆಡೆ ಭ್ರಷ್ಟಾಚಾರವೇ ತುಂಬಿ ತುಳುಕುತ್ತಿದೆ

ಶಿವಮೊಗ್ಗ : ಅನ್ಯಾಯ, ಭ್ರಷ್ಟಚಾರ, ಶೋಷಣೆ ವಿರುದ್ಧ ಹೋರಾಟ ನಡೆಸಿದವರು ಶಾಂತವೇರಿ ಗೋಪಾಲಗೌಡರು ಎಂದು ವಕೀಲ ಹಾಗೂ ಕುವೆಂಪು ವಿವಿ ಸಿಂಡಿಕೇಟ್ ಸದಸ್ಯ ಕೆ.ಪಿ.ಶ್ರೀಪಾಲ್ ಹೇಳಿದರು.

ಸಹ್ಯಾದ್ರಿ ಕಲಾ ಕಾಲೇಜಿನ ಇತಿಹಾಸ ವಿಭಾಗ, ಕುವೆಂಪು ವಿವಿ ಇತಿಹಾಸ ಅಧ್ಯಾಪಕರ ಸಂಘದ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಶಾಂತವೇರಿ ಗೋಪಾಲಗೌಡರ ಜನ್ಮದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ನವ ವಸಾಹತು ಶಾಹಿ ಸಂದರ್ಭದಲ್ಲಿ ಚಳುವಳಿಗಳ ಪ್ರಸ್ತುತತೆ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಇಂದು ಭ್ರಷ್ಟಾಚಾರವೇ ಎಲ್ಲೆಡೆ ತುಂಬಿ ತುಳುಕುತ್ತಿದೆ. ಆದರ್ಶಗಳೆಲ್ಲವೂ ಸತ್ತು ಹೋಗಿವೆ. ಇಂತಹ ಸಂದರ್ಭದಲ್ಲಿ ಮತ್ತೆ ಮತ್ತೆ ಗೋಪಾಲಗೌಡರು ನೆನಪಾಗುತ್ತಾರೆ. ವ್ಯವಸ್ಥೆಗಳ ವಿರುದ್ಧ ಪ್ರತಿರೋಧ ವ್ಯಕ್ತಪಡಿಸುವುದೇ ಗೋಪಾಲಗೌಡರಿಗೆ ಸಲ್ಲಿಸುವ ಅಭಿನಂದನೆ ಎಂದರು.

ಇಡೀ ದೇಶದಲ್ಲಿಯೇ ಸಮಾಜವಾದ ಸಿದ್ಧಾಂತವನ್ನು ಪ್ರತಿಪಾದಿಸಿದವರು ಗೋಪಾಲಗೌಡರು. ಚಳುವಳಿಯ ಒಂದು



ಭಾಗವಾಗಿಯೇ ಅವರು ಹೊರ ಹೊಮ್ಮಿದವರು. ಹಣ ಖರ್ಚುಮಾಡದೆ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿ ಪ್ರಾಮಾಣಿಕತನ ಮೆರೆದವರು. ಯುವ ಪೀಳಿಗೆಗೆ ಅವರ ಆದರ್ಶ ತಿಳಿಸುವ ಅವಶ್ಯಕತೆ ಇಂದಿದೆ ಎಂದರು.

ಸಾಹಿತಿ ನೆಂಪೆ ದೇವರಾಜ್ ಮಾತನಾಡಿ, ನವ ವಸಾಹತುಶಾಹಿ ಧೋರಣೆ ಇಂದು ಜಗತ್ತಿನೆಲ್ಲೆಡೆ ವ್ಯಕ್ತವಾಗುತ್ತಿದೆ. ಪ್ರಬಲ ರಾಷ್ಟ್ರಗಳು ಸಣ್ಣ ಸಣ್ಣ ರಾಷ್ಟ್ರಗಳ ಮೇಲೆ ದಾಳಿ ನಡೆಸಲು ಹೊರಟಿವೆ. ಬಹುರಾಷ್ಟ್ರೀಯ ಕಂಪನಿಗಳು ಕೂಡ ನಮ್ಮಲ್ಲಿ ಚಳುವಳಿಯನ್ನು ಹತ್ತಿಕ್ಕಿದ್ದನ್ನು ನಾವು ಕಾಣುತ್ತೇವೆ. ಚಳುವಳಿಗಳೆಲ್ಲಾ ಇಂದು ಸತ್ತು ಹೋಗಿವೆ. ಅಥವಾ ದಾರಿ ತಪ್ಪಿವೆ. ರೈತ, ದಲಿತ, ಕಾರ್ಮಿಕ ಮುಂತಾದ ಅನೇಕ ಚಳುವಳಿಗಳು ಇಂದು ತನ್ನ ಸ್ವರೂಪವನ್ನೇ ಬದಲಾಯಿಸಿಬಿಟ್ಟಿವೆ ಎಂದರು.

ಗೋಪಾಲಗೌಡರು ಚಳುವಳಿಯ ಪಿತಾಮಹರಾಗಿದ್ದವರು. ಉಳುವವನೇ ಭೂಮಿ ಒಡೆಯ ಕಾನೂನು ಜಾರಿಯಾಗಲು ಅವರು ಪ್ರಮುಖ ಕಾರಣರಾಗಿದ್ದಾರೆ. ಈ ಕಾನೂನು ಜಾರಿಯಾದ ಮೇಲೆ ಇವರಿಗೆ ಒಂದು ಎಕರೆ ಜಮೀನು ಕೂಡ ಇರಲಿಲ್ಲ. ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರು ನಾಲ್ಕು ಎರಡು ಜಮೀನು ಮಂಜೂರು ಮಾಡುತ್ತೇವೆ ಎಂದು ಹೇಳಿಕಳಿಸಿದರೂ ಮೊದಲು ಜಮೀನು ರಹಿತರಿಗೆ ಮಂಜೂರು ಮಾಡಲಿ. ಉಳಿದರೆ ನಮಗೆ ನೀಡಲಿ ಎಂದು ಹೇಳಿದ ಆದರ್ಶ ವ್ಯಕ್ತಿ ಅವರು ಎಂದರು.

ವಿಚಾರ ಸಂಕಿರಣದ ಸಂಚಾಲಕ ಡಾ.ಕೆ. ಎನ್. ಮಂಜುನಾಥ್, ಪ್ರಾಚಾರ್ಯ ಪ್ರೊ.ಸಿರಾಜ್ ಅಹಮದ್ ಅಧ್ಯಕ್ಷತೆವಹಿಸಿದ್ದರು. ಪ್ರಮುಖರಾದ ಡಾ.ಎಸ್.ಸುಮಾ, ಡಾ.ಮಂಜುನಾಥ್‌ಸಕಲೇಶ್, ಡಾ.ಟಿ.ಮಂಜುನಾಥ್, ಡಾ.ರಂಗನಾಥ್ ರಾವ್ ಕರಾಡ್, ಡಾ.ಕೀರ್ತಿನಾಥ, ಡಾ.ಎಚ್.ಎಂ. ಶಂಭುಲಿಂಗಮೂರ್ತಿ, ಡಾ.ಹೆಚ್.ಪಿ. ಮಂಜುನಾಥ್ ಉಪಸ್ಥಿತರಿದ್ದರು. ನಂತರ ನಡೆದ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ನಿವೃತ್ತ ಪ್ರಾಧ್ಯಾಪಕ ಡಾ.ಕೆ. ಪ್ರಭಾಕರ ರಾವ್ ವಹಿಸಿದ್ದರು.

ಭ್ರಷ್ಟಾಚಾರ ಕುರಿತ ತನಿಖೆ ಆಗಿಲ್ಲ

ಕುವೆಂಪು ವಿವಿ ಸೇರಿದಂತೆ ಶೈಕ್ಷಣಿಕ ವಲಯದಲ್ಲಿಯೂ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ನಾನು ಸಿಂಡಿಕೇಟ್ ಸದಸ್ಯನಾದ ಮೇಲೆ ಹಲವು ಬಾರಿ ಈ ಹಿಂದೆ ನಡೆದ ವಿವಿಯ ಹಲವು ಇಲಾಖೆಗಳಿಗೆ ಸಂಬಂಧಿಸಿದ ಭ್ರಷ್ಟಾಚಾರ ಬಯಲಿಗೆಳೆಯಬೇಕು. ತನಿಖೆ ಮಾಡಬೇಕು ಎಂದರೂ ತನಿಖೆ ಆಗಿಲ್ಲ. ಭ್ರಷ್ಟಾಚಾರದ ವಿರುದ್ಧ ಮಾತನಾಡುವುದೇ ಇಂದು ಕಷ್ಟವಾಗುತ್ತಿದೆ ಎಂದು ಶ್ರೀಪಾಲ್ ಹೇಳಿದರು.

ಗುರುಗ್ರಾಮ್‌ನಲ್ಲಿ ನಡೆದ ಕೂಟ: ಮೊದಲೆರಡೂ ಸ್ಥಾನದಲ್ಲಿ ಕನ್ನಡತಿಯರು | ಗಮನ ಸೆಳೆದ ಸ್ನಿಗ್ಧ | ಸೋಲಲ್ಲಿ ಗೆದ್ದ ಪದ್ಮಪ್ರಿಯಾ

ಅಂತಾರಾಷ್ಟ್ರೀಯ ಜೂ. ಟೆನಿಸ್‌ನಲ್ಲಿ ಕನ್ನಡಿಗರದ್ದೇ ದರ್ಬಾರ್!

ಬೆಂಗಳೂರು: ಕರ್ನಾಟಕದ ಯುವ ಟೆನಿಸ್ ಆಟಗಾರ್ತಿ ಸ್ನಿಗ್ಧ ಕಾಂತಾ ಗುರುಗ್ರಾಮ್‌ನಲ್ಲಿ ಶನಿವಾರ ಮುಗಿದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಟ್ರೋಫಿ ಮುಡಿಗೇರಿಸಿಕೊಂಡರು. ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯನ್ನು ಗೆದ್ದು ಬೀಗಿದರು. ಫೈನಲ್‌ನಲ್ಲಿ ಅವರು ಮತ್ತೋರ್ವ ಕರ್ನಾಟಕ ಆಟಗಾರ್ತಿ ಪದ್ಮಪ್ರಿಯಾ ರಮೇಶ್ ಕುಮಾರ್ ಅವರನ್ನು 6-4, 6-4 ಅಂಕಗಳಿಂದ ಸೋಲಿಸಿದರು. ಇದರೊಂದಿಗೆ ಮೊದಲೆರಡೂ ಸ್ಥಾನಗಳನ್ನು ಕನ್ನಡಿಗರೇ ಗಳಿಸಿದ್ದು, ಟೆನಿಸ್ ಕರ್ನಾಟಕ ಪಾರುಪತ್ಯ ಮುಂದುವರಿದಂತಿದೆ. ಇಬ್ಬರ ರ್‍ಯಾಂಕಿಂಗ್‌ಗೂ ಬೂಸ್ಟರ್ ಕೊಟ ನೀಡಿದೆ.



ನಿಯಂತ್ರಿತ ಆಟಕ್ಕೆ ಸಿಕ್ಕ ಜಯ

ಎರಡನೇ ಶ್ರೇಯಾಂಕಿತ ಆಟಗಾರ್ತಿಯಾಗಿದ್ದ 16 ವರ್ಷದ ಸ್ನಿಗ್ಧ ಕಾಂತಾ, ಇಡೀ ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿ ಗೆಲುವಿನ ಫೇವರಿಟ್ ಆಗಿ ಮೆರೆದಿದ್ದರು. ಫೈನಲ್‌ನಲ್ಲಿ ಕೂಡ ನಿಯಂತ್ರಿತ ಆಟವಾಡಿದರು. ಎರಡು ಸೆಟ್‌ಗಳಲ್ಲೂ ಪ್ರಮುಖ ಅವಕಾಶಗಳನ್ನು ಬಳಸಿಕೊಂಡು ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಏಕ ಪಕ್ಷೀಯ ಗೆಲುವು ಸಾಧಿಸಿದರೂ ಅವರ ಪರಾಕ್ರಮ ಕೇವಲ ನಿರ್ಣಾಯಕ ಪಂದ್ಯಕ್ಕೆ ಸೀಮಿತವಾಗಿರಲಿಲ್ಲ. ಮೊದಲ ದಿನದಿಂದಲೂ ತಮ್ಮ ಅನುಭವದ ಜತೆಗೆ ನಿಯಂತ್ರಿತ ಪ್ರದರ್ಶನದೊಂದಿಗೆ ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕಿತ ಆಟಗಾರ್ತಿ ದೀಪಶಿಖಾ ವಿನಾಯಗಮೂರ್ತಿ ಅವರನ್ನು 6-2, 3-6, 6-4 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು.

ರ್‍ಯಾಂಕಿಂಗ್‌ನಲ್ಲಿ ವೃದ್ಧಿ

ಈ ಜಯದಿಂದ ಸ್ನಿಗ್ಧ ಕಾಂತಾ ಅವರ ಜೂನಿಯರ್ ಅಂತರರಾಷ್ಟ್ರೀಯ ಟೆನಿಸ್ ಅಭಿಯಾನಕ್ಕೆ ಮಹತ್ವದ ಶ್ರೇಯಾಂಕ ಅಂಕಗಳು ಲಭಿಸಿವೆ. ಈ ಹಂಗಾಮಿನಲ್ಲಿ ಅವರು ತಮ್ಮ ವೃತ್ತಿಜೀವನದ ಅತ್ಯುತ್ತಮ 448ನೇ ಶ್ರೇಯಾಂಕಕ್ಕೂ ಏರಿದ್ದಾರೆ. 2025ರ ಮಾರ್ಚ್‌ನಲ್ಲಿ ರಾಯ್ಪುರದಲ್ಲಿ ನಡೆದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲೂ ಗರ್ಲ್ಸ್ ಸಿಂಗಲ್ಸ್ ಪ್ರಶಸ್ತಿ ಗೆದ್ದು ಅವರು ಗಮನ ಸೆಳೆದಿದ್ದರು.

ಒಂದೂ ಸೆಟ್ ಸೋಲದೆ ಫೈನಲ್‌ಗೇರಿದ್ದ ಪದ್ಮಪ್ರಿಯಾ

ಇತ್ತ ರನ್ನರ್-ಅಪ್ ಆಗಿ ಹೊರಹೊಮ್ಮಿದ ಪದ್ಮಪ್ರಿಯಾ ರಮೇಶ್ ಕುಮಾರ್ ಕೂಡ ಕಮ್ಮಿಯೇನಿರಲಿಲ್ಲ. ಪಂದ್ಯಾವಳಿಯ ಪ್ರತಿಯೊಂದು ಪ್ರದರ್ಶನ ಅವರನ್ನು ಬಲಿಷ್ಠ ಆಟಗಾರ್ತಿ ಎಂಬುದನ್ನು ಸಾಬೀತುಪಡಿಸಿತು. ಗುರುಗ್ರಾಮ್ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಕೇವಲ 13 ವರ್ಷದ ಈ ಪ್ರತಿಭೆ ಫೈನಲ್‌ವರೆಗೆ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಬಂದಿದ್ದರು. ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಆಟಗಾರ್ತಿ ಪ್ರಿಶಾ ನಿಖಿಲ್ ಶಿಂಡೆ ಅವರನ್ನು 6-4, 6-1 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು. ಮೈಸೂರು ಮೂಲದ ಪದ್ಮಪ್ರಿಯಾ ಈಗಾಗಲೇ ಭಾರತದ ಯುವ ಟೆನಿಸ್ ಕ್ಷೇತ್ರದಲ್ಲಿ ಭರವಸೆಯ ಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ. ಅವರು ಹಲವು ವಾರಗಳ ಕಾಲ ಭಾರತದ 14 ವರ್ಷದೊಳಗಿನ ಮಹಿಳೆಯರ ಶ್ರೇಯಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದು, ರಾಷ್ಟ್ರೀಯ 16 ವರ್ಷದೊಳಗಿನ ಶ್ರೇಯಾಂಕದ ಮೊದಲ 100 ಆಟಗಾರರ ಪಟ್ಟಿಗೂ ಪ್ರವೇಶಿಸಿದ್ದಾರೆ. ಜೊತೆಗೆ ಏಷ್ಯಾ ಮಟ್ಟದ 14 ವರ್ಷದೊಳಗಿನ ಟೆನಿಸ್ ಸ್ಪರ್ಧೆಯಲ್ಲಿ ಪದಕ ಗೆದ್ದು ಅಂತಾರಾಷ್ಟ್ರೀಯ ಮಟ್ಟದಲ್ಲೂ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ.

ಸ್ನಿಗ್ಧ ಅವರಿಗೆ ಪ್ರಶಸ್ತಿ ಜಯಕ್ಕೆ ಅಭಿನಂದನೆಗಳು ಮತ್ತು ಪದ್ಮಪ್ರಿಯಾ ಅವರಿಗೆ ಫೈನಲ್ ಪ್ರವೇಶಿಸಿದಕ್ಕಾಗಿ ಅಭಿನಂದನೆಗಳು. ಅಂತಾರಾಷ್ಟ್ರೀಯ ಜೂನಿಯರ್ ಟೆನಿಸ್ ಸ್ಪರ್ಧೆಯಲ್ಲಿ ಮೊದಲೆರಡು ಸ್ಥಾನಗಳನ್ನು ಕರ್ನಾಟಕದವರೇ ಪಡೆದಿರುವುದು ರಾಜ್ಯ ಟೆನಿಸ್ ಬೆಳವಣಿಗೆಯ ಉತ್ತಮ ಸಂಕೇತವಾಗಿದೆ.

■ **ಸುನಿಲ್ ಯಾಜಮಾನ್,** ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಸಂಯುಕ್ತ ಕಾರ್ಯದರ್ಶಿ

▸▸ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಗಮನಸೆಳೆದ ಕನ್ನಡಿಗರು

ಕಿರುಸುದ್ದಿ

ದಿಲ್ಲಿ ಮೆಂಟರ್ ಪೀಟರ್ಸನ್ ರಾಜೀನಾಮೆ

ಹೊಸದಿಲ್ಲಿ: ಇಂಗ್ಲೆಂಡಿನ ಮಾಜಿ ಕ್ರಿಕೆಟಿಗ ಕೆವಿನ್ ಪೀಟರ್ಸನ್ ಅವರು, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸಿ ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಮಾರ್ಚ್ 28ರಿಂದ ಐಪಿಎಲ್ ಶುರುವಾಗಲಿದೆ. ಎಲ್ಲಾ ತಂಡಗಳು ತಯಾರಿ ನಡೆಸುತ್ತಿವೆ. ಆಟಗಾರರು ಹಂತ-ಹಂತವಾಗಿ ತಂಡಗಳನ್ನು ಸೇರಿಕೊಳ್ಳುತ್ತಿದ್ದಾರೆ. ಈ ಮಧ್ಯೆ, ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಆಗಿದ್ದ ಕೆವಿನ್ ಪೀಟರ್ಸನ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ವೊಂದರ ಮೂಲಕ ನಿರ್ಧಾರ ಪ್ರಕಟಿಸಿದ್ದಾರೆ. ನನಗೆ ಆ ಪೋಸ್ಟ್‌ನಲ್ಲಿ ಕೆಲಸ ಮಾಡುವುದಕ್ಕೆ ಸಮಯವಿಲ್ಲ, ಐಪಿಎಲ್‌ನಿಂದ ಹೊರಬೀಳಲಾರೆ, ದಿಲ್ಲಿ ಅಲ್ಲದೆ, ಭಾಗವಹಿಸುತ್ತಿರುವ ಎಲ್ಲಾ ಆಟಗಾರರೂ ಉತ್ತಮವಾಗಿ ಆಡಲಿ. ನಾನು ವೀಕ್ಷಣೆ ವಿವರಣೆಯಲ್ಲಿ ಎಲ್ಲರನ್ನೂ ಸಿಗುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಬಿನ್ನಿ, ದ್ರಾವಿಡ್, ಮಿಥಾಲಿಗೆ ಇಂದು ಪ್ರಶಸ್ತಿ

ಹೊಸದಿಲ್ಲಿ: ಕನ್ನಡಿಗರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಹಾಗೂ ಭಾರತ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಜೀವಮಾನ ಸಾಧನೆ ಪ್ರಶಸ್ತಿ ಭಾನುವಾರ ನಡೆಯಲಿರುವ ನಮನ್ ಕಾರ್ಯಕ್ರಮದಲ್ಲಿ ನೀಡಲಿದೆ. ಪ್ರತಿ ವರ್ಷವೂ ನಡೆಯುವ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಭಾನುವಾರದಂದು ದಿಲ್ಲಿಯಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡುತ್ತೇವೆ ಎಂದು ಬಿಸಿಸಿಐ ತಿಳಿಸಿದ್ದು, ಪ್ರಶಸ್ತಿ ವಿಜೇತರ ಪಟ್ಟಿ ಬಿಡುಗಡೆ ಮಾಡಿದೆ. ಭಾರತ ತಂಡದ ಮಾಜಿ ಕ್ರಿಕೆಟಿಗ, ತರಬೇತುದಾರರಾದ ರಾಹುಲ್ ದ್ರಾವಿಡ್ ಮತ್ತು ಮಾಜಿ ಕ್ರಿಕೆಟಿಗ ಹಾಗೂ ಮಾಜಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರಿಗೆ ಕರ್ನಲ್ ಸಿ. ಕೆ ನಾಯ್ಡು ಜೀವಮಾನ ಪ್ರಶಸ್ತಿ ನೀಡಿದರೆ, ಮಹಿಳಾ ಕ್ರಿಕೆಟ್‌ನ ದಿಗ್ಗಜ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪ್ರಧಾನ ತರಬೇತುದಾರ ಗೌತಂ ಗಂಭೀರ್ ಅವರು ಶನಿವಾರದಂದು ಮುಂಬೈನ ಶ್ರೀ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಭೇಟಿ ನೀಡಿ ಆಶೀರ್ವಾದ ಪಡೆದರು.

ಪ್ಯಾರಾ ಅಥ್ಲೆಟಿಕ್ಸ್: ದಾಖಲೆ ಸಂಖ್ಯೆಯ ಪದಕ ಗೆದ್ದ ಭಾರತೀಯರು

208 ಪದಕ ಬಾಚಿದ ಭಾರತ



ಪ್ರೀತಿ ಪಾಲ್‌ಗೆ ಚಿನ್ನದ ಪದಕ

ಪ್ರೀತಿ ಪಾಲ್ ವೇಗಕ್ಕೆ ಪದಕ

ಮೀರಟ್ ಮೂಲದ 25 ವರ್ಷದ ಪ್ರೀತಿ ಪಾಲ್ ಮಹಿಳೆಯರ 200 ಮೀಟರ್ (ಟಿ-35/ಟಿ37 ವರ್ಗ) ಓಟವನ್ನು 30.26 ಸೆಕೆಂಡುಗಳಲ್ಲಿ ಮುಗಿಸಿ ಚಿನ್ನ ಗೆದ್ದರು. ರಷ್ಯಾದ ಕರೀನಾ ಮಚುಲ್ಸ್ಕಾಯಾ 32.22 ಸೆಕೆಂಡುಗಳಲ್ಲಿ ಬೆಳ್ಳಿ ಪದಕ ಪಡೆದುಕೊಂಡರೆ, ಭಾರತದ ಬಿನಾ ಶಂಭುಭಾ 32.35 ಸೆಕೆಂಡುಗಳಲ್ಲಿ ಕಂಚು ಗೆದ್ದರು. ಇದಕ್ಕೂ ಮುನ್ನ ಪ್ರೀತಿ ಪಾಲ್ ಮಹಿಳೆಯರ 100 ಮೀಟರ್ ಸ್ಪರ್ಧೆಯಲ್ಲೂ ಚಿನ್ನದ ಪದಕ ಗೆದ್ದಿದ್ದರು. ಗೆಲುವಿನ ಬಗ್ಗೆ ಮಾತನಾಡುತ್ತಾ ಅವರು, ನಾನು ಗುರಿ ಇಟ್ಟಿದ್ದ ಸಮಯವನ್ನು ಕೇವಲ ಅಲ್ಪ ಅಂತರದಲ್ಲಿ ತಪ್ಪಿಸಿಕೊಂಡಿದ್ದೇನೆ. ನನ್ನ ವೈಯಕ್ತಿಕ ಅತ್ಯುತ್ತಮ ಸಮಯ 30.03 ಸೆಕೆಂಡುಗಳು. ಅಭ್ಯಾಸದಲ್ಲಿ ಈಗಾಗಲೇ 29.6 ಸೆಕೆಂಡುಗಳು ಓಡಿದ್ದೇನೆ. ಅಂತಿಮ ಹಂತದಲ್ಲಿ ದಣಿವು ಕಾಣಿಸುತ್ತಿದೆ, ಅದನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇನೆ ಎಂದು ಪ್ರೀತಿ ಹೇಳಿದರು.

ಹೊಸದಿಲ್ಲಿ: ಸತತ ಎರಡು ದಿನಗಳ ಮಟ್ಟಿಗೆ ಕೂಟದಲ್ಲಿ ಅಸಾಮಾನ್ಯ ಪ್ರದರ್ಶನ ನೀಡಿರುವ ಭಾರತದ ಪ್ಯಾರಾ ಅಥ್ಲೀಟ್‌ಗಳು ಮುಕ್ತಾಯಗೊಂಡ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿ ಸ್ಪರ್ಧೆಯಲ್ಲಿ ಬರೋಬ್ಬರಿ 208 ಪದಕ ಬಾಚಿಕೊಂಡರು.

ಪ್ಯಾರಿಸ್ 2024 ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಅಥ್ಲೀಟ್ ಪ್ರೀತಿ ಪಾಲ್ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿ ಸ್ಪರ್ಧೆಯಲ್ಲಿ ಮತ್ತೊಮ್ಮೆ ಅದ್ಭುತ ಪ್ರದರ್ಶನ ನೀಡಿದರು. ಮಹಿಳೆಯರ 200 ಮೀಟರ್ ಓಟದಲ್ಲಿ ಅವರು ಅಸಾಧಾರಣ ವೇಗದೊಂದಿಗೆ ಗೆಲುವು ಸಾಧಿಸಿ ಭಾರತಕ್ಕೆ ಮತ್ತೊಂದು ಚಿನ್ನದ ಪದಕ ತಂದರು.

ಈ ಗೆಲುವಿನ ನಂತರ ಸ್ಪರ್ಧೆಯಲ್ಲಿ ಭಾರತ ಭರ್ಜರಿ ಪ್ರಾಬಲ್ಯ ತೋರಿತು. ಒಟ್ಟು 208 ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸಿತು. ಇದರಲ್ಲಿ 75 ಚಿನ್ನ, 69 ಬೆಳ್ಳಿ ಮತ್ತು 64 ಕಂಚು ಪದಕಗಳು ಸೇರಿವೆ. ಕಡಿಮೆ ದೇಶಗಳು ಭಾಗವಹಿಸಿದ್ದರೂ ಭಾರತವು ಸಂಪೂರ್ಣ ಮೇಲುಗೈ ಸಾಧಿಸಿತು.

ಪುರುಷರ ಶಾಟ್‌ಪುಟ್‌ನಲ್ಲಿ ಭಾರತೀಯರಾಟ:

ಪುರುಷರ ಶಾಟ್‌ಪುಟ್ 57 ವರ್ಗದಲ್ಲಿ ಭಾರತ ಮೂರುಪದಕಗಳನ್ನುಗೆದ್ದಿತು. ಶುಭಮ್‌ಜುಯಾಲ್ 14.45 ಮೀಟರ್ ತೂರಾಟದೊಂದಿಗೆ ಚಿನ್ನ, ಭಗತ್ ಸಿಂಗ್ 13.29 ಮೀಟರ್ ತೂರಾಟದೊಂದಿಗೆ ಬೆಳ್ಳಿ ಹಾಗೂ ಪ್ರಿಯಾಂಶ್ ಕುಮಾರ್ 13.07 ಮೀಟರ್ ತೂರಾಟದೊಂದಿಗೆ ಕಂಚು ಪಡೆದರು.

ಓಟದಲ್ಲಿ: ಪುರುಷರ 200 ಮೀಟರ್ (35 ವರ್ಗ) ಓಟದಲ್ಲಿ ವಿನಯ 28.18 ಸೆಕೆಂಡುಗಳಲ್ಲಿ ಚಿನ್ನ ಗೆದ್ದರು. ಅನುಭವ್ ಚೌಧರಿ 29.49 ಸೆಕೆಂಡುಗಳಲ್ಲಿ ಬೆಳ್ಳಿ ಪಡೆದರೆ, ಹಾಂಗ್ ಕಾಂಗ್‌ನ ಚುಯಿ ಯಿಯು ಬಾವೋ ಕಂಚು ಗೆದ್ದರು. ಇನ್ನು 200 ಮೀಟರ್ (ಟಿ-37/ಟಿ44 ವರ್ಗ) ಓಟದಲ್ಲೂ ಭಾರತ ಮೂರು ಪದಕಗಳನ್ನು ಗೆದ್ದಿತು. ರಾಕೇಶ್ ಭಾಯ್ ಭಟ್ 25.20 ಸೆಕೆಂಡುಗಳಲ್ಲಿ ಚಿನ್ನ, ಸಿದ್ಧಾರ್ಥ ಮಂಜು ಬೆಳ್ಳಾರಿ 28.23 ಸೆಕೆಂಡುಗಳಲ್ಲಿ ಬೆಳ್ಳಿ ಹಾಗೂ ರವಿಕಿರಣ ಆಸರೆಲ್ಲಿ 31.50 ಸೆಕೆಂಡುಗಳಲ್ಲಿ ಕಂಚು ಪಡೆದರು. ಪುರುಷರ 800 ಮೀಟರ್ (ಟಿ53/ಟಿ54 ವರ್ಗ) ಸ್ಪರ್ಧೆಯಲ್ಲೂ ಭಾರತ ಸಂಪೂರ್ಣ ಮೇಲುಗೈ ಸಾಧಿಸಿತು. ಮನೋಜ್ ಕುಮಾರ್ ಸಬಾಪತಿ 1:57.41 ಸಮಯದಲ್ಲಿ ಚಿನ್ನ ಗೆದ್ದರು. ಮಣಿಕಂದನ್ ಜೋತಿ 2:11.14 ಸಮಯದಲ್ಲಿ ಬೆಳ್ಳಿ ಹಾಗೂ ಕಮಲಕಾಂತ ನಾಯಕ 2:20.83 ಸಮಯದಲ್ಲಿ ಕಂಚು ಪಡೆದರು.

ಹಾಕಿ: ಫೈನಲ್‌ನಲ್ಲಿ ಭಾರತ ಪರಾಭವ



ಹೈದರಾಬಾದ್: ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ಮಹಿಳೆಯರ ವಿಶ್ವಕಪ್‌ನಲ್ಲಿ ಅರ್ಹತೆ ಗಿಟ್ಟಿಸಿಕೊಂಡ ನಂತರ ಫೈನಲ್ ಪಂದ್ಯದಲ್ಲಿ ಭಾರತ ಇಂಗ್ಲೆಂಡ್ ವಿರುದ್ಧ ಪರಾಭವಗೊಂಡಿತು.

ದೀರ್ಘಕಾಲದ ಪೈಪೋಟಿಯಲ್ಲಿ ಮಿಂಚಿದರೂ ಎದುರಾಳಿಗಳ ಕಮಾಲ್ ಮುಂದೆ ಭಾರತ ಕೂಟದಲ್ಲೇ ಮೊದಲ ಪಂದ್ಯ ಸೋತಿತು. ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಅಚ್ಚಳಿಯದ ಪ್ರದರ್ಶನ ನೀಡಿದ್ದ ಭಾರತ ಕೊನೆಯ ಪಂದ್ಯದಲ್ಲಿ ಸಿಕ್ಕ ಐದೂ ಅವಕಾಶಗಳನ್ನು ಕಳೆದುಕೊಂಡ ನಂತರ ಇಂಗ್ಲೆಂಡ್ 2-0ರಿಂದ ಪಂದ್ಯವನ್ನು ಗೆದ್ದು ಅರ್ಹತಾ ಸುತ್ತಿನ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು. ಶನಿವಾರದ ಪಂದ್ಯದಲ್ಲಿ ಆರಂಭ ದಿಂದಲೂ ಉಭಯ ತಂಡಗಳು ಸಮಯೋಚಿತ ಆಟವಾಡಿದವು. ಪಂದ್ಯದ 23ನೇ ಸೆಕೆಂಡಿನಲ್ಲೇ ಎದುರಾಳಿ ಆಟಗಾರ್ತಿ ಥಾಂಪ್ಸನ್ ಹಸಿರು ಕಾರ್ಡ್ ಪಡೆದರು. 1.12 ನೇ ನಿಮಿಷದಲ್ಲೇ ಪೆನಾಲ್ಟಿ ಕಾರ್ನರ್ ಪಡೆದ ಭಾರತ ಗೋಲು ಗಳಿಸಲಿಲ್ಲ, ಡಿಫೆನ್ಸ್‌ನಲ್ಲಿ ಮಿಂಚಿದ ಇಂಗ್ಲೆಂಡ್ 12.51 ನೇ ನಿಮಿಷದಲ್ಲಿ ಗೋಲು ದಾಖಲಿಸಿ ಮುನ್ನಡೆ ಪಡೆದುಕೊಂಡಿತು. ಗ್ರೇಸ್ ಖಾತೆ ತೆರೆದರು. ಎರಡನೇ ಕ್ವಾರ್ಟರ್ ಆರಂಭದಲ್ಲೇ ಮತ್ತೊಮ್ಮೆ ಒತ್ತಡ ಹೇರಿದ ಭಾರತ 22.51ನೇ ನಿಮಿಷದ ವೇಳೆ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡಿತು. ಆದಾಗ್ಯೂ ಖಾಲಿ ಕೈಯಲ್ಲೇ ಆಟ ಮುಂದುವರಿಸಿತು. 35ನೇ ನಿಮಿಷದಲ್ಲಿ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡರೂ ಗೋಲು ಗಳಿಸಲಿಲ್ಲ ಭಾರತ. ಮೂರನೇ ಕ್ವಾರ್ಟರ್‌ಗೂ ಮುನ್ನ ಇಂಗ್ಲೆಂಡ್ ಗೋಲಿನ ಅಂತರ 2ಕ್ಕೆ ಹಿಗ್ಗಿಸಿಕೊಂಡಿತು. 43ನೇ ನಿಮಿಷದಲ್ಲಿ ನೀಲ್ ಎಲ್ಜಿಬೆತ್ ಗೋಲು ಬಾರಿಸಿ ಭಾರತೀಯರ ಮೇಲೆ ಭಾರೀ ಒತ್ತಡ ಹಾಕಿದರು. 59ನೇ ನಿಮಿಷದ ವೇಳೆ ಗೋಲು ಪೆನಾಲ್ಟಿ ಕಾರ್ನರ್ ಪಡೆದರೂ ಭಾರತ ಯಾವುದೇ ಗೋಲು ಗಳಿಸದೆ, ಖಾಲಿ ಕೈಯಲ್ಲೇ ಪಂದ್ಯ ಮುಗಿಸಿತು.

▸▸ ವಿಶ್ವಕಪ್ ಅರ್ಹತಾ ಸುತ್ತು

▸▸ ಇಂಗ್ಲೆಂಡ್‌ಗೆ 2-0ರ ಗೆಲುವು

ಫುಟ್ಬಾಲ್: ಜೂ. ತಂಡಕ್ಕೆ 2ನೇ ಜಯ

ಹೊಸದಿಲ್ಲಿ: ಮ್ಯಾನ್ಮಾರ್‌ನ ತುವುನ್ನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎರಡನೇ ಅಂತಾರಾಷ್ಟ್ರೀಯ ಸ್ನೇಹಪೂರ್ಣ ಪಂದ್ಯದಲ್ಲಿ ಭಾರತದ 17 ವರ್ಷದೊಳಗಿನ ಮಹಿಳಾ ಫುಟ್ಬಾಲ್ ತಂಡ ರೋಚಕ ಹೋರಾಟದಲ್ಲಿ ಮ್ಯಾನ್ಮಾರ್ ತಂಡವನ್ನು 3-2 ಗೋಲುಗಳಿಂದ ಸೋಲಿಸಿ ಗಮನಸೆಳೆದಿದೆ. ಪಂದ್ಯ ಅಂತಿಮ ಕ್ಷಣಗಳಲ್ಲಿ ತಿರುವು ಪಡೆದಿದ್ದು, ಬದಲಾಯಿತ ಆಟಗಾರ್ತಿಯರ ಗೋಲುಗಳಿಂದ ಭಾರತ ಅದ್ಭುತ ಗೆಲುವು ದಾಖಲಿಸಿತು.

ಮೊದಲಾರ್ಧದಲ್ಲಿಮ್ಯಾನ್ಮಾರ್ ಉತ್ತಮ ಆರಂಭ ಕಂಡಿತು. 12ನೇ ನಿಮಿಷದಲ್ಲಿ ಹ್ನಿನ್ ವಿಂಟ್ ವಾರ ಕ್ಯಾಂಗ್ ಗೋಲು ಗಳಿಸಿ ಆತಿಥೇಯರಿಗೆ ಮುನ್ನಡೆ ತಂದರು. ಭಾರತ ತಂಡ 33ನೇ ನಿಮಿಷದಲ್ಲಿ ಅಲ್ವಾ ದೇವಿ ಸೆಂಜಾಮ್ ಅವರ ಗೋಲಿನ ಮೂಲಕ ಸಮಬಲ ಸಾಧಿಸಿತು. ರೆಡಿಮಾ ದೇವಿ ನೀಡಿದ ನಿಖರ ಪಾಸ್ ಅನ್ನು ನಿಯಂತ್ರಿಸಿಕೊಂಡ ಅಲ್ವಾ ದೇವಿ ಎಡ ಕಾಲಿನಿಂದ ಬಲಿಷ್ಠ ಶಾಟ್ ಹೊಡೆದು ಗೋಲು ದಾಖಲಿಸಿದರು. ಇದು 15 ವರ್ಷದ ಅಲ್ವಾ ದೇವಿ ಅವರ ಮೊದಲ ಯುವ ಅಂತಾರಾಷ್ಟ್ರೀಯ ಗೋಲಾಗಿದೆ.

ಆದರೆ ಮೊದಲಾರ್ಧದ ಅಂತ್ಯದ ಕ್ಷಣದಲ್ಲಿ ಮ್ಯಾನ್ಮಾರ್ ಮತ್ತೆ ಮುನ್ನಡೆ ಪಡೆದಿತು. 45ನೇ ನಿಮಿಷದಲ್ಲಿ ಸೌಂಗ್ ತಾಜಿನ್ ಊ ನೀಡಿದ ಕಾರ್ನರ್ ಕಿಕ್ ಅನ್ನು ಮಿನ್ ಹ್ಟೋನ್ ಮೇ ಜಿಟಾರ್ ತಲೆಯಿಂದ ಜಾಲದಲ್ಲಿ ಸೇರಿಸಿದರು. ಇದರಿಂದ ವಿರಾಮದ ವೇಳೆಗೆ ಮ್ಯಾನ್ಮಾರ್ 2-1 ಮುನ್ನಡೆ ಹೊಂದಿತ್ತು.



ಎರಡನೇ ಕ್ವಾರ್ಟರ್: ಎರಡನೇ ಕ್ವಾರ್ಟರ್‌ನಲ್ಲಿ ಎರಡು ತಂಡಗಳ ಮಧ್ಯೆ ಕಠಿಣ ಪೈಪೋಟಿ ನಡೆಯಿತು. ಮಧ್ಯಮೈದಾನದಲ್ಲಿ ಹೋರಾಟ ಹೆಚ್ಚಾಗಿದ್ದು, ಸ್ಪಷ್ಟ ಅವಕಾಶಗಳು ಕಡಿಮೆಯಾದವು. ಆದರೆ ಅಂತಿಮ ಕ್ಷಣಗಳಲ್ಲಿ ಭಾರತ ಪಂದ್ಯವನ್ನು ತಿರುಗಿಸಿತು. 88ನೇ ನಿಮಿಷದಲ್ಲಿ ಬದಲಾಯಿತ ಆಟಗಾರ್ತಿ ಅನುಷ್ಕಾಕುಮಾರಿ ಸಮಬಲದ ಗೋಲು ದಾಖಲಿಸಿದರು. ಸಹ ಆಟಗಾರ್ತಿ ಬೋನಿಫಿಲಿಯಾ ಶುಲ್ಲೈ ನೀಡಿದ ಪಾಸ್ ಅನ್ನು ಪಡೆದುಕೊಂಡ ಅನುಷ್ಕಾ ಸುಮಾರು 25 ಗಜ ದೂರದಿಂದ ಹೊಡೆದ ಶಾಟ್ ನೇರವಾಗಿ ಜಾಲ ಸೇರಿತು.

ಇದರಿಂದ ಉತ್ಸಾಹಗೊಂಡ ಭಾರತ ಕೊನೆಯ ಕ್ಷಣದಲ್ಲಿ ಜಯದ ಗೋಲು ದಾಖಲಿಸಿತು. ಹೆಚ್ಚುವರಿ ಸಮಯದ 91ನೇ ನಿಮಿಷದಲ್ಲಿ ಎಲಿಜಬೆತ್ ಲಕ್ರಾ ದೂರದಿಂದ ಚೆಂಡು ಕಳುಹಿಸಿದರು. ಮ್ಯಾನ್ಮಾರ್ ರಕ್ಷಣಾ ಆಟಗಾರ್ತಿ ಪಿನ್ ಮ್ಯಿಂಟ್ ಯಾನ್ ತಲೆ ಹೊಡೆತದಲ್ಲಿ ತಪ್ಪು ಮಾಡಿದ ಪರಿಣಾಮ ಚೆಂಡು ಜೋಯಾ ಕೈಗೆ ಸಿಕ್ಕಿತು. ಅವಕಾಶವನ್ನು ಬಳಸಿಕೊಂಡ ಜೋಯಾ ಎಡ ಕಾಲಿನಿಂದ ಚೆಂಡನ್ನು ಜಾಲದಲ್ಲಿ ಸೇರಿಸಿ ಭಾರತಕ್ಕೆ 3-2 ಗೆಲುವು ತಂದುಕೊಟ್ಟರು.

ಈ ಪಂದ್ಯ ಮುಂದಿನ ಮೇ 1ರಿಂದ 17ರವರೆಗೆ ಚೀನಾದ ಸುಝೌ ನಗರದಲ್ಲಿ ನಡೆಯಲಿರುವ ಏಷ್ಯಾ ಮಟ್ಟದ 17 ವರ್ಷದೊಳಗಿನ ಮಹಿಳಾ ಕಪ್ ಫುಟ್ಬಾಲ್ ಟೂರ್ನಿಗೆ ಭಾರತ ತಂಡದ ಸಿದ್ಧತೆಯ ಭಾಗವಾಗಿತ್ತು. ಗುರುವಾರ ನಡೆದ ಮೊದಲ ಸ್ನೇಹಪೂರ್ಣ ಪಂದ್ಯದಲ್ಲೂ ಭಾರತ 2-0 ಗೋಲುಗಳಿಂದ ಜಯ ಸಾಧಿಸಿತ್ತು

ಪಿಎಸ್‌ಎಲ್ ತ್ಯಜಿಸಿ ಐಪಿಎಲ್‌ಗೆ ಬ್ಲೆಸ್ಸಿಂಗ್?

ಹೊಸದಿಲ್ಲಿ: ಪಾಕಿಸ್ತಾನ, ಬಾಂಗ್ಲಾದೇಶ ಆಟಗಾರರನ್ನು ಬಿಸಿಸಿಐ ದಿಕ್ಕರಿಸಿದಂತೆ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯನ್ನು ಸಲೀಸಾಗಿ ದಿಕ್ಕರಿಸಿದ ಜಿಂಬಾಬ್ವೆ ವೇಗಿ ಬ್ಲೆಸ್ಸಿಂಗ್ ಮಝುರ್ಬಾನಿ ಶೀಘ್ರದಲ್ಲೇ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಸೇರಿಕೊಳ್ಳಲಿದ್ದಾರೆ.



ಬಾಂಗ್ಲಾದೇಶ ಆಟಗಾರ ಮುಸ್ತಾಫಿಜುರ್ ರೆಹಮಾನ್ ಖರೀದಿಸಿದ್ದಕ್ಕಾಗಿ ಕೆಕೆಆರ್ ತಂಡ ಭಾರೀ ಹಿನ್ನಡೆ ಅನುಭವಿಸಿತ್ತು. ಸಂಘಟನೆಗಳ ತೀವ್ರ ಪ್ರತಿಭಟನೆ ಬೆನ್ನಲ್ಲೇ ಬಿಸಿಸಿಐ ಪಾಕ್ ಆಟಗಾರರಂತೆ ಬಾಂಗ್ಲಾದವರಿಗೂ ಗೇಟ್‌ಪಾಸ್ ನೀಡಿತ್ತು. ಕೆಕೆಆರ್ ತಂಡದಿಂದ ರೆಹಮಾನ್ ಹೊರಬಿದ್ದಿದ್ದರು. ಈ ನಿಟ್ಟಿನಲ್ಲಿ ಅವರ ಬದಲಿ ಆಟಗಾರರಾಗಿ ಕೆಕೆಆರ್‌ನಿಂದ ಬುಲಾವ್ ಬಂದಿದ್ದು, ಪಿಎಸ್‌ಎಲ್‌ನ ಇಸ್ಲಾಮಾಬಾದ್ ಯುನೈಟೆಡ್ ತಂಡಕ್ಕೆ ಆಯ್ಕೆಯಾಗಿದ್ದ ಅವರು ಆಡದಿರಲು ಹೇಳಿದ್ದಾರೆ ಎಂದು ಕ್ರಿಕ್ ಇನ್ಫೋ ವರದಿ ಮಾಡಿದೆ. ಈ ಹಿಂದೆ ಕೂಡ ಪಿಎಸ್ ಎಲ್ ತಂಡಕ್ಕೆ ಆಯ್ಕೆಯಾಗಿದ್ದ ಬ್ಲೆಸ್ಸಿಂಗ್ ಈ ಬಾರಿ ಅಲ್ಲೂ ಕೂಡ ಅನ್‌ಸೋಲ್ಡ್ ಆಗಿದ್ದರು. ಆದರೆ ಇಸ್ಲಾಮಾಬಾದ್ ನೇರ ಖರೀದಿ ಮಾಡಿತ್ತು. 26ರಿಂದ ಶುರುವಾಗಲಿರುವ ಈ ಕೂಟಕ್ಕೂ ಮುನ್ನವೇ ಬ್ಲೆಸ್ಸಿಂಗ್ ಫ್ರಾಂಚೈಸಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಬಾಕ್ಸಿಂಗ್: ಫೈನಲ್‌ಗೇರಿದ ನಾಲ್ವರು

ಬ್ಯಾಂಕಾಕ್: ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಫ್ಯೂಚರ್ ಕಪ್ ಸ್ಪರ್ಧೆಯಲ್ಲಿ ಭಾರತದ ಬಾಕ್ಸರ್‌ಗಳು ಶನಿವಾರ ನಡೆದ ಸೆಮಿಫೈನಲ್ ಪೈಪೋಟಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ನಾಲ್ವರು ಆಟಗಾರರು ಅಂತಿಮ ಸುತ್ತಿಗೆ ಪ್ರವೇಶಿಸಿದ್ದಾರೆ.

ಚಂದ್ರಿಕಾ, ಗುಂಜನ್, ಜಾಯ್‌ಶ್ರೀ ದೇವಿ ಮತ್ತು ಅಂಬೇಕರ್ ಮೀತೈ ತಮ್ಮ ತಮ್ಮ ವಿಭಾಗಗಳಲ್ಲಿ ವಿಶ್ವಾಸಾರ್ಹ ಜಯಗಳಿಸಿ ಪದಕದತ್ತ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ. ಮಹಿಳೆಯರ 51 ಕೆಜಿ ವಿಭಾಗದಲ್ಲಿ ಚಂದ್ರಿಕಾ ಅದ್ಭುತ ಪ್ರದರ್ಶನ ನೀಡಿ ಮೊರಾಕ್ಕೊದ ರಿಹಾಬ್ ಹಮ್ದೌನ್ ವಿರುದ್ಧ ಎರಡನೇ ಸುತ್ತಿನಲ್ಲಿ ನಿರ್ಣಾಯಕ ಜಯ ಸಾಧಿಸಿದರು. ರೆಫರಿ ಸ್ಪರ್ಧೆಯನ್ನು ನಿಲ್ಲಿಸಿದ ಪರಿಣಾಮ ಚಂದ್ರಿಕಾ ಸುಲಭವಾಗಿ ಅಂತಿಮ ಸುತ್ತಿಗೆ ಪ್ರವೇಶಿಸಿದರು.

ಮಹಿಳೆಯರ 48 ಕೆಜಿ ವಿಭಾಗದಲ್ಲಿ ಗುಂಜನ್ ಉತ್ತರ ಕೊರಿಯಾದ ಯು ಗ್ಯೊಂಗ್ ಕಿಮ್ ವಿರುದ್ಧ 50 ಏಕಮತ ತೀರ್ಪಿನ ಮೂಲಕ ಗೆಲುವು ಸಾಧಿಸಿದರು. ಆರಂಭದಿಂದಲೇ ದಿಟ್ಟವಾಗಿ ಹೋರಾಡಿದ ಗುಂಜನ್ ಸ್ಪರ್ಧೆಯಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿ ಅಂತಿಮ ಸುತ್ತಿನ ಟಿಕೆಟ್ ಪಡೆದುಕೊಂಡರು.




ಮಹಿಳೆಯರ 54 ಕೆಜಿ ವಿಭಾಗದಲ್ಲಿ ಜಾಯ್ ಶ್ರೀ ದೇವಿ ಮತ್ತೊಂದು ಪ್ರಭಾವಿ ಪ್ರದರ್ಶನ ನೀಡಿದರು. ಮೆಕ್ಸಿಕೊದ ಸೋಫಿಯಾ ರಾಮಿರೆಜ್ ವಿರುದ್ಧ ನಡೆದ ಅರ್ಧ ಅಂತಿಮ ಪೈಪೋಟಿಯಲ್ಲಿ ಅವರು ಮೊದಲನೇ ಸುತ್ತಿನಲ್ಲೇ ರೆಫರಿ ಸ್ಪರ್ಧೆಯನ್ನು ನಿಲ್ಲಿಸುವಂತೆ ಮಾಡಿದರು. ಇದರಿಂದ ಜಾಯ್‌ಶ್ರೀ ದೇವಿ ಸುಲಭವಾಗಿ ಅಂತಿಮ ಹಂತಕ್ಕೆ ಮುನ್ನಡೆದರು.

ಪುರುಷರಲ್ಲಿ: ಪುರುಷರ 50 ಕೆಜಿ ವಿಭಾಗದಲ್ಲಿ ಅಂಬೇಕರ್ ಮೀತೈ ಉಜ್ಬೇಕಿಸ್ತಾನದ ಅಬ್ದುಗನಿ ಯಾರ್ಕಿಂಜೊನೊವ್ ವಿರುದ್ಧ 50 ಏಕಮತ ತೀರ್ಪಿನಿಂದ ಜಯಗಳಿಸಿ ಅಂತಿಮ ಸುತ್ತಿಗೆ ಪ್ರವೇಶಿಸಿದರು. ಉತ್ತಮ ತಂತ್ರ ಮತ್ತು ವೇಗದ ಮೂಲಕ ಅವರು ಪೈಪೋಟಿಯನ್ನು ಸಂಪೂರ್ಣ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರು. ಇನ್ನೊಂದೆಡೆ ಮಹಿಳೆಯರ 57 ಕೆಜಿ ವಿಭಾಗದಲ್ಲಿ ರಾಧಾಮಣಿ ಲಾಂಗ್ಜಾಮ್ ಕಠಿಣ ಪೈಪೋಟಿ ನಡೆಸಿದರೂ ಅಂತಿಮವಾಗಿ ಸೋಲು ಅನುಭವಿಸಿದರು. ಉಕ್ರೇನ್‌ನ ಯೆವಾಂಹೆಲಿನಾ ಪೆತ್ರುಕ್ ವಿರುದ್ಧ ನಡೆದ ಪಂದ್ಯದಲ್ಲಿ ಅವರು 2-3 ಅಂತರದಲ್ಲಿ ಸೋತರು. ಇದರಿಂದ ರಾಧಾಮಣಿ ಕಂಚಿನ ಪದಕದೊಂದಿಗೆ ತಮ್ಮ ಅಭಿಯಾನವನ್ನು ಮುಗಿಸಿದರು.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5924

ಎಡದಿಂದ ಬಲಕ್ಕೆ

2.ಮನಸಿನಿಂದ ಮಾಡಿದ ವಂದನೆ (3)
5.ಬಗೆ-ರೀತಿಗಳಿಲ್ಲಿ ತಿರುಗಿವೆ (2)
7.ದಕ್ಷವ್ಯಕ್ತಿಯ ಕರದಲ್ಲಿರುವ ಪಗಡೆಯ ದಾಳ (2)
8.ತರವಲ್ಲ ಎಂದದ್ದು ಈ ತಂತಿವಾದ್ಯದ ಸ್ವರವನ್ನು (3)
9.ಹದಗೊಳಿಸುವಿಕೆ-ಸ್ವಚ್ಛಗೊಳಿಸುವಿಕೆ (3)
10.ಮಾವನ ಪಕ್ಕದಲ್ಲಿ ಕಂಡ ಕುಳ್ಳವ್ಯಕ್ತಿ (3)
12.ಆಸಕ್ತಿಯಿಲ್ಲದಿರುವಿಕೆ-ಬೇಜಾರು (3)
13. ಇದು ಮನಸ್ಸಿನ ವ್ಯಥೆ-ವಿಷಾದ (2)
14.ಖರೀದಿಸಲು ಬೇಕಾದ ಮಾಧ್ಯಮ ತಿರುಗಿದೆ (2)
16.ಹೊಳೆಯುವ ಗಟ್ಟಿ ಬೆಲೆಬಾಳುವ ಕಲ್ಲು (3)

ಮೇಲಿನಿಂದ ಕೆಳಕ್ಕೆ

1.ಕೋಪದಿಂದ ವಿವೇಕ ಕಳೆದುಕೊಂಡವನು (3)
2.ಪ್ರಹ್ಲಾದನನ್ನು ರಕ್ಷಿಸಿದ ವಿಷ್ಣುವಿನ ರೂಪ (4)
3.ಒಂಬತ್ತು ಬಗೆಯ ಆಕಾಶ ಕಾಯಗಳು (4)
4.ಮುಂದೆ-ಎದುರುಗಡೆಯಿದು (3)
6.ಇದು ತರ್ಕವಿಲ್ಲದ ಚರ್ಚೆ (5)
7.ಇತರರು ಹೇಳಿದಂತೆ ನುಡಿಯುವುದು (5)
11.ಮಾರುತಿಯಿಲ್ಲಿ ತಲೆಕೆಳಗಾಗಿದ್ದಾನೆ (4)
12.ರೋಗಕ್ಕೆ ತುತ್ತಾಗು-ಕಾಯಿಲೆ ಬರು (4)
13.ಆಕಾಶದಲ್ಲಿ ಸಂಚರಿಸುವಂಥಾದ್ದು (3)
15.ಮರ-ಲೋಹದ ತೆಳುವಾದ ಸೀಳು (3)

5923 ಉತ್ತರ

ಎಡದಿಂದ ಬಲಕ್ಕೆ:

2.ಮನಸು 5.ಜ್ಞಾನಪೀಠ
6.ಮದಕರಿ 7.ಗಾಯ
8.ದಯ 10.ತಿದಿ
12.ದುಂಬಿ 13.ಆಚಮನ
15.ಹಾಡುಗಾರ
16.ದಿರಸು

ಮೇಲಿನಿಂದ ಕೆಳಕ್ಕೆ:

1.ಅನನ್ವಯ 2.ಮಠ
3.ಸುಮ 4.ಮಕರಂದ
7.ಗಾಣತಿ 9.ಬಿಳಿಯ
11.ದಿನಚರಿ
12.ದುಂದುಗಾರ 14.ನದಿ
15.ಹಾಸು

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.